
Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ–19 | ಸಂಚಿಕೆ–30 | ಜುಲೈ 21–27, 2025 | ಪುಟ 16 | ರೂ.10
Volume-19 | Issue-30 | July 21-27, 2025 | Pages:16 | Price: 10/-



ದೇವನಹಳ್ಳಿ ಭೂಸ್ವಾಧೀನ ಕೈಬಿಟ್ಟ ಸರ್ಕಾರ

ಐಕ್ಯ ಹೋರಾಟಕ್ಕೆ ಸಂದ ಜಯ

ಚುನಾವಣಾ ಪ್ರಜಾಪ್ರಭುತ್ವದ ಭವಿಷ್ಯದ ಮೇಲೆ ಕರಾಳ ಮೋಡಗಳು



ಧರ್ಮಸ್ಥಳ ಅಸಹಜ ಸಾವುಗಳು : ಸತ್ಯವನ್ನು ಬಯಲಿಗೆಳೆಯಬೇಕು

ಭೂ ಸ್ವಾಧೀನದ ವಿರುದ್ಧ ಧೀರ, ಧೀರ್ಘ ಹೋರಾಟ ವಿಜಯಿಯಾಗಿದೆ. ರೈತರು ತಲೆತಲಾಂತರದಿಂದ ದುಡಿದು ಜನರಿಗೆ ಆಹಾರ ಬೆಳೆದು ಕೊಡುತ್ತಿರುವ ಭೂಮಿಯನ್ನು ಸ್ವಾಧೀನಮಾಡಲು ಪ್ರಯತ್ನಿಸಿದ್ದು ವಿಫಲವಾಗಿದೆ. ಇದು ಇಡೀ ರಾಜ್ಯದ, ದೇಶದ ರೈತರಿಗೆ ಸ್ಫೂರ್ತಿಯಾಗಲಿ. ಇಂತಹ ಧೀರ ಹೋರಾಟದ ಸಂದರ್ಭದಲ್ಲಿ ಜಗತ್ತಿಗೇ ಮೊದಲನೆಯದಾದ ಒಂದು ಮಾದರಿ ಭೂ ಹೋರಾಟದ ಚಿತ್ರಣ ಈ ಲೇಖನದಲ್ಲಿ, ಇಂಗ್ಲೆಂಡಿನ ಪ್ರಜಾಪ್ರಭುತ್ವ ಕ್ರಾಂತಿಯ ಸಂದರ್ಭದಲ್ಲಿ, ಪ್ರಜಾಪ್ರಭುತ್ವದ ಮೂಲಭೂತ ಹಕ್ಕುಗಳನ್ನು ಪಡೆದುಕೊಳ್ಳಲು ಭೂಹೀನರು ನಡೆಸಿದ ಹೋರಾಟ ಮತ್ತು ಮಂಡಿಸಿದ ಅಪೂರ್ವ ವಿಚಾರಗಳು ನಿಮ್ಮ ಮುಂದೆ.



ಜೆ.ಎನ್ ಕಾಲಂ

ಭಾಗ 33

ಜಗತ್ತಿನ ಇತಿಹಾಸದಲ್ಲಿ ಕಮ್ಯೂನಿಸ್ಟ್ ಚಿಂತನೆಯ ಮೊದಲ ಬೀಜಗಳು

"ಬಡವರೇ ಭೂಮಿಯ ವಾರಸುದಾರರು ಭೂಮಿ ಯಾರೊಬ್ಬರ ಆಸ್ತಿಯೂ ಅಲ್ಲ'


"ಪ್ರತಿಯೊಬ್ಬರೂ ಹುಟ್ಟಿನಿಂದ ಒಂದೇ ರೀತಿಯ ಅವಕಾಶ ಉಳ್ಳವರು. ಆದ್ದರಿಂದ ಎಲ್ಲ ಸಂಪನ್ಮೂಲಗಳನ್ನು ಒಬ್ಬರಿಗಿಂತ ಮತ್ತೊಬ್ಬರಿಗೆ ಹೆಚ್ಚು ಎನ್ನುವಂತೆ, ಯಾರೊಬ್ಬರ ಆಸ್ತಿಯಾಗದಂತೆ ಅನುಭವಿಸಬೇಕಾಗಿದೆ. ಅಂದರೆ ಯಾರೊಬ್ಬರೂ ತಮ್ಮದೇ ಮನುಷ್ಯ ಸಮಾಜದ ಮೇಲೆ ಮತ್ತೊಬ್ಬರ ಮೇಲೆ ಅಧಿಕಾರ ಚಲಾಯಿಸುವುದು, ಪಾಳೆಯಗಾರಿಕೆ ಮಾಡುವುದು ಎಂಬ ಪ್ರಶ್ನೆಯಿಲ್ಲ."

"ಎಲ್ಲರೂ ಸಮಾನರೆಂಬ ಸಾರ್ವತ್ರಿಕ ನಿಯಮ ಪ್ರತಿ ಪುರುಷ ಮತ್ತು ಮಹಿಳೆಯರ ಮನಸ್ಸಿನಲ್ಲಿಯೂ ಮೇಲೆದ್ದರೆ, ಯಾರೊಬ್ಬರೂ ಸೃಷ್ಟಿಯ ಯಾವುದೊಂದನ್ನೂ ಯಾರೂ ಇದು ನನ್ನದು, ಅದು ನಿನ್ನದು ಎಂದು ಸಾಧಿಸಲಾಗದು. ಪ್ರತಿಯೊಬ್ಬರೂ ಜೊತೆ ಸೇರಿ ಒಟ್ಟಾಗಿ ಭೂಮಿಯ ಸಾಗುವಳಿ ಮಾಡಬೇಕು. ಒಟ್ಟಾಗಿ ಪಶು ಸಂಗೋಪನೆ ಮಾಡಬೇಕು. ಅವಶ್ಯಕತೆ ಬಂದಾಗ ಉಗ್ರಾಣದಿಂದ ಧಾನ್ಯವನ್ನು ತೆಗೆದುಕೊಳ್ಳಬಹುದು."

ಈ ವಿಚಾರಗಳು ನಮಗೆ ಇಂದು ಸಾಮಾನ್ಯ ಎನಿಸಬಹುದು. ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರು ಕಮ್ಯುನಿಸ್ಟ್ ವಿಚಾರಗಳನ್ನು ಮಂಡಿಸುವ ಇನ್ನೂರು ವರ್ಷಗಳ ಮೊದಲು, ವೈಜ್ಞಾನಿಕ ಕ್ರಾಂತಿ, ಕೈಗಾರಿಕಾ ಕ್ರಾಂತಿ ಸಂಭವಿಸುವ ನೂರು ವರ್ಷ ಮೊದಲು ಈ ಬಗ್ಗೆ ಯೋಚಿಸಲಾಗಿದೆ, ಜನರ ಮುಂದೆ ಮಂಡಿಸಲಾಗಿದೆ ಎಂಬುದು ಜಗತ್ತಿನ ಇತಿಹಾಸದಲ್ಲಿಯೇ ಅತ್ಯಂತ ಮಹತ್ವದ್ದು.

ಈ ಕ್ರಾಂತಿಕಾರಿ ವಿಚಾರಗಳನ್ನು ಮಂಡಿಸಿದ್ದು ಲೆವಲರ್ಸ್ ವಿಚಾರಧಾರೆ ಮತ್ತು ಸಂಘಟನೆಯ ನಡುವಿನಿಂದ ರೂಪುಗೊಂಡಿದ್ದ ಡಿಗ್ಗರ್ಸ್. ಲೆವಲರ್ಸ್‌ಗಳು ಮುಖ್ಯವಾಗಿ ಪ್ರಜಾಪ್ರಭುತ್ವ ಸ್ಥಾಪನೆಯ ಬಗ್ಗೆ ಪ್ರಧಾನ ಗಮನ ನೀಡಿದರು. ತಮ್ಮ ಅಗ್ರಿಮೆಂಟ್ ಆಫ್ ಪೀಪಲ್‌ನಲ್ಲಿ ಬಂಡವಾಳಶಾಹಿ ಶ್ರೀಮಂತರು ವಶಪಡಿಸಿಕೊಂಡ ಊರೊಟ್ಟಿನ ಭೂಮಿಯನ್ನು ಮರಳಿಸುವ ಬಗ್ಗೆ, ತೆರಿಗೆ ಹೊರೆಯ ಬಗ್ಗೆ ಪ್ರಸ್ತಾಪಿಸಲಾಗಿದೆ. ಆದರೆ ಭೂಮಿಯ ಒಟ್ಟಾರೆ ಒಡೆತನ, ಜಹಗೀರು ಇತ್ಯಾದಿಗಳ ಬಗ್ಗೆ ಅಲ್ಲ.

ಲೆವಲರ್ಸ್‌ಗಳ ಮುಖ್ಯ ಧಾರೆ ಹೆಚ್ಚಾಗಿ ರೈತರಿಂದ, ಸ್ವತಂತ್ರ ಸಾಗುವಳಿ ಮಾಡುತ್ತಿದ್ದ ರೈತರಿಂದ ಕೂಡಿತ್ತು. ಇದು ಬಹಳ ಸ್ಪಷ್ಟವಾಗಿ ಮತದಾನದ ಹಕ್ಕಿನ ವಿಷಯದಲ್ಲಿ ಎದ್ದು ಕಂಡಿತು. 21 ವಯಸ್ಸಿಗಿಂತ ಮೇಲ್ಪಟ್ಟ ಎಲ್ಲರಿಗೂ ಸಾರ್ವತ್ರಿಕ ಮತದಾನವನ್ನು ಪ್ರತಿಪಾದಿಸುತ್ತಿದ್ದರೂ ಅದರಲ್ಲಿ ಭೂಹಿನರು, ಜೀತಗಾರರನ್ನು ಕೈಬಿಟ್ಟಿದ್ದರು. ಗ್ರಾಂಡಿ ಭೂಮಾಲಕರ ಜೊತೆ ಸಾಂವಿಧಾನಿಕ ಚರ್ಚೆ ನಡೆಸುವಾಗ ಅವರು ಎತ್ತಿದ ಪ್ರಶ್ನೆಯೇ ಆಸ್ತಿಯ ಒಡೆತನದ ಪ್ರಶ್ನೆ. ಇಂಗ್ಲೆಂಡಿನ ಭೂಮಿಯ ಒಡೆತನ, ಮನೆ ಮತ್ತಿತರ ನಗರ ಆಸ್ತಿ ಇದ್ದವರಿಗೆ ಮಾತ್ರ ದೇಶದ ವಿಚಾರಗಳಲ್ಲಿ ಹಿತಾಸಕ್ತಿ ಇರುತ್ತದೆ, ಅವರಿಗೆ ಮಾತ್ರ ಮತದಾನದ ಹಕ್ಕು ಎಂದು ಒತ್ತಡ ಹಾಕಿದಾಗ ಲೆವಲರ್ಸ್‌ಗಳು ಮಣಿದರು. ಗೇಣಿದಾರ ರೈತರನ್ನೂ ಮತದಾನದ ಹಕ್ಕಿನಿಂದ ಹೊರಗಿಡಲು ಒಪ್ಪಿದರು. ಇದು ಅವರು ಭೂಮಿಯನ್ನು ಸ್ವತಂತ್ರವಾಗಿ ಸಾಗುವಳಿ ಮಾಡುತ್ತಿದ್ದ ರೈತರ ಹಿತಾಸಕ್ತಿಯನ್ನು ಲೆವಲರ್ಸ್‌ಗಳು ಬಿಂಬಿಸಿದರು. ಅವರ ನಡುವೆಯೇ ಇದ್ದ ಭೂಹೀನರು, ಗೇಣಿದಾರ ರೈತ ವರ್ಗದವರು ಲೆವಲರ್ಸ್‌ಗಳ ವಿಚಾರದಿಂದ ಸ್ಫೂರ್ತಿ ಪಡೆದರು. ಹಲವೆಡೆ ಬಂಡವಾಳಶಾಹಿ ಭೂಮಾಲಕರು, ಜಹಗೀರುದಾರರು ಆಕ್ರಮಿಸಿಕೊಂಡಿದ್ದ ಊರೊಟ್ಟಿನ ಭೂಮಿಯಲ್ಲಿ ಕಂದಕಗಳನ್ನು ತೋಡಿ, ಎತ್ತರದ ಬೇಲಿ ಹಾಕಿದ್ದರಲ್ಲ, ಅದನ್ನೆಲ್ಲ ಅಗೆದು ಕಿತ್ತು ಹಾಕಿದರು. ಮರಳಿ ಊರೊಟ್ಟಿನ ಭೂಮಿಯಾಗಿ ಉಳಿಸಿಕೊಳ್ಳಲು ಪ್ರಯತ್ನಿಸಿದರು. ಇವರಿಗೆ ಡಿಗ್ಗರ್ಸ್ ಎಂದು ಹೆಸರಾಯಿತು. ಹಲವು ಕಡೆ ಇವರನ್ನು ಲೆವಲರ್ಸ್ – ಡಿಗ್ಗರ್ಸ್ ಎಂದೂ ಕರೆಯುತ್ತಿದ್ದರು. ಲೆವಲರ್ಸ್‌ಗಳ ಹಲವು ವಿಚಾರಗಳನ್ನು ಅಂಗೀಕರಿಸಿದರು. ಅಷ್ಟೇ ಅಲ್ಲ ಅವರು ಲೆವಲರ್ಸ್‌ಗಳ ವಿಚಾರಗಳಿಗಿಂತ ಮುಂದೆ ಹೋದರು. ತಮ್ಮನ್ನು ನ್ಯೂ ಲೆವಲರ್ಸ್ ಎಂದೂ ಕರೆದುಕೊಂಡರು.



ಡಿಗ್ಗರ್ಸ್‌ಗಳ ಗೆರ್ರಾರ್ಡ್ ವಿನ್‌ಸ್ಟಾನ್ಸ್‌ಲೆ ಲೆವಲರ್ಸ್‌ಗಳ ನಾಯಕರಂತೆಯೇ ಕರಪತ್ರ, ಕಿರುಪುಸ್ತಿಕೆಗಳನ್ನು ಬರೆದು ಪ್ರಕಟಿಸಲಾರಂಭಿಸಿದ. ಅವು ಇಂಗ್ಲೆಂಡಿನ ಅತ್ಯಂತ ಕೆಳ ವರ್ಗದವರಾಗಿದ್ದ ಕೂಲಿಕಾರರು, ಜೀತಗಾರರ ನಡುವೆ ಬಹಳ ಜನಪ್ರಿಯವಾದವು. ಈ ಕಿರುಪುಸ್ತಿಕೆಗಳಲ್ಲಿ ಡಿಗ್ಗರ್ಸ್‌ಗಳ ಚಿಂತನೆ ಮೇಲೆ ಉಲ್ಲೇಖಗೊಂಡಂತೆ ಮನುಷ್ಯರೆಲ್ಲ ಹುಟ್ಟಿನಿಂದ ಸಮಾನರು, ಭೂಮಿ ಮತ್ತೆಲ್ಲ ಪ್ರಾಕೃತಿಕ ಸಂಪತ್ತು ಯಾರ ಸ್ವಂತ ಆಸ್ತಿಯಲ್ಲ. ಅವೆಲ್ಲ ಎಲ್ಲರ ಆಸ್ತಿ ಎಂದು ಪ್ರತಿಪಾದಿಸಿದರು.

ಈ ಚಿಂತನೆಯ ಆಧಾರವಾಗಿ ಅವರು ತತ್ವಶಾಸ್ತ್ರದ ಒಂದು ಮಹತ್ವದ ತತ್ವವನ್ನು ಪ್ರತಿಪಾದಿಸಿದರು. ದೇವರು, ಧಾರ್ಮಿಕ ಸಂಸ್ಥೆಗಳು, ಧಾರ್ಮಿಕ ನಿರೂಪಗಳು, ಕಟ್ಟಲೆಗಳು, ರಾಜನ ಆಜ್ಞೆ ಮೊದಲಾದವನ್ನೇ ಪರಮಾಧಿಕಾರ ಎಂದು ಭಾವಿಸಿದ್ದ ಯುಗದಲ್ಲಿ ಅವರು "ವಿವೇಚನೆ, ಯುಕ್ತಾಯುಕ್ತ ಪರಿಜ್ಞಾನ (ರೀಸನ್) ಮನುಷ್ಯನನ್ನು ಆಳಲಿ. ಅವನು ತನ್ನ ಸಹಜೀವಿಗಳ ಹಕ್ಕನ್ನು ಮೀರಲಾರ. ತಾನು ಇತರರ ಜೊತೆ ಯಾವ ರೀತಿ ವರ್ತಿಸುತ್ತಾನೋ ಅದೇ ಅವನಿಗೂ ಸಲ್ಲುತ್ತದೆ."

ವಿವೇಚನೆಯ ಪಾತ್ರ ಅಷ್ಟೇ ಅಲ್ಲ. ವಿನ್‌ಸ್ಟನ್‌ಲೇಯ ಪ್ರಕಾರ, "ವಿವೇಚನೆಯೇ ಸೃಷ್ಟಿಯನ್ನು ಆಳುವುದರಿಂದ ಈ ನೆಲದಲ್ಲಿ ಹುಟ್ಟಿದ ಎಲ್ಲರಿಗೂ ಅವರಿಗೆ ಜನ್ಮ ನೀಡಿದ ಭೂಮಿತಾಯಿಯೇ ಉಣಿಸನ್ನು ಒದಗಿಸಬೇಕು." ಹೀಗೆ ಹಲವು ಶತಮಾನಗಳ ನಂತರ ಪ್ರಚಲಿತವಾದ ಸಕಾರಣ ವಿವೇಚನೆಯ ಯುಗ (ಏಜ್ ಆಫ್ ರೀಸನ್) ಎಂದು ಪ್ರಸಿದ್ಧವಾದ ಕಾಲಘಟ್ಟದ ಚಿಂತನಧಾರೆಯ ಮೊದಲ ಮೊಳಕೆಯನ್ನು ಇಲ್ಲಿ ಕಾಣಬಹುದು.

ಹೀಗೆ ಎಲ್ಲರೂ ಸಮಾನರು, ಭೂಮಿಯ ಮೇಲೆ ಸಮಾನ ಹಕ್ಕುಳ್ಳವರು, ಅದೇ ಪ್ರಕೃತಿಯ ಸಕಾರಣ ವಿವೇಚನೆಯ ನಿರ್ದೇಶ ಎಂದು ಅವರು ಭಾವಿಸಿದರು. ಆದರೆ ಇಂಗ್ಲೆಂಡಿನ ವಾಸ್ತವ ಇದಕ್ಕೆ ತದ್ವಿರುದ್ಧವಾಗಿತ್ತು. ಅವರೇ ಹೇಳಿದಂತೆ "ಇಂಗ್ಲೆಂಡಿನ ಬಡಜನರ ಹಕ್ಕುಗಳು ಈ ನೆಲದ ಮೇಲಿನ ಗಾಳಿಯನ್ನು ಉಸಿರಾಡುವುದಕ್ಕಷ್ಟೇ ಸೀಮಿತವಾಗಿದೆ."

"ಈ ಭೂಮಿಯ ಮೇಲಿನ, ಮಾನವ ಸಮುದಾಯದ ಧೂಳು ಎಂದು ಕಾಲಕೆಳಗೆ ತುಳಿಯಲ್ಪಟ್ಟ ಅತ್ಯಂತ ಕೆಳಮಟ್ಟದ, ಅಸಹ್ಯವೆಂದು ಪರಿಗಣಿಸಲ್ಪಟ್ಟ ಜನರನ್ನು ದೇವರು ಎದ್ದೇಳುವಂತೆ ಮಾಡುತ್ತಿದ್ದಾನೆ. ಈ ಜನರಿಂದ, ಇವರಿಂದಲೇ ನ್ಯಾಯಪರತೆಯ ನಿಯಮಗಳು ಮೊದಲು ಮೇಲೆದ್ದು ಬರುತ್ತವೆ." ಎಂದು ಡಿಗ್ಗರ್ಸ್ ಪ್ರತಿಪಾದಿಸಿದರು.

ಹಿಂದಿನ ಲೇಖನಗಳಲ್ಲಿ ವಿವರಿಸಿರುವಂತೆ, ಇನ್ನೂ ಆಗ ತಾನೇ ರಾಜ ಪ್ರಭುತ್ವವನ್ನು ಕಿತ್ತೊಗೆಯುತ್ತಿರುವ ಸಂದರ್ಭದಲ್ಲಿಯೇ, ಸಾಮಂತರು ಮಾಂಡಲಿಕರು ಸಣ್ಣ ಭೂಮಾಲಕರೂ, ಸ್ವತಂತ್ರ ರೈತರೂ ಕೂಡಾ ಅಧಿಕಾರದ ಅಂಗಳಕ್ಕೆ ಪ್ರವೇಶ ಪಡೆಯಲು ದೊಡ್ಡ ಸಂಘರ್ಷ ನಡೆಸಬೇಕಾದ ಸಂದರ್ಭದಲ್ಲಿ ಈ ವಿಚಾರಗಳನ್ನು ರೂಪಿಸಿಕೊಂಡಿದ್ದಾರೆ ಮತ್ತು ಪ್ರತಿಪಾದಿಸಿದ್ದಾರೆ ಎಂಬುದು ಬಹಳ ವಿಶೇಷ ಸಂಗತಿ. ಆಧುನಿಕ ಇತಿಹಾಸಕಾರರು ವಿನ್‌ಸ್ಟಾನ್‌ಲೇಯವರನ್ನು ಇಂಗ್ಲಿಷರಲ್ಲೇ ಸಮಾನತೆಯನ್ನು ಪ್ರತಿಪಾದಿಸಿದ ಶ್ರೇಷ್ಟರಲ್ಲೊಬ್ಬರು ಎಂದು ಶ್ಲಾಘಿಸಿದ್ದಾರೆ.

ಜಗತ್ತಿನ ಮೊತ್ತ ಮೊದಲ ಕಮ್ಯುನಿಸ್ಟ್ ಕಾಲನಿ (ವಸತಿ ಕ್ಷೇತ್ರ)

ಡಿಗ್ಗರ್‌ಗಳು ಕೇವಲ ಹಕ್ಕುಗಳ ತಾತ್ವಿಕ ಪ್ರತಿಪಾದನೆ ಮಾಡಲಿಲ್ಲ. ನೇರ ಕಾರ್ಯಾಚರಣೆಗೆ ಇಳಿದರು. 1649ರ ಏಪ್ರಿಲ್ 1 ರಂದು ವಿನ್‌ಸ್ಟಾನ್‌ಲೇ ಮತ್ತು ರಾಜ ವಿರೋಧಿ ಸೈನಿಕನೊಬ್ಬನ ನೇತೃತ್ವದಲ್ಲಿ ಹಲವಾರು ಭೂಹೀನರು ಸೇಂಟ್ ಜಾರ್ಜ್ ಬೆಟ್ಟ ಎಂಬ ಸ್ಥಳಕ್ಕೆ ಪಿಕಾಸಿ, ಗುದ್ದಲಿ, ನೇಗಿಲುಗಳ ಸಹಿತ ಬಂದರು. ಆ ಜಾಗವನ್ನು ಅಗೆದು, ಉತ್ತು, ಬೀಜ ಬಿತ್ತಿದರು. ಅದು ಊರೊಟ್ಟಿನ ಜಾಗ. ಅದ್ದರಿಂದ ಅದನ್ನು ಬೇಸಾಯ ಮಾಡುವ ಹಕ್ಕು ನಮಗಿದೆ. ಇದಕ್ಕೆ ಯಾರ ಅನುಮತಿಯೂ ಬೇಕಾಗಿಲ್ಲ. ಕೂಡಿ ಬೇಸಾಯ ಮಾಡುತ್ತೇವೆ, ಒಟ್ಟಾಗಿ ಬದುಕುತ್ತೇವೆ ಎಂದು ಘೋಷಿಸಿದರು.

"ಇಂಗ್ಲೆಂಡಿನ ಮೂರನೇ ಒಂದು ಭಾಗವನ್ನು ಮಾತ್ರ ಬೇಸಾಯ ಮಾಡಲಾಗಿದೆ. ಇದನ್ನು ನೋಡಿದರೆ ತಿಳಿಯುತ್ತದೆ, ಇಂಗ್ಲೆಂಡಿನಲ್ಲಿ ಅದರ ಮಕ್ಕಳೆಲ್ಲರನ್ನು ಸಾಕುವಷ್ಟು ಭೂಮಿ ಇದೆ. ಆದರೂ ಬಹಳ ಜನ ಹಸಿವಿನಿಂದ ಸಾಯುತ್ತಿದ್ದಾರೆ. ಪ್ರತಿ ದಿನ ಬಡತನದಲ್ಲಿ ನರಳುತ್ತಿದ್ದಾರೆ" ಎಂದು ಅವರು ಸಾರಿದರು.

ಯುದ್ಧದ ಸಮಯದಲ್ಲಿ ಬಹಳಷ್ಟು ಜನ ಶ್ರೀಮಂತರಾಗಿದ್ದಾರೆ. ಆ ಶ್ರೀಮಂತಿಕೆಯಿಂದ ಅವರು ಭೂಮಿಯನ್ನು ಕೊಳ್ಳಲು, ಭೂಮಾಲಕರು ಉಪಯೋಗಿಸಿದ್ದಾರೆ. ಅಷ್ಟೇ ಅಲ್ಲ ಈ ಭೂಮಾಲಿಕತ್ವವನ್ನು ಬಳಸಿಕೊಂಡು ಅವರು ಆಡಳಿತಗಾರರು, ನ್ಯಾಯಾಧೀಶರುಗಳೂ ಆಗಿಬಿಟ್ಟಿದ್ದಾರೆ ಎಂದು ಅಂದಿನ ವಿದ್ಯಾಮಾನಗಳನ್ನು ಜನರ ಮುಂದೆ ಬಿಚ್ಚಿಟ್ಟರು.

ಸರ್ಕಾರದ ಅಧಿಕಾರಿಯೊಬ್ಬ ಈ ಭೂ ಆಕ್ರಮಣದ ಬಗ್ಗೆ ಲಂಡನ್‌ಗೆ ಮಾಡಿದ ವರದಿ ಹೀಗಿದೆ: "ಅವರು ಉಳುಮೆ ಮಾಡಿದರು,

ಪುಟ 4 ನೋಡಿ

ಧರ್ಮಸ್ಥಳ: 'ಅಸಹಜ ಸಾವುಗಳು' ಮರುತನಿಖೆ ನಡೆಸಿ ಸತ್ಯವನ್ನು ಹೊರಗೆಳೆಯಬೇಕು – ಸಿಪಿಐ(ಎಂ)

ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದ ಸುತ್ತಮುತ್ತ ಕಳೆದ ದಶಕಗಳಲ್ಲಿ ನಡೆದ 'ಅಸಹಜ ಸಾವುಗಳು' ಎಂಬ ಹಣೆಪಟ್ಟಿ ಹೊತ್ತ ನೂರಾರು ಪ್ರಕರಣಗಳು ಮತ್ತು ಆಗಾಗ್ಗೆ ಹೊರಬೀಳುತ್ತಿರುವ ಹಲವು ಸಂಗತಿಗಳ ಬಗ್ಗೆ ಮರು ತನಿಖೆ ನಡೆಸಿ ಸತ್ಯವನ್ನು ಹೊರಗೆಳೆಯಬೇಕಿದೆ ಎಂದು ಒತ್ತಾಯಿಸಿರುವ ಸಿಪಿಐ(ಎಂ), ಸಾಕ್ಷಿ ದೂರುದಾರರ ದೂರಿನನ್ವಯ ಸೌಜನ್ಯ ಪ್ರಕರಣವೂ ಸೇರಿದಂತೆ ಅಸಹಜವೆಂದು ಪರಿಗಣಿಸಿ ಮೂಲೆಗೆ ತಳ್ಳಲ್ಪಟ್ಟ ಎಲ್ಲ ಪ್ರಕರಣಗಳನ್ನು ನ್ಯಾಯಾಲಯದ ಸುಪರ್ದಿಯಲ್ಲಿ ಮರು ತನಿಖೆ ಮಾಡಬೇಕು. ತನಿಖೆ ನಿಷ್ಪಕ್ಷಪಾತ ಮತ್ತು ಪಾರದರ್ಶಕವಾಗಿ ನಡೆದು ಶೀಘ್ರವಾಗಿ ಅಪರಾಧಿಗಳನ್ನು ಪತ್ತೆ ಮಾಡಿ ಮುಂದಿನ ಕ್ರಮ ಕೈಗೊಳ್ಳಲು ಸಾಧ್ಯವಾಗುವಂತೆ ವಿಶೇಷ ತನಿಖಾ ದಳದ ಮೂಲಕ ತನಿಖೆಗೆ ಆದೇಶಿಸಬೇಕು ಎಂದು ಸರಕಾವನ್ನು ಆಗ್ರಹಿಸಿದೆ.



2012ರಲ್ಲಿ ಇಡೀ ರಾಜ್ಯವೇ ಬೆಚ್ಚಿಬಿದ್ದ, ಧರ್ಮಸ್ಥಳದ ಸಮೀಪದ ಉಜಿರೆಯ ಸುತ್ತಮುತ್ತ ನೂರಾರು ಅಸಹಜ ಸಾವುಗಳು ಸಂಭವಿಸುತ್ತಿರುವ ಕುರಿತು ವರದಿಗಳಾಗಿದ್ದವು. ಅದರಲ್ಲಿ ಉಜಿರೆ ಸಮೀಪದ ಪಾಂಗಳದ ಅಪ್ರಾಪ್ತ ವಿದ್ಯಾರ್ಥಿನಿ ಸೌಜನ್ಯಳ ಅತ್ಯಾಚಾರ ಮತ್ತು ಕೊಲೆ, ಮತ್ತು ಅದನ್ನು ಮುಚ್ಚಿ ಹಾಕಲು ನಡೆಸಿದ ವ್ಯವಸ್ಥಿತ ಪ್ರಯತ್ನಗಳು ಮರೆಯಲಾರದ ಸಂಗತಿಗಳು. ಅಮಾಯಕನೊಬ್ಬನನ್ನು ಆರೋಪಿ ಎಂದು ಹೆಸರಿಸಿ ಜೈಲಿಗೆ ಹಾಕಿದ್ದು, ದುರುದ್ದೇಶಪೂರ್ವಕವಾಗಿ ಸಾಕ್ಷಿ ನಾಶಮಾಡಿದ್ದರ ವಿರುದ್ಧ ವ್ಯಾಪಕವಾಗಿ ಪ್ರತಿಭಟನೆಗಳು ಕೂಡ ನಡೆದಿದ್ದವು. ನಂತರ ಪ್ರಕರಣವನ್ನು ಸಿಬಿಐಗೆ ವಹಿಸಿ, ತನಿಖೆ ನಡೆದು ಸಿಬಿಐ ನ್ಯಾಯಾಲಯದ ತೀರ್ಪು ಕೂಡ ಬಂದಿದೆ. ತೀರ್ಪಿನ ಅನುಸಾರವಾಗಿ ಅಮಾಯಕನೆಂದು ಇಡೀ ರಾಜ್ಯ ಗಟ್ಟಿ ಧ್ವನಿಯಲ್ಲಿ ಹೇಳಿದ ವ್ಯಕ್ತಿಯನ್ನು ನಿರಪರಾಧಿ ಎಂದು ಬಿಡುಗಡೆ ಮಾಡಲಾಗಿದೆ.
ಅದೇ ವೇಳೆಗೆ ಪ್ರಾಥಮಿಕ ಹಂತದಲ್ಲಿ ತನಿಖಾಧಿಕಾರಿಗಳು, ಶವಪರೀಕ್ಷೆ ಮಾಡಿದ ವೈದ್ಯಾಧಿಕಾರಿಗಳು ಉದ್ದೇಶಪೂರ್ವಕವಾಗಿ ಸಾಕ್ಷಿ ನಾಶಮಾಡಿದ್ದು, ಅವರ ಮೇಲೆ ಕ್ರಮ ಕೈಗೊಳ್ಳಬೇಕೆಂದೂ ಸಿಬಿಐ ನ್ಯಾಯಾಲಯ ಸೂಚನೆ ನೀಡಿತ್ತು. ಆದರೆ ಸರಕಾರ ಈ ಬಗ್ಗೆ ಹೆಚ್ಚೇನು ಗಂಭೀರವಾಗಿ ಪರಿಗಣಿಸಿಲ್ಲದಿರುವುದು ಅನುಮಾನಗಳನ್ನು ಮೂಡಿಸುತ್ತದೆ.

ಈಗ ಧರ್ಮಸ್ಥಳ ಮಂಜುನಾಥ ದೇವಾಲಯದಲ್ಲಿ ತಾನು ಸ್ವಚ್ಛತಾ ಕಾರ್ಯದಲ್ಲಿ ನಿಯುಕ್ತನಾಗಿದ್ದವನಾಗಿದ್ದು, ಆ ಅವಧಿಯಲ್ಲಿ ಹಲವಾರು ದೇಹಗಳನ್ನು ಹೂಳುವ ಕೆಲಸ ಮಾಡಿದ್ದೇನೆಂದು ಅನಾಮಧೇಯ ವ್ಯಕ್ತಿಯೊಬ್ಬರು ಪೋಲಿಸರಿಗೆ ಮತ್ತು ಬೆಳ್ತಂಗಡಿ ನ್ಯಾಯಾಲಯಕ್ಕೆ ಅಧಿಕೃತವಾಗಿ ತಿಳಿಸಿದ್ದಾರೆ. ಇದು ಇಡೀ ಪ್ರಕರಣದಲ್ಲಿ ಈ ಮೊದಲೇ ಸಾಮಾಜಿಕ ಕಳಕಳಿಯ ಸಂಘಟನೆಗಳು, ವ್ಯಕ್ತಿಗಳು ಎತ್ತಿದ ಹಲವು ಪ್ರಶ್ನೆಗಳಿಗೆ ಉತ್ತರವಾಗಿದೆ. ಆದರೆ, ಸಾಕ್ಷಿ ದೂರುದಾರನ ಹೇಳಿಕೆಯ ನಂತರ ಕ್ಷಿಪ್ರಗತಿಯಲ್ಲಿ ಸರಕಾರವೇಕೆ ಕ್ರಮ ಕೈಗೊಳ್ಳುತ್ತಿಲ್ಲ ಎಂಬುದು ನಮ್ಮ ಪ್ರಶ್ನೆಯಾಗಿದೆ.

ಇದೇ ವೇಳೆಗೆ ಮೆಡಿಕಲ್ ವಿದ್ಯಾರ್ಥಿನಿಯೊಬ್ಬಳು ಏಕಾಏಕಿ ಕಾಣೆಯಾಗಿದ್ದ ಪ್ರಕರಣದ ಸಂತ್ರಸ್ಥ ತಾಯಿಯೊಬ್ಬಳು ಹೂತ ಹೆಣಗಳಲ್ಲಿ ತನ್ನ ಮಗಳ ದೇಹವೂ ಇರಬಹುದಾಗಿದ್ದು, ಎತ್ತಿದ ಹೆಣಗಳ ಡಿಎನ್‌ಎ ಪರೀಕ್ಷೆ ನಡೆಸಿ, ಖಚಿತವಾದಲ್ಲಿ ತಮ್ಮ ಸಂಪ್ರದಾಯದಂತೆ ಸಂಸ್ಕಾರ ಮಾಡಿಸುವುದಾಗಿ ಪ್ರಕರಣ ದಾಖಲಿಸಿದ ಘಟನೆಯೂ ನಡೆದಿದೆ.

ಇದೇ ಸಮಯದಲ್ಲಿ ತಾನೇ ಸ್ವತಃ ಹೂಳಿರುವುದಾಗಿ ದೂರು ನೀಡಿರುವ ಸಾಕ್ಷಿ ಫಿರ್ಯಾದುದಾರರು ಹೂತಿರುವ ಕಳೇಬರವನ್ನು ತೆಗೆಯುವುದಾಗಿ ಹೇಳಿದ್ದರೂ, ಅವುಗಳ ಬಗ್ಗೆ ಪೋಲೀಸರು ಆಸಕ್ತಿ ತೋರಿಸುತ್ತಿಲ್ಲ ಎಂಬುದಾಗಿ ವರದಿಗಳು ಬರುತ್ತಿವೆ. ಪ್ರಕರಣದ ಸರಿಯಾದ ತನಿಖೆಗೆ ಆಸಕ್ತಿ ತೋರಿಸದೇ, ದೂರುದಾರರ ಮಂಪರು ಪರೀಕ್ಷೆ ಮಾಡಲು ಅನುಮತಿ ಕೋರುವುದಾಗಿ ಜಿಲ್ಲಾ ಪೋಲೀಸರು ಹೇಳುತ್ತಿರುವುದು ನಮಗೆ ಸಖೇದಾಶ್ಚರ್ಯ ಉಂಟು ಮಾಡಿದೆ. ಇವು ಪ್ರಾರಂಭದಿಂದಲೂ ಯಾರನ್ನೋ ರಕ್ಷಿಸುವ ಪ್ರಯತ್ನ ನಡೆಯುತ್ತಿದೆ ಎಂದು ಎದ್ದಿರುವ ಅನುಮಾನಗಳನ್ನು ದೃಢಪಡಿಸುತ್ತಿವೆ.

ಈ ಎಲ್ಲ ಬೆಳವಣಿಗೆಗಳನ್ನು ಗಮನಿಸಿ, ಸಾಕ್ಷಿ ದೂರುದಾರರ ದೂರಿನನ್ವಯ ಸೌಜನ್ಯ ಪ್ರಕರಣವೂ ಸೇರಿದಂತೆ ಅಸಹಜವೆಂದು ಪರಿಗಣಿಸಿ ಮೂಲೆಗೆ ತಳ್ಳಲ್ಪಟ್ಟ ಎಲ್ಲ ಪ್ರಕರಣಗಳನ್ನು ನ್ಯಾಯಾಲಯದ ಸುಪರ್ದಿಯಲ್ಲಿ ಮರು ತನಿಖೆ ಮಾಡಬೇಕು. ತನಿಖೆ ನಿಷ್ಪಕ್ಷಪಾತ ಮತ್ತು ಪಾರದರ್ಶಕವಾಗಿ ನಡೆದು ಶೀಘ್ರವಾಗಿ ಅಪರಾಧಿಗಳನ್ನು ಪತ್ತೆ ಮಾಡಿ ಮುಂದಿನ ಕ್ರಮ ಕೈಗೊಳ್ಳಲು ಸಾಧ್ಯವಾಗುವಂತೆ ವಿಶೇಷ ತನಿಖಾ ದಳದ ಮೂಲಕ ತನಿಖೆಗೆ ಆದೇಶಿಸಬೇಕು. ತಾನೇ ಸ್ವತಃ ಹೂಳಿರುವ ಕಳೆಬರವನ್ನು ತೆಗೆಯುವುದಾಗಿ ಸಾಕ್ಷಿ ದೂರುದಾರ ಹೇಳಿದ್ದಾರೆ, ಆದ್ದರಿಂದ ಕೂಡಲೇ ಕಳೆಬರವನ್ನು ಹೊರತೆಗೆದು ಸತ್ಯವನ್ನು ಹೊರಗೆಳೆಯಲು ಕ್ರಮ ಕೈಗೊಳ್ಳಬೇಕು.

ಸಿಬಿಐ ನ್ಯಾಯಾಲಯದ ಆದೇಶದಂತೆ ಸೌಜನ್ಯ ಪ್ರಕರಣದಲ್ಲಿ ಸಾಕ್ಷಿನಾಶಕ್ಕೆ ಕಾರಣರಾದ ಮತ್ತು ತನಿಖೆಯನ್ನು ದಾರಿ ತಪ್ಪಿಸಿದ ಅಧಿಕಾರಿಗಳ ಮೇಲೆ ತನಿಖೆಗೆ ಆದೇಶಿಸಿ ಸೂಕ್ತ ಕ್ರಮಕ್ಕೆ ಮುಂದಾಗಬೇಕು. ರಾಜ್ಯದಲ್ಲಿ ಮಹಿಳೆಯರು, ಮಕ್ಕಳ ಮೇಲೆ ಅನಿಯಂತ್ರಿತ ವಾಗಿ ಲೈಂಗಿಕ ದೌರ್ಜನ್ಯ, ಅತ್ಯಾಚಾರ, ಕೊಲೆಗಳು ನಡೆಯುತ್ತಿದ್ದು ಕಳವಳಕಾರಿ ಪರಿಸ್ಥಿತಿ ನಿರ್ಮಾಣವಾಗಿದೆ. ಇವುಗಳನ್ನು ನಿಯಂತ್ರಿಸಲು ಗಂಭೀರವಾದ ಕ್ರಮಕೈಗೊಳ್ಳುವ ಅಗತ್ಯವಿದೆ. ಈ ಎಲ್ಲ ವಿಷಯಗಳನ್ನೂ ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಿಪಿಐ(ಎಂ) ರಾಜ್ಯ ಸಮಿತಿಯು ರಾಜ್ಯ ಸರಕಾರವನ್ನು ಒತ್ತಾಯಿಸಿದೆ.



ನ್ಯಾಯಮೂರ್ತಿಯ ಮೇಲ್ವಿಚಾರಣೆಯಲ್ಲಿ ಎಸ್‌ಐಟಿ ರಚಿಸಬೇಕು: ನ್ಯಾಯಮೂರ್ತಿ ವಿ. ಗೋಪಾಲಗೌಡ

'ಧರ್ಮಸ್ಥಳ ಕ್ಷೇತ್ರದಲ್ಲಿ ನಡೆದಿದೆ ಎನ್ನಲಾದ ಅಪಾರ ಸಂಖ್ಯೆಯ ಅತ್ಯಾಚಾರ, ಕೊಲೆ ಮತ್ತು ಹೆಣಗಳನ್ನು ಹೂಳಿರುವ ಪ್ರಕರಣದಲ್ಲಿ ಸಾಕ್ಷಿ ಫಿರ್ಯಾದಿಗೆ ರಾಜ್ಯ ಸರ್ಕಾರವು ತಕ್ಷಣವೇ ಭದ್ರತೆ ಒದಗಿಸಬೇಕು. ಆರೋಪಗಳ ತನಿಖೆಗೆ ವಿಶೇಷ ತನಿಖಾ ತಂಡ ರಚಿಸಬೇಕು' ಎಂದು ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಒತ್ತಾಯಸಿದ್ದಾರೆ. ಅವರು ಜುಲೈ 17ರಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಹೇಳಿಕೆ ದಾಖಲಿಸಿದ ನಂತರವೂ ಸರಿಯಾಗಿ ತನಿಖೆ ಆಗುತ್ತಿಲ್ಲ. ಶವಗಳನ್ನು ಎಲ್ಲಿ ಹೂಳಲಾಗಿದೆ ಎಂಬುದನ್ನು ಕಾಲಿ ಹಾಳೆಯಲ್ಲಿ ಗುರುತು ಮಾಡಿಕೊಡು ಎಂದು ಪೊಲೀಸರು ಸಾಕ್ಷಿ ಫಿರ್ಯಾದಿಯ ಮೇಲೆ ಒತ್ತಡ ಹೇರುತ್ತಿದ್ದಾರೆ. ಆತ ನೀಡಿರುವ ಹೇಳಿಕೆಗಳು ಸೋರಿಕೆಯಾಗುತ್ತಿವೆ' ಎಂದು ಕಳವಳ ವ್ಯಕ್ತಪಡಿಸಿದರು.

'ಸಾಕ್ಷಿ ಫಿರ್ಯಾದಿಯು ತನ್ನ ವಕೀಲರೊಂದಿಗೆ ಒಂದು ಸ್ಥಳಕ್ಕೆ ತೆರಳಿ, ಕಳೇಬರವನ್ನು ತೆಗೆಯುವುದಾಗಿ ನ್ಯಾಯಾಲಯ ಮತ್ತು ಪೊಲೀಸರಿಗೆ ಮಾಹಿತಿ ನೀಡಿರುತ್ತಾರೆ. ಹೀಗಿದ್ದೂ ಪೊಲೀಸರು ಸ್ಥಳಕ್ಕೆ ತೆರಳಿಲ್ಲ. ಆತನ ಹೇಳಿಕೆ ದಾಖಲಿಸುವ ತನಿಖಾಧಿಕಾರಿಯು ಯಾರಿಗೋ ಕರೆ ಮಾಡಿ, ಅವರ ಸೂಚನೆಯಂತೆ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಹೀಗಾಗಿ ತಕ್ಷಣವೇ ತನಿಖಾ ತಂಡವನ್ನು ಬದಲಿಸಬೇಕು. ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ನ ಹಾಲಿ ಅಥವಾ ನಿವೃತ್ತ ನ್ಯಾಯಮೂರ್ತಿಯ ಮೇಲ್ವಿಚಾರಣೆಯಲ್ಲಿ ಎಸ್‌ಐಟಿ ರಚಿಸಬೇಕು' ಎಂದು ಒತ್ತಾಯಿಸಿದರು.

'ಸಾಕ್ಷಿ ಫಿರ್ಯಾದುದಾರ ಮತ್ತು ಆತನ ವಕೀಲರಿಗೆ ಬೆದರಿಕೆ ಇದೆ. ಅವರಿಗೆ ತಕ್ಷಣವೇ ಭದ್ರತೆ ಒದಗಿಸಬೇಕು. ಅವರಿಗೆ ಏನಾದರೂ ಆದರೆ ಗೃಹ ಸಚಿವ, ರಾಜ್ಯದ ಪೊಲೀಸ್ ಮಹಾನಿರ್ದೇಶಕ ಹೊಣೆಗಾರರಾಗುತ್ತಾರೆ' ಎಂದರು.

ಸಂಘ ಪರಿವಾರದ ಜೊತೆ ಹೋರಾಡುತ್ತಿರುವುದು ನೀವಾ?

ರಾಹುಲ್ ಗಾಂಧಿಗೆ ಸಿಪಿಐ(ಎಂ) ಪ್ರಶ್ನೆ

ಆರೆಸ್ಸೆಸ್ ವಿರುದ್ಧ ಮತ್ತು ಸಿಪಿಐ(ಎಂ) ವಿರುದ್ಧ ತಾನು ಸೈದ್ಧಾಂತಿಕವಾಗಿ ಹೋರಾಡುತ್ತಿದ್ದೇವೆ, ಅವರಿಗೆ ಜನರ ಭಾವನೆಗಳ ಬಗ್ಗೆ ಕಾಳಜಿ ಇಲ್ಲ ಎಂದು ಕಾಂಗ್ರೆಸ್ ನಾಯಕ, ಸಂಸದ ರಾಹುಲ್ ಗಾಂಧಿ ನೀಡಿದ ಹೇಳಿಕೆಗಳನ್ನು ಸಿಪಿಐ(ಎಂ) ತೀವ್ರವಾಗಿ ಖಂಡಿಸಿದೆ. ಕೇರಳದಲ್ಲಿ ಸಂಘ ಪರಿವಾರದ ಶಕ್ತಿಗಳ ಜೊತೆ ಸೇರಿ ಸಿಪಿಐ(ಎಂ) ವಿರುದ್ಧ ನಿರಂತರವಾಗಿ ತಪ್ಪು ಮಾಹಿತಿ ಹರಡುತ್ತಿರುವ ಕಾಂಗ್ರೆಸ್ ನಾಯಕರಿಂದ ಇಂತಹ ಹೇಳಿಕೆಗಳು ಬಂದಿರುವುದು ಆಶ್ಚರ್ಯವೇನಿಲ್ಲ. ಎಂದು ಅದು ಹೇಳಿದೆ. "ಸಾಧ್ಯವಾದಾಗಲೆಲ್ಲಾ ಸಂಘ ಪರಿವಾರದ ಜೊತೆ ತಂಡ ಕಟ್ಟುವ ನೀವಾ, ಆರ್‌ಎಸ್‌ಎಸ್ ಜೊತೆ ಹೋರಾಡುವುದು" ಎಂದು ಅದು ಹೇಳಿದೆ. ಈ ವಿಷಯಕ್ಕೆ ಸಂಬಂಧಿಸಿ, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ ಸಾಮಾಜಿಕ ಮಾಧ್ಯಮ ಒಂದರಲ್ಲಿ ವೀಡಿಯೊ ಸಂದೇಶವನ್ನು ಪೋಸ್ಟ್ ಮಾಡಿದ್ದಾರೆ. ಸಂಪೂರ್ಣವಾಗಿ ಕೋಮುವಾದಿಯಾಗಿರುವ ಆರ್‌ಎಸ್‌ಎಸ್ ಅನ್ನು, ಶ್ರಮಿಕ ವರ್ಗದ ಜನರಿಗಾಗಿ ನಿರಂತರವಾಗಿ ಹೋರಾಡುವ ಸಿಪಿಐ(ಎಂ) ಅನ್ನು ಸಮಾನವಾಗಿ ನೋಡುವ ರಾಹುಲ್ ಮಾಡಿದ ಹೇಳಿಕೆಗಳನ್ನು ಬಲವಾಗಿ ಖಂಡಿಸುತ್ತೇನೆ ಎಂದು ಅವರು ಹೇಳಿದ್ದಾರೆ.

ಆರ್‌ಎಸ್‌ಎಸ್ ವಿರುದ್ಧ ಕೇರಳದಲ್ಲಿ ದಿನನಿತ್ಯ ಹೋರಾಡುತ್ತಿರುವುದು ಸಿಪಿಐ(ಎಂ) ಎಂಬುದನ್ನು ರಾಹುಲ್ ಮರೆತಿದ್ದಾರೆ ಎಂದು ಅವರು ಹೇಳಿದರು. ಸಂಘಪರಿವಾರ ನಡೆಸಿದ ಉದ್ರಿಕ್ತ ದಾಳಿಯಲ್ಲಿ ಸಮರ್ಪಣಾ ಭಾವದಿಂದ ಕೆಲಸ ಮಾಡುವ ಅನೇಕ ಮಂದಿ ಕಾರ್ಯಕರ್ತರನ್ನು ಸಿಪಿಐ(ಎಂ) ಕಳೆದುಕೊಂಡಿದೆ. ಕೇರಳದಲ್ಲಿ ಎಡಪಂಥೀಯರ ವಿರುದ್ಧ ತಪ್ಪು ಮಾಹಿತಿ ಹರಡಲು ಕಾಂಗ್ರೆಸ್ ಮತ್ತು ಆರ್‌ಎಸ್‌ಎಸ್ ಒಂದೇ ತಂಡವಾಗಿ ಕೆಲಸ ಮಾಡುತ್ತಿವೆ. ಕೇರಳದಲ್ಲಿ ರಾಹುಲ್ ಕಾಲಿಟ್ಟ ತಕ್ಷಣ ಅವರಿಗೆ ಅಂತಹ ಹೇಳಿಕೆಗಳನ್ನು ನೀಡುವುದು ಒಂದು ಅಭ್ಯಾಸವಾಗಿಬಿಟ್ಟಿದೆ ಎಂದು ಅವರು ಟೀಕಿಸಿದರು.

ಎಂ.ಎ. ಬೇಬಿ ತಮ್ಮ ವೀಡಿಯೊದಲ್ಲಿ ಏನು ಹೇಳಿದರೆಂದರೆ...

ಕಾಂಗ್ರೆಸ್ ನಾಯಕ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮಾಡಿದ ಹೇಳಿಕೆಗಳನ್ನು ಕೆಲವು ಸ್ನೇಹಿತರು ನನ್ನ ಗಮನಕ್ಕೆ ತಂದರು. ಆರ್‌ಎಸ್‌ಎಸ್ ಮತ್ತು ಸಿಪಿಐ(ಎಂ) ಜೊತೆ ಸೈದ್ಧಾಂತಿಕವಾಗಿ ಹೋರಾಡಲು ಸಮರ್ಪಿತವಾಗಿದ್ದೇನೆ ಎಂದು ಅವರು ಹೇಳಿದ್ದಾರೆ. ಇದು ತುಂಬಾ ದುರದೃಷ್ಟಕರ. ಕೇರಳದಲ್ಲಿ ಆರೆಸ್ಸೆಸ್ನೊಂದಿಗೆ ಸೈದ್ಧಾಂತಿಕವಾಗಿ ಮತ್ತು ರಾಜಕೀಯವಾಗಿ ಹೋರಾಟದಲ್ಲಿ ಸಿಪಿಐ(ಎಂ) ಮುಂಚೂಣಿಯಲ್ಲಿದೆ.

ಆರ್‌ಎಸ್‌ಎಸ್ ನವರು ನೂರಾರು ಸಿಪಿಐ(ಎಂ) ಕಾರ್ಯಕರ್ತರನ್ನು, ವಿದ್ಯಾರ್ಥಿ, ಯುವಜನ ಸಂಘಗಳ ಕಾರ್ಯಕರ್ತರನ್ನು ಹತ್ಯೆ ಮಾಡಿದ್ದಾರೆ. ಆದರೆ, ಆರ್‌ಎಸ್‌ಎಸ್ ಜೊತೆ ಸೈದ್ಧಾಂತಿಕವಾಗಿ, ರಾಜಕೀಯವಾಗಿ ಹೋರಾಡಲು ಸಿಪಿಐ(ಎಂ) ಬದ್ಧವಾಗಿದೆ. ರಾಹುಲ್ ಗಾಂಧಿಗೆ ಕೇರಳದಲ್ಲಿ ಆರ್‌ಎಸ್‌ಎಸ್ ಪಾತ್ರ ಏನೆಂದು? ಸಿಪಿಎಂ ನಿರ್ವಹಿಸುತ್ತಿರುವ ಪಾತ್ರ ಏನಿದೆ ಎನ್ನವುದು ತಿಳಿದಿದೆಯೋ? ಇಲ್ಲವೋ? ಆರ್‌ಎಸ್‌ಎಸ್, ಬಿಜೆಪಿ ವಿರುದ್ಧ ನಾವು ಎಷ್ಟು ನಿರ್ಣಾಯಕವಾಗಿ ಹೋರಾಡುತ್ತಿದ್ದೇವೆ ಎಂಬುದು ಇಡೀ ದೇಶಕ್ಕೆ ತಿಳಿದಿದೆ. ಸಿಪಿಐ(ಎಂ) ಮತ್ತು ಇತರ ಎಡ ಪಕ್ಷಗಳು ಬೆಂಬಲಿಸದಿದ್ದರೆ, 2004ರಲ್ಲಿ ಕೇಂದ್ರದಲ್ಲಿ ಮನಮೋಹನ್ ಸಿಂಗ್ ಸರ್ಕಾರ ರಚಿಸಲು ಸಾಧ್ಯವಾಗುತ್ತಿತ್ತೇ? ಇಲ್ಲವೇ? ಎಂಬದನ್ನು ರಾಹುಲ್ ಗಾಂಧಿ ತಿಳಿದುಕೊಳ್ಳಬೇಕು. ಏನೇ ಇರಲಿ, ರಾಹುಲ್ ಗಾಂಧಿ ಕೇರಳದ ವಯನಾಡಿನಿಂದ ಸಂಸದರಾಗಿ ಗೆದ್ದಿದ್ದಾರೆ. ಅವರು ಯಾರ ವಿರುದ್ಧ ಹೋರಾಡಿದರು? ಆರ್‌ಎಸ್‌ಎಸ್ ವಿರುದ್ದವೋ, ಬಿಜೆಪಿ ವಿರುದ್ಧವೋ ಹೋರಾಡಿ ಗೆದ್ದಿದ್ದಾರೆಯೇ? ಅವರ ವಿರುದ್ದ ಸ್ಪರ್ಧಿಸಿದ್ದು ಸಿಪಿಐ(ಎಂ) ಎಂಬುದನ್ನು ನಾವು ನೆನಪಿಸಿಕೊಳ್ಳುತ್ತೇವೆ. ಸಿಪಿಐ(ಎಂ) ವಿರುದ್ಧ ಮಾತನಾಡುವಾಗ ಅವರು ಹೆಚ್ಚು ಜಾಗರೂಕರಾಗಿರುತ್ತಾರೆ ಎಂದು ನಾವು ಭಾವಿಸುತ್ತೇವೆ. ಅವರು ಸಿಪಿಐ(ಎಂ) ಅನ್ನು ಟೀಕಿಸಬಹುದು.

ಸಿಪಿಐ(ಎಂ) ಕೂಡಾ ಕಾಂಗ್ರೆಸ್ಸಿನ ಆರ್ಥಿಕ ನೀತಿಗಳನ್ನು ಟೀಕಿಸುತ್ತ ಬಂದಿದೆ. ಇದು ಸೌಹಾರ್ದಯುತವಾಗಿದೆ. ಇನ್ನು ಮುಂದೆಯೂ ಆರ್ಥಿಕ ನೀತಿಗಳ ವಿಷಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯ ತಪ್ಪು ನೀತಿಗಳನ್ನು ಎತ್ತಿ ತೋರಿಸುವುದನ್ನು ನಾವು ಮುಂದುವರಿಸುತ್ತೇವೆ. ಆದರೆ ನಾವು ಅವೆಲ್ಲವನ್ನೂ ಒಂದೇ ರೀತಿಯಲ್ಲಿ ಟೀಕಿಸುತ್ತಿಲ್ಲ. ಆರ್‌ಎಸ್‌ಎಸ್ ಅನ್ನು ಪ್ರತ್ಯೇಕಿಸುವ ರೀತಿಯಲ್ಲಿ ಟೀಕಿಸುತ್ತೇವೆ. ಆದರೆ ರಾಹುಲ್ ಗಾಂಧಿ ಬಹಳ ಸಾಧಾರಣವಾಗಿ ಆರ್‌ಎಸ್‌ಎಸ್ ಮತ್ತು ಸಿಪಿಐ(ಎಂ) ಅನ್ನು ತನ್ನ ಸೈದ್ಧಾಂತಿಕ ಶತ್ರು ಎಂದು ಕರೆಯುವುದು ಸರಿಯಲ್ಲ. ಇದಕ್ಕೆ ಜನ ಖಂಡಿತ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಂ.ಎ. ಬೇಬಿ ತಮ್ಮ ವೀಡಿಯೊ ಸಂದೇಶದಲ್ಲಿ ಹೇಳಿದ್ದಾರೆ.

ಇದಕ್ಕೂ ಮೊದಲು, ಕೇರಳದ ಕೊಟ್ಟಾಯಂನಲ್ಲಿ ನಡೆದ ಒಂದು ಸಭೆಯಲ್ಲಿ ರಾಹುಲ್ ಮಾತನಾಡುತ್ತ, ಪಕ್ಷದ ಕಾರ್ಯಕರ್ತರೆಲ್ಲರೂ ಮಾಜಿ ಮುಖ್ಯಮಂತ್ರಿ ಉಮ್ಮನ್ ಚಾಂಡಿಯನ್ನು ಆದರ್ಶವನ್ನಾಗಿ ತೆಗೆದುಕೊಂಡು ಕೆಲಸ ಮಾಡಬೇಕು ಎಂದು ಹೇಳಿದ್ದರು. ಅದೇ ಸಮಯದಲ್ಲಿ, ಅವರು ಆರ್‌ಎಸ್‌ಎಸ್ ವಿರುದ್ದ ಮತ್ತು ಸಿಪಿಎಂ ವಿರುದ್ದ ಆರೋಪಗಳನ್ನು ಮಾಡಿದರು. “ಆರ್‌ಎಸ್‌ಎಸ್ ಮತ್ತು ಸಿಪಿಎಂ ವಿರುದ್ಧ ಸೈದ್ಧಾಂತಿಕವಾಗಿ ಹೋರಾಡುತ್ತಿದ್ದೇವೆ. ಸೈದ್ಧಾಂತಿಕವಾಗಿ ಹೋರಾಡುತ್ತಿದ್ದರೂ... ಅವರ ಬಗ್ಗೆ ನನ್ನ ದೊಡ್ಡ ಟೀಕೆ ಎಂದರೆ ಅವರು ಜನರ ಭಾವನೆಗಳನ್ನು ಅರ್ಥಮಾಡಿಕೊಳ್ಳುವುದಿಲ್ಲ. ನೀವು ಎಷ್ಟೇ ದೊಡ್ಡ ಭಾಷಣಗಳನ್ನು ಮಾಡಿದರೂ, ಜನರ ಭಾವನೆಗಳನ್ನು ಅರ್ಥಮಾಡಿಕೊಳ್ಳದಿದ್ದರೆ, ಅವರೊಂದಿಗೆ ಸಂಪರ್ಕ ಸಾಧಿಸದಿದ್ದರೆ, ಅವರನ್ನು ಅಪ್ಪಿಕೊಳ್ಳಲು ಸಾಧ್ಯವಾಗದಿದ್ದರೆ, ನೀವು ನಾಯಕರಾಗಲು ಸಾಧ್ಯವಿಲ್ಲ" ಎಂದು ರಾಹುಲ್ ಹೇಳಿದರು. ಆದರೆ, ಆರೆಸ್ಸೆಸ್ ಮತ್ತು ಸಿಪಿಐ(ಎಂ) ಎರಡನ್ನೂ ಒಟ್ಟಿಗೆ ಜೋಡಿಸಿ ರಾಹುಲ್ ಆರೋಪಿಸಿದಾಗ ಅಲ್ಲಿನ ಕಾಂಗ್ರೆಸ್ ಕಾರ್ಯಕರ್ತರು ಕೂಡ ಆಘಾತಕ್ಕೊಳಗಾದರು.

ಬಡವರೇ ಭೂಮಿಯ ವಾರಸುದಾರರು....

ಪುಟ 2 ರಿಂದ

ಮುಸುಕಿನ ಜೋಳ, ಕ್ಯಾರಟ್ ಮತ್ತಿತರ ತರಕಾರಿಗಳನ್ನು ಬಿತ್ತಿದರು. ಗುಡಿಸಲುಗಳನ್ನು ಕಟ್ಟಿಕೊಂಡರು."

ಈ ಪ್ರದೇಶದ ದೊಡ್ಡ ಶ್ರೀಮಂತ ಬಂಡವಾಳಶಾಹಿ ಕೃಷಿಕರಲ್ಲಿ ಈ ಭೂ ಆಕ್ರಮಣ ಗಾಬರಿ ಹುಟ್ಟಿಸಿತು. ಆ ಪ್ರದೇಶದ ಸಾಮಂತ ಲಾರ್ಡ್ ಈ ಕೂಲಿಕಾರರ ಮೇಲೆ ದಾಳಿ ಮಾಡಲು ತನ್ನ ಊಳಿಗದಾಳುಗಳನ್ನು ಕಳಿಸಿದ. ಅಲ್ಲಿಯ ಚರ್ಚ್‌ನಲ್ಲಿ ಬಂಧಿಸಿಟ್ಟ. ಆದರೆ ಅವರ ಮೇಲೆ ಯಾವ ಕಾನೂನಿನ ಪ್ರಕಾರವೂ ಕ್ರಮ ಜರುಗಿಸಲಾಗದೆ ಬಿಡಬೇಕಾಯಿತು. ಅವರು ಮತ್ತೆ ತಮ್ಮ ಬೇಸಾಯಕ್ಕೆ ಮರಳಿದರು. ಆ ಲಾರ್ಡ್ ನೆರೆಯ ರೈತರನ್ನು, ತನ್ನ ಮೇಲೆ ಅವಲಂಬಿತ ಗೇಣಿದಾರರನ್ನು ಈ ಕೂಲಿಕಾರ ಉಳುಮೆದಾರರ ಮೇಲೆ ಛೂ ಬಿಟ್ಟ. ಅವರು ಕೂಲಿಕಾರರನ್ನು ಹಿಗ್ಗಾ ಮುಗ್ಗ ಹೊಡೆದರು. ಅವರ ಗುಡಿಸಲುಗಳನ್ನು ಸುಟ್ಟರು.

ಸರ್ಕಾರಿ ವರದಿ ಹೇಳಿತು: ಅವರು ಮತ್ತೆ ಮರಳಿದರು. ಬೇಸಾಯ ಕೈಗೊಂಡರು. ಆ ಪ್ರದೇಶದ ಎಲ್ಲ ಕೂಲಿಕಾರ, ಜೀತಗಾರರನ್ನು ಬೇಸಾಯ ಮಾಡಲು ಆಹ್ವಾನಿಸಿದರು. ನಾಲ್ಕೈದು ಸಾವಿರ ಜನರು ನುಗ್ಗಿ ಬರುವ ನಿರೀಕ್ಷೆ ಇದೆ.

ಈ ಮಧ್ಯೆ ಅವರು ತಮ್ಮನ್ನು ನೈಜ ಲೆವಲರ್ಸ್ ಎಂದು ಕರೆದುಕೊಂಡು ತಮ್ಮ ಘೋಷಣೆಯ ಬಗೆಗೆ ಕಿರುಪುಸ್ತಿಕೆಗಳನ್ನು ಪ್ರಕಟಿಸಿದರು.

ವಿನ್‌ಸ್ಟಾನ್‌ಲೇ ಮತ್ತವರ ಜೊತೆಗಾರರನ್ನು ಮಹಾದಂಡನಾಯಕನಾದ ಫೇರ್‌ಫಾಕ್ಸ್ ಮಾತುಕತೆಗೆ ಲಂಡನ್‌ಗೆ ಆಹ್ವಾನಿಸಿದ. ಮಾತುಕತೆಗೆ ಹೋದ ಈ ಹೋರಾಟಗಾರರು ಲೆವಲರ್ಸ್‌ಗಳಂತೆಯೇ ಮಹಾದಂಡನಾಯಕನಿಗೆ ರೀತಿ ರಿವಾಜುಗಳಂತೆ ಸಲ್ಲಬೇಕಾದ ಯಾವ ಗೌರವವನ್ನೂ ಸಲ್ಲಿಸಲಿಲ್ಲ. ಅವರನ್ನುದ್ದೇಶಿಸಿ ಮಾತನಾಡುವಾಗಲು ‘ಗೌರವಾನ್ವಿತ’, ‘ತಾವು’ ಮೊದಲಾದ ಪದಪುಂಜಗಳನ್ನು ಬದಿಗಿಟ್ಟು ನಾವೆಲ್ಲರೂ ಸಮಾನರು ಎಂಬಂತೆ ನೀನು ತಾನು ಎಂದೇ ಸಂಭೋದಿಸಿದರು. ಫೇರ್‌ಫಾಕ್ಸ್ ಈ ಭೂ ಆಕ್ರಮಣ ಇಂಗ್ಲೆಂಡಿನ ಪ್ರಭುತ್ವ ತಲೆಕೆಡಿಸಿಕೊಳ್ಳಬೇಕಾದ ವಿಷಯ ಅಲ್ಲ ಎಂದು ಸಂಧಾನ ಕೈ ಬಿಟ್ಟ.

ಲಂಡನ್ ಪತ್ರಿಕೆಗಳು ಈ ಸಂಧಾನ ಮಾತುಕತೆಯ ಬಗ್ಗೆ ಮಾಡಿದ ವರದಿ ಕೂಡಾ ವಿಶೇಷವಾಗಿ ಗಮನಾರ್ಹ: "ಈ ಡಿಗ್ಗರ್ಸ್ ಹುಚ್ಚರೆಂಬಂತೆ ಕಾಣಿಸುತ್ತಿದ್ದರು. ಅವರ ಉದ್ದೇಶವಂತೂ ಗಂಭೀರವಾಗಿ ತೆಗೆದುಕೊಳ್ಳಲಾಗದಷ್ಟು ಲಂಗು ಲಗಾಮೇ ಇಲ್ಲದಂತಿತ್ತು. ಭಾಷೆ ಭ್ರಮಾತ್ಮಕ ಕನಸಿನಲ್ಲಿ ತೇಲಾಡುವಂತಿತ್ತು. ವರ್ತನೆ ತುಚ್ಛವಾಗಿತ್ತು."

ಈ ವರದಿ ಕೂಲಿಕಾರರ ಬಗ್ಗೆ ಅಂದಿನ ಬಂಡವಾಳಶಾಹಿಗಳ, ಬಂಡವಾಳಶಾಹಿ ಮಾಧ್ಯಮಗಳ ತುಚ್ಛ ಮನಸ್ಥಿತಿಯನ್ನು ಬಿಂಬಿಸುತ್ತಿತ್ತು.

ಈ ಭೂ ಆಕ್ರಮಣ ಇಂಗ್ಲೆಂಡಿನ ಭೂಹೀನರಲ್ಲಿ ಹೊಸ ಉತ್ಸಾಹವನ್ನು ತುಂಬಿತು. ಹತ್ತು ಹಲವು ಜಿಲ್ಲೆಗಳಲ್ಲಿ ಊರೊಟ್ಟಿನ ಭೂಮಿಯನ್ನು ಆಕ್ರಮಣ ಮಾಡಿ ಬೇಸಾಯ ಮಾಡಲು ಆರಂಭಿಸಿದರು.

ಈ ಆಕ್ರಮಣ ಪೂರ್ತಿ ಭೂಹೀನರ ಚಳುವಳಿಯಾಗಿತ್ತು. ಇದು ಭೂಮಾಲಿಕರ ಗೇಣಿದಾರರಾಗಿದ್ದ ಬಡ ರೈತರಲ್ಲೂ ತಮ್ಮ ಭೂಮಿಗೆ ಎಲ್ಲಿ ಬಾಯಿ ಹಾಕುತ್ತಾರೋ ಎಂಬ ಆತಂಕ ಉಂಟು ಮಾಡಿತು. ಇದನ್ನು ಗಮನಿಸಿದ ಡಿಗ್ಗರ್ಸ್ ಈ ಹೋರಾಟದಲ್ಲಿ ಅವರ ಪ್ರಧಾನ ಸಮಸ್ಯೆಯನ್ನೂ ಒಳಗೊಂಡರು. ಗೇಣಿದಾರರೂ ಸ್ವತಂತ್ರ ಪ್ರಜೆಗಳೇ. ಅವರು ಭೂಮಾಲಕರಿಗೆ, ಲಾರ್ಡ್ಸ್ ಸಾಮಂತರಿಗೆ ನಜರು ಮುಜುರೆ ಮೊದಲಾದ ಗೌರವ, ಅವರಿಗೆ ವಿಧೇಯರಾಗಿರುವ ಪ್ರತಿಜ್ಞೆ ಸಲ್ಲಿಸಬೇಕಾಗಿಲ್ಲ. ಅವರ ನ್ಯಾಯಾಲಯಗಳ ಮುಂದೆ ಹಾಜರಾಗಬೇಕಾಗಿಲ್ಲ. ಅವರೂ ಕೂಡಾ ತಮ್ಮ ಸಣ್ಣ ಹೊಲಗಳನ್ನು ಹೆಚ್ಚಿಸಿಕೊಳ್ಳಲು ಊರೊಟ್ಟಿನ ಭೂಮಿಯನ್ನು ಬೇಸಾಯಕ್ಕೆ ಒಳಪಡಿಸಿಕೊಳ್ಳಬಹುದು ಎಂದು ಘೋಷಿಸಿದರು.

ಹೀಗೆ ತಮಗೆ ಮಾತ್ರ ಸಲ್ಲಬೇಕಾದ ಸಂಪತ್ತು ಎಂದು ಪರಿಗಣಿಸಿಕೊಂಡಿದ್ದ ಊರೊಟ್ಟಿನ ಭೂಮಿಯನ್ನು ತಮ್ಮ ಭೂಮಿಯಲ್ಲಿ ಗೇದುಕೊಂಡಿರಬೇಕಾದ ಜೀತಗಾರರು ತಮ್ಮದಾಗಿಸಿಕೊಂಡರೆ ಸಹಿಸಿಕೊಳ್ಳಬಹುದೇ! ಅವರು ತಮ್ಮ ಆಳುಗಳನ್ನು ಛೂ ಬಿಟ್ಟು ಅದರಿಂದ ಫಲ ಕಾಣದೆ ಸೈನ್ಯದ ದಾಳಿಗಾಗಿ ಒತ್ತಾಯಿಸಿದರು. ಸೈನ್ಯ ಮತ್ತೆ ಮತ್ತೆ ಈ ಕೂಲಿಕಾರರನ್ನು ಓಡಿಸಿದರೂ, ಅವರು ಮತ್ತೆ ಮತ್ತೆ ಬಂದು ಬೇಸಾಯ ಮಾಡಲು ತೊಡಗಿದ್ದನ್ನು ನೋಡಿ ಸೈನ್ಯ ಮತ್ತು ಸ್ಥಳೀಯ ಜಹಗೀರುದಾರರು ಅವರ ಬೆಳೆಗಳನ್ನು, ಮನೆಗಳನ್ನು ಸುಟ್ಟರು. ಮರಳಿ ಬೇಸಾಯ ಮಾಡಲಾಗದಂತೆ ಕುದುರೆ ಸವಾರರನ್ನು ನಿರಂತರ ಕಾವಲಿಗೆ ನೇಮಿಸಿದರು.

ಹೀಗೆ ಇಂಗ್ಲೆಂಡಿನ ಭೂಮಿ ಯಾರ ಆಸ್ತಿಯೂ ಆಗದಂತೆ, ಎಲ್ಲರೂ ಕೂಡಿ ಬೇಸಾಯ ಮಾಡಿ ಬದುಕುವ ಹೊಸ ಮಾದರಿಯನ್ನು ಜಗತ್ತಿನ ಮುಂದಿಟ್ಟ ಕಮ್ಯುನಿಸ್ಟ್ ಬದುಕಿನ ಕ್ಷೇತ್ರಗಳನ್ನು ಭೂಮಾಲಕರು, ಜಹಗೀರುದಾರರು ನಾಶಪಡಿಸಿದರು. ಅವರಲ್ಲಿ ಕೆಲ ಧರ್ಮಾಧಿಕಾರಿಗಳೂ ಇದ್ದರು. ಅಂತಿಮವಾಗಿ ಡಿಗ್ಗರ್ಸ್ ಇಂಗ್ಲೆಂಡ್ ಒಂದು ಬಂದೀಖಾನೆ, ಬಡವರೇ ಅದರಲ್ಲಿ ಬಂಧನಕ್ಕೊಳಪಟ್ಟವರು ಎಂದು ಕೂಗಿ ಹೇಳಿದರು. ಇಡೀ ಪ್ರಭುತ್ವದ ಮೃಗೀಯ ಶಕ್ತಿಗೆ ಎದುರಾಗಿದ್ದ ಈ ಧೀರ ಡಿಗ್ಗರ್ಸ್ ಜಗತ್ತಿನ ಮುಂದಿಟ್ಟ ಕ್ರಾಂತಿಕಾರಿ ವಿಚಾರಗಳು ಮುಂದೆ ಹಲ ಕಾಲ ಪ್ರತಿಧ್ವನಿಸಿದವು.

"ಬರೆದಿಟ್ಟುಕೊಳ್ಳಿ, ಭೂಹೀನ ಬಡವರು ಊರೊಟ್ಟಿನ ಭೂಮಿಯನ್ನು ಉತ್ತು, ಬೇಸಾಯ ಮಾಡಿ, ಸ್ವತಂತ್ರರಾಗಿ, ಅನುಕೂಲವಾಗಿ ಬದುಕಲು ಅವಕಾಶ ಇಲ್ಲದಿರುವವರೆಗೆ ಇಂಗ್ಲೆಂಡು ಸ್ವತಂತ್ರ ಪ್ರಜೆಗಳ ದೇಶ ಎಂದು ಕರೆಸಿಕೊಳ್ಳಲು ಅರ್ಹವಲ್ಲ."

"ಒಬ್ಬ ಭೂಮಿಯನ್ನು ತನ್ನದು ಎಂದು ಹೇಳಿಕೊಳ್ಳುತ್ತಿರುವವರೆಗೆ ಮತ್ತೊಬ್ಬನಿಗೆ ಆಳಾಗಿ ದುಡಿಯುವದಲ್ಲದೆ ಬೇರೆ ದಾರಿ ಕಾಣದಿರುವ ಪರಿಸ್ಥಿತಿ ಇರುವವರೆಗೆ, ಇಡೀ ಸೃಷ್ಟಿಯೇ ಗುಲಾಮಗಿರಿಗೆ ಒಳಪಡುತ್ತದೆ." ಘಂಟಾಘೋಷದಂತೆ ಮೊಳಗಿದ ಈ ಮಾತುಗಳು ಇಂದಿಗೂ ಪ್ರಸ್ತುತವಾಗಿವೆ.

ಚುನಾವಣಾ ಪ್ರಜಾಪ್ರಭುತ್ವದ ಭವಿಷ್ಯದ ಮೇಲೆ ಕರಾಳ ಮೋಡಗಳು

ವಿಶೇಷ ತೀವ್ರ ಪರಿಷ್ಕರಣೆಯು (SIR) ಸಂಬಂಧಿತ ಶಾಸನಬದ್ಧ ನಿಬಂಧನೆಗಳು ಅಥವಾ ನಿಯಮಗಳಲ್ಲಿ ಆಧಾರವನ್ನು ಹೊಂದಿಲ್ಲ. ಇದು ರಾಷ್ಟ್ರೀಯ ಪೌರತ್ವ ರಿಜಿಸ್ಟರ್ (NRC)ನ ಅಜೆಂಡಾವನ್ನು ಹಿಂಬಾಗಿಲಿನಿಂದ ಮತ್ತೆ ತರುವ ಪ್ರಯತ್ನದಂತೆ ಕಾಣುತ್ತದೆ. ಇದರ ಪರಿಣಾಮವಾಗಿ ಬಹಳ ದೊಡ್ಡ ಸಂಖ್ಯೆಯ ಜನರನ್ನು, ವಿಶೇಷವಾಗಿ ಆರ್ಥಿಕವಾಗಿ ಅಥವಾ ಸಾಮಾಜಿಕವಾಗಿ ಅಂಚಿನಲ್ಲಿ ಇರುವವರನ್ನು ಮತ್ತು ಡಿಜಿಟಲ್ ಶಕ್ತಿಯಿಂದ ವಂಚಿತರಾಗಿ ಇರುವವರನ್ನು ಮತದಾನದ ಹಕ್ಕುಗಳಿಂದ ವಂಚಿತಗೊಳಿಸುವ ನಿಜವಾದ ಅಪಾಯವಿದೆ. ಇತರ ರಾಜ್ಯಗಳಲ್ಲಿಯೂ ಇದೇ ರೀತಿಯ SIR ಕಾರ್ಯಾಚರಣೆಗಳನ್ನು ಕೈಗೊಳ್ಳಬಹುದು ಎಂದು ECI ಸೂಚಿಸಿರುವುದರಿಂದ, ಈ ಪ್ರಶ್ನೆಗಳನ್ನು ತರ್ಕಬದ್ಧ ಮತ್ತು ತಾರ್ಕಿಕ ರೀತಿಯಲ್ಲಿ ಇತ್ಯರ್ಥಪಡಿಸಬೇಕು? ಇಲ್ಲದಿದ್ದರೆ ಚುನಾವಣಾ ಪ್ರಜಾಪ್ರಭುತ್ವದ ಭವಿಷ್ಯವೇ ಅಪಾಯದಲ್ಲಿರಬಹುದು.

ನಿಲೋತ್ಪಲ ಬಸು

“ಬಿಹಾರ ಪಟ್ಟಿಯಲ್ಲಿ ವಿದೇಶಿಯರ ಪತ್ತೆಯಾಗಿದೆ ಎಂದ ಚುನಾವಣಾ ಆಯೋಗ; ಇಂಡಿಯಾ ಕೂಟ ಇದನ್ನು ಪ್ರಶ್ನಿಸಿದೆ” ಪ್ರಮುಖ ರಾಷ್ಟ್ರೀಯ ದಿನಪತ್ರಿಕೆಯೊಂದರ ಮುಖಪುಟದಲ್ಲಿನ ಪ್ರಧಾನ ಶೀರ್ಷಿಕೆ ಇದು. ಇದು ಖಂಡಿತ ನಂಬುವಂತದ್ದಲ್ಲ ಎಂದು ತೋರುತ್ತದೆ.

ಜೂನ್ 24ರ ಪತ್ರಿಕಾ ಪ್ರಕಟಣೆಯಲ್ಲಿ ಭಾರತೀಯ ಚುನಾವಣಾ ಆಯೋಗ (ECI) ಪ್ರಕಟಿಸಿರುವ ವಿಶೇಷ ತೀವ್ರ ಪರಿಷ್ಕರಣೆಯ (Special Intensive Revision - SIR) ಸಂಪೂರ್ಣ ವೇಳಾಪಟ್ಟಿಯನ್ನು ನಾವು ಹಿಂದಿನ ಸಂಪಾದಕೀಯದಲ್ಲಿ ವಿವರಿಸಿದ್ದೇವೆ. ನಮ್ಮ ಓದುಗರ ಅನುಕೂಲಕ್ಕಾಗಿ, ನಾವು ಪ್ರಕ್ರಿಯೆಯನ್ನು ನೆನಪಿಸಿಕೊಳ್ಳೋಣ: “ಬಿಎಲ್‌ಒಗಳು (ಬೂತ್ ಲೆವೆಲ್ ಆಫೀಸರ್‌ಗಳು) ಪ್ರತಿಯಾಗಿ, ಫಾರ್ಮ್‌ಗಳನ್ನು ಮನೆ ಮನೆಗೆ ವಿತರಿಸಬೇಕು, ಭರ್ತಿ ಮಾಡಿದ ಫಾರ್ಮ್‌ಗಳನ್ನು ಸಂಗ್ರಹಿಸಬೇಕು ಮತ್ತು ಅವುಗಳನ್ನು ಪರಿಶೀಲಿಸಬೇಕು. ಇದಲ್ಲದೆ, ಉನ್ನತ ಅಧಿಕಾರಿಗಳು ಮತಗಟ್ಟೆಗಳ ಪ್ರಸ್ತಾವಿತ ತರ್ಕಬದ್ಧಗೊಳಿಸುವಿಕೆ, ಮರುಜೋಡಣೆಯನ್ನು ಮತ್ತು ಪರಿಷ್ಕರಣೆಯನ್ನು ಕೈಗೊಳ್ಳಬೇಕು, ಅಂತಿಮಗೊಳಿಸಬೇಕು, ಮತಗಟ್ಟೆಗಳ ಪಟ್ಟಿಗೆ ಅನುಮೋದನೆ ಪಡೆಯಬೇಕು ಮತ್ತು ಆಗಸ್ಟ್ 1, 2025ರೊಳಗೆ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಬೇಕು, ನಂತರ ಸೆಪ್ಟೆಂಬರ್ 30, 2025ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಬೇಕು.”

ಹಾಗಿದ್ದಲ್ಲಿ, ಬಿಹಾರದ ಪಟ್ಟಿಯಲ್ಲಿ ವಿದೇಶಿಗರು ಕಂಡುಬಂದಿದ್ದಾರೆ ಎಂದು ಚುನಾವಣಾ ಆಯೋಗ (ಇಸಿ) ಹೇಗೆ ಹೇಳಲು ಸಾಧ್ಯ? ಸೆಪ್ಟೆಂಬರ್ 30ರ ಮೊದಲು ಚುನಾವಣಾ ಆಯೋಗದಿಂದ ಯಾವುದೇ ಔಪಚಾರಿಕ ಹೇಳಿಕೆ ಬರಲು ಸಾಧ್ಯವಿಲ್ಲದ ಕಾರಣ, ಆಯೋಗದ ಅಧಿಕಾರಿಗಳ ಒಂದು ವಿಭಾಗವು ಈ ವಿಷಯದ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿರುವ ನ್ಯಾಯಾಂಗ ಪ್ರಕ್ರಿಯೆಯಲ್ಲಿ ಪೂರ್ವಾಗ್ರಹ ಮೂಡಿಸಲು ಈ ತಪ್ಪು ಮಾಹಿತಿಯನ್ನು ಹರಡುತ್ತಿದೆ. ಮತ್ತು ಜುಲೈ 28 ಮುಂದಿನ ವಿಚಾರಣೆಯ ದಿನಾಂಕದ ಸಾಕಷ್ಟು ಮೊದಲು ಈ ಪ್ರಯತ್ನ ಉದ್ದೇಶಪೂರ್ವಕವಾಗಿ ನಡೆಯುತ್ತಿದೆ ಎಂದು ಅರ್ಥೈಸಬಹುದು. ಸೋರಿಕೆ ಅಧಿಕೃತವಾಗಿರಲಿ ಅಥವಾ ರಹಸ್ಯವಾಗಿರಲಿ, ಆಯೋಗವು ಅಧಿಕೃತ ನಿರಾಕರಣೆ ನೀಡದಿದ್ದರೆ, ಇದರ ಹೊಣೆಗಾರಿಕೆ ಆಯೋಗದ ಮೇಲಿರುತ್ತದೆ.

ಪೌರತ್ವದ ಜವಾಬ್ದಾರಿ, ಚುನಾವಣಾ ಆಯೋಗದ್ದಲ್ಲ, ಗೃಹ ಸಚಿವಾಲಯದ್ದು

ಔಚಿತ್ಯದ ಪ್ರಶ್ನೆಯು ಇನ್ನಷ್ಟು ತುರ್ತು ಆಗುತ್ತದೆ. ಏಕೆಂದರೆ, ಸುಪ್ರೀಂ ಕೋರ್ಟ್ ಪೀಠವು ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆಯನ್ನು ನಿಲ್ಲಿಸುವ ಯಾವುದೇ ನಿರ್ದಿಷ್ಟ ಆದೇಶವನ್ನು

ನೀಡಿಲ್ಲವಾದ್ದರಿಂದ (ಅರ್ಜಿದಾರರು ಅಂತಹ ಪರಿಹಾರವನ್ನು ಕೇಳಲಿಲ್ಲ), ಎತ್ತಿರುವ ಮೂಲಭೂತ ಪ್ರಶ್ನೆಗಳಿಗೆ ಚುನಾವಣಾ ಆಯೋಗ ದಿಂದ ಇನ್ನೂ ಸ್ಪಷ್ಟವಾದ ಉತ್ತರಗಳ ಅಗತ್ಯವಿದೆ.

ಮೊದಲ ಪ್ರಶ್ನೆ: ಮತದಾರನ ಪೌರತ್ವ ಸ್ಥಿತಿಯನ್ನು ನಿರ್ಧರಿಸುವ ಅಧಿಕಾರವನ್ನು ಚುನಾವಣಾ ಆಯೋಗವು ಹೊಂದಿದೆಯೇ? ಈ ವಿಷಯದ ಬಗ್ಗೆ, ಒಬ್ಬ ವ್ಯಕ್ತಿಯು ಪೌರತ್ವವನ್ನು ನಿರ್ಧರಿಸುವುದು ಗೃಹ ಸಚಿವಾಲಯದ (MHA) ಅಧಿಕಾರ ಎಂದು ಪೀಠವು ಗಮನಿಸಿತು. ಆಧಾರ್ ಅನ್ನು ಮಾನ್ಯವಾದ ದಾಖಲೆಯಿಂದ ಹೊರಗಿಡುವ ನಿರ್ಧಾರವನ್ನು ಚುನಾವಣಾ ಆಯೋಗ ಸಮರ್ಥಿಸಿಕೊಂಡಾಗ ಪೀಠವು ಹೀಗೆ ಹೇಳಿದೆ “...ಪೌರತ್ವವು ಭಾರತದ ಚುನಾವಣಾ ಆಯೋಗದಿಂದಲ್ಲ, ಬದಲಾಗಿ ಗೃಹ ಸಚಿವಾಲಯದಿಂದ ನಿರ್ಧರಿಸಲ್ಪಡುವ ವಿಷಯವಾಗಿದೆ.”

“ತಕ್ಷಣ ಕೇಳಿದರೆ, ನಾನು ಸಹ ಈಗ ಅವುಗಳನ್ನು ತೋರಿಸಲು ಸಾಧ್ಯವಾಗುವುದಿಲ್ಲ”

ಎರಡನೇ ಪ್ರಶ್ನೆ: ಈ ಸಮಯ ಏಕೆ? ಮತದಾರರ ಪಟ್ಟಿಯಲ್ಲಿ ಪೌರತ್ವ ಹೊಂದಿದವರು ಮಾತ್ರ ಉಳಿಯುವಂತೆ ಚುನಾವಣಾ ಆಯೋಗವು ಖಚಿತಪಡಿಸಿಕೊಳ್ಳಲು ಬಯಸಿದರೆ, ಇದು “ಪ್ರಕ್ರಿಯೆಯನ್ನು ಬಹಳ ಮುಂಚೆಯೇ ಪ್ರಾರಂಭಿಸಬೇಕಿತ್ತು.” ಎಂಬುದನ್ನು ಪೀಠವು ಗಮನಿಸಿದೆ. ನ್ಯಾಯಾಲಯವು ಮೂಲಭೂತ ವಾಗಿ ಈ ಕ್ರಮದ ಸಮಯವನ್ನು ಪ್ರಶ್ನಿಸಿತು ಮತ್ತು ಈ ಪ್ರಕ್ರಿಯೆಯನ್ನು ಬಿಹಾರ ಚುನಾವಣೆಯಿಂದ ಬೇರ್ಪಡಿಸಬಹುದೇ ಎಂದು ಕೇಳಿತು.

ನ್ಯಾಯಮೂರ್ತಿ ಧುಲಿಯಾ ಅವರು ಪ್ರಾಯೋಗಿಕ ಪರಿಣಾಮಗಳನ್ನು ಒತ್ತಿಹೇಳಿದರು: “2025ರಲ್ಲಿ ಮತದಾರರ ಪಟ್ಟಿಯಲ್ಲಿ ಈಗಾಗಲೇ ಇರುವ ವ್ಯಕ್ತಿಯನ್ನು ಅಮಾನ್ಯಗೊಳಿಸುವ ನಿಮ್ಮ ನಿರ್ಧಾರವು, ಈ ನಿರ್ಧಾರದ ವಿರುದ್ಧ ಮೇಲ್ಮನವಿ ಸಲ್ಲಿಸಲು ಮತ್ತು ಸಂಪೂರ್ಣ ವ್ಯರ್ಥ ಪ್ರಲಾಪದ ಮೂಲಕ ಹೋಗಲು ಆ ವ್ಯಕ್ತಿಯನ್ನು ಒತ್ತಾಯಿಸುತ್ತದೆ ಮತ್ತು ಆ ಮೂಲಕ ಮುಂದಿನ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ನಿರಾಕರಿಸಲಾಗುತ್ತದೆ. ಪೌರತ್ವವಿಲ್ಲದವರು ಪಟ್ಟಿಯಲ್ಲಿ ಉಳಿಯದಂತೆ ನೋಡಿಕೊಳ್ಳಲು ತೀವ್ರವಾದ ಕಾರ್ಯಾಚರಣೆಗಳ ಮೂಲಕ ನೀವು ಮತದಾರರ ಪಟ್ಟಿಯನ್ನು ಶುದ್ಧೀಕರಿಸುವುದರಲ್ಲಿ ಯಾವುದೇ ತಪ್ಪಿಲ್ಲ. ಆದರೆ ಪ್ರಸ್ತಾವಿತ ಚುನಾವಣೆಗೆ ಕೇವಲ ಒಂದೆರಡು ತಿಂಗಳ ಮೊದಲು ನೀವು ನಿರ್ಧರಿಸಿದರೆ?”

”NRC ಪ್ರಕ್ರಿಯೆಯನ್ನು ಸ್ಪಷ್ಟವಾಗಿ ಹೋಲುವ ಅವಶ್ಯಕತೆಗಳಾದ ಚುನಾವಣಾ ಆಯೋಗವು ಒತ್ತಾಯಿಸಿದ ದಾಖಲೆಗಳ ವಿಸ್ತಾರವಾದ ಸೆಟ್ ಅನ್ನು ಉಲ್ಲೇಖಿಸುತ್ತಾ ಅವರು, ಮೊನಚಾದ, ವಾಸ್ತವಿಕ ಎಚ್ಚರಿಕೆಯನ್ನು ಸೇರಿಸಿದರು: “ನೀವು ಈ ದಾಖಲೆಗಳನ್ನು ತಕ್ಷಣ ಕೇಳಿದರೆ, ನಾನು ಸಹ ಈಗ ಅವುಗಳನ್ನು ತೋರಿಸಲು ಸಾಧ್ಯವಾಗುವುದಿಲ್ಲ. ಪ್ರಾಯೋಗಿಕವಾಗಿ ನೋಡಿ; ವೇಳಾಪಟ್ಟಿಯನ್ನು ನೋಡಿ

ಮೌಖಿಕ ವಿಚಾರಣೆಗೆ ಕರೆ ನೀಡುವ ಪ್ರಕ್ರಿಯೆ ಯಾಕಿಲ್ಲ?



ಕೊನೆಯದಾಗಿ, ಮೂರನೇ ಪ್ರಶ್ನೆ: ಚುನಾವಣಾ ಆಯೋಗ ಯಾವ ವಿಧಾನವನ್ನು ಅಳವಡಿಸಿಕೊಳ್ಳುತ್ತದೆ? ಮತದಾರರು ಮತದಾನದಿಂದ ವಂಚಿತರಾಗುವ ಪ್ರಕರಣಗಳಲ್ಲಿ ಅನುಸರಿಸುವ ಪ್ರಕ್ರಿಯೆಯನ್ನು ಸ್ಪಷ್ಟಪಡಿಸುವಂತೆ ನ್ಯಾಯಾಧೀಶರು ಚುನಾವಣಾ ಆಯೋಗವನ್ನು (EC) ಕೇಳಿದರು. ನ್ಯಾಯಮೂರ್ತಿ ಧುಲಿಯಾ ಅವರು ತೀಕ್ಷ್ಣವಾದ ಪ್ರಶ್ನೆಯನ್ನು ಮುಂದಿಟ್ಟರು: “ಜನ ಪ್ರಾತಿನಿಧ್ಯ ಕಾಯಿದೆಯ ಅಡಿಯಲ್ಲಿ ಒಂದು ‘ಸಾರಾಂಶ ಪರಿಷ್ಕರಣೆ’ಯು, ಮತದಾರರ ಪಟ್ಟಿಯಿಂದ ಮತದಾರರನ್ನು ಅಳಿಸುವ ಮೊದಲು ಮೌಖಿಕ ವಿಚಾರಣೆಗೆ ಕರೆ ನೀಡಿದರೆ, ‘ತೀವ್ರ’ ಪರಿಷ್ಕರಣೆಯು ಆ ಪ್ರಕ್ರಿಯೆಯನ್ನು ಹೊಂದಿರುವುದಿಲ್ಲ ಎಂದು ಹೇಳಬಹುದೇ?”

ಆಧಾರ್, ಪಡಿತರ ಚೀಟಿಯನ್ನು ಮಾನ್ಯ ದಾಖಲೆಗಳಾಗಿ ಏಕೆ ಸ್ವೀಕರಿಸಲಾಗುವುದಿಲ್ಲ?

ಆರ್‌ಪಿಎ ನಿಯಮಗಳ (ಜನತಾ ಪ್ರಾತಿನಿಧ್ಯ ಕಾಯ್ದೆ) ಅಡಿಯಲ್ಲಿ, ದೃಢಪಡಿಸಿದ ಸಾವಿನ ಪ್ರಕರಣಗಳನ್ನು ಹೊರತುಪಡಿಸಿ, ಪ್ರಸ್ತಾವಿತ ಮತದಾರರ ಅಳಿಸುವಿಕೆಯ ಎಲ್ಲಾ ಪ್ರಕರಣಗಳಲ್ಲಿ, ಮತದಾರರಿಗೆ ನೋಟಿಸ್ ನೀಡಬೇಕು, ಇದು ಅವರ ಅಭಿಪ್ರಾಯವನ್ನು ಕೇಳಲು ಸಮಂಜಸವಾದ ಅವಕಾಶವನ್ನು ನೀಡುತ್ತದೆ. ಈ ಪ್ರಶ್ನಾವಳಿಯ ಭಾಗವಾಗಿ, ಪೀಠವು ಕೆಲವು ದಾಖಲೆಗಳ ಸ್ವೀಕಾರಾರ್ಹತೆಯನ್ನು ಸಹ ಎತ್ತಿತು. ವಿಶೇಷ ತೀವ್ರ ಪರಿಷ್ಕರಣೆ (SIR) ಪ್ರಕ್ರಿಯೆಯಲ್ಲಿ ಆಧಾರ್, ಚುನಾವಣಾ ಫೋಟೋ ಗುರುತಿನ ಚೀಟಿ (EPIC) ಮತ್ತು ಪಡಿತರ ಚೀಟಿಯನ್ನು ಮಾನ್ಯ ದಾಖಲೆಗಳಾಗಿ ಏಕೆ ಸ್ವೀಕರಿಸಲಾಗುವುದಿಲ್ಲ ಎಂಬುದನ್ನು ವಿವರಿಸುವಂತೆ ಸುಪ್ರೀಂ ಕೋರ್ಟ್ ತನ್ನ ಆದೇಶದಲ್ಲಿ ಚುನಾವಣಾ ಆಯೋಗವನ್ನು ಕೇಳಿದೆ. ಇದು ಈಗಾಗಲೇ ತಳಮಟ್ಟದಲ್ಲಿ ವ್ಯಾಪಕವಾದ ಆತಂಕ ಮತ್ತು ಗೊಂದಲವನ್ನು ಉಂಟುಮಾಡಿರುವ ಕಿರಿದಾದ 11 ದಾಖಲುಗಳ ಪಟ್ಟಿಯನ್ನು ಸಂಭಾವ್ಯವಾಗಿ ವಿಸ್ತರಿಸುತ್ತದೆ.

NRC ಅಜೆಂಡಾವನ್ನು ಹಿಂಬಾಗಿಲಿನಿಂದ ಮತ್ತೆ ತರುವ ಪ್ರಯತ್ನ

ಇವು ಜನರನ್ನು ಕಾಡುತ್ತಿರುವ ನಿಖರ ಪ್ರಶ್ನೆಗಳಾಗಿವೆ. ಎಲ್ಲ ಪಕ್ಷಗಳಿಗೆ ಸಮಾತಟ್ಟಾದ ಮೈದಾನ ಖಚಿತಪಡಿಸುವ ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳನ್ನು ಖಚಿತಪಡಿಸಿಕೊಳ್ಳಲು ಅಗತ್ಯವಿರುವ ಎಲ್ಲವನ್ನೂ ಮಾಡಲು ಚುನಾವಣಾ ಆಯೋಗಕ್ಕೆ ಅಧಿಕಾರವಿದೆ ಎಂಬುದರ ಬಗ್ಗೆ ಯಾರಿಗೂ ಆಕ್ಷೇಪವಿಲ್ಲ. ಆದರೆ ಜೂನ್ 24ರ ಆದೇಶ ಮತ್ತು ಆಯೋಗವು ನಿಗದಿಪಡಿಸಿದ ವಿಧಾನ ಮತ್ತು ವೇಳಾಪಟ್ಟಿ... ಇವೆಲ್ಲವೂ ಹಿಂದೆ ಅನುಸರಿಸಿದ ಕ್ರಮಗಳಿಂದ ಅಭೂತಪೂರ್ವ ಚ್ಯುತಿಗಳಾಗಿವೆ.

ವಿಶೇಷ ತೀವ್ರ ಪರಿಷ್ಕರಣೆಯು (Special Intensive Revision - SIR) ಸಂಬಂಧಿತ ಶಾಸನಬದ್ಧ ನಿಬಂಧನೆಗಳು ಅಥವಾ ನಿಯಮಗಳಲ್ಲಿ ಆಧಾರವನ್ನು ಹೊಂದಿಲ್ಲ. ಇದು ರಾಷ್ಟ್ರೀಯ ಪೌರತ್ವ ರಿಜಿಸ್ಟರ್ (NRC)ನ ಅಜೆಂಡಾವನ್ನು ಹಿಂಬಾಗಿಲಿನಿಂದ ಮತ್ತೆ ತರುವ ಪ್ರಯತ್ನದಂತೆ ಕಾಣುತ್ತದೆ. ಇದರ ಪರಿಣಾಮವಾಗಿ ಬಹಳ ದೊಡ್ಡ ಸಂಖ್ಯೆಯ ಜನರನ್ನು, ವಿಶೇಷವಾಗಿ, ಆರ್ಥಿಕವಾಗಿ ಅಥವಾ ಸಾಮಾಜಿಕವಾಗಿ ಅಂಚಿನಲ್ಲಿರುವವರನ್ನು ಮತ್ತು ಡಿಜಿಟಲ್ ಶಕ್ತಿಯಿಂದ ವಂಚಿತರಾಗಿರುವವರನ್ನು ಮತದಾನದ ಹಕ್ಕುಗಳಿಂದ ವಂಚಿತಗೊಳಿಸುವ ನಿಜವಾದ ಅಪಾಯವಿದೆ.

ಇತರ ರಾಜ್ಯಗಳಲ್ಲಿಯೂ ಇದೇ ರೀತಿಯ SIR ಕಾರ್ಯಾಚರಣೆಗಳನ್ನು ಕೈಗೊಳ್ಳಬಹುದು ಎಂದು ECI ಸೂಚಿಸಿರುವುದರಿಂದ, ಈ ಪ್ರಶ್ನೆಗಳನ್ನು ತರ್ಕಬದ್ಧ ಮತ್ತು ತಾರ್ಕಿಕ ರೀತಿಯಲ್ಲಿ ಇತ್ಯರ್ಥಪಡಿಸಬೇಕು. ಇಲ್ಲದಿದ್ದರೆ ಚುನಾವಣಾ ಪ್ರಜಾಪ್ರಭುತ್ವದ ಭವಿಷ್ಯವೇ ಅಪಾಯದಲ್ಲಿರಬಹುದು. ●

ಆರ್‌ಎಸ್‌ಎಸ್: ಸಾಮ್ರಾಜ್ಯಶಾಹಿ, ಫ್ಯಾಸಿಸ್ಟ್ ಮತ್ತು ನಾಜಿ ಆಯುಧಗಳನ್ನು ಪ್ರಯೋಗಿಸುವುದು


ಪ್ರತಿಯೊಬ್ಬ ಭಾರತೀಯನಿಗೂ ತನ್ನ ಧಾರ್ಮಿಕ ನಂಬಿಕೆಗಳ ಪ್ರಕಾರ ಬದುಕುವ ಸ್ವಾತಂತ್ರ್ಯವಿದೆ. ಇದು ನಮ್ಮ ಸಂವಿಧಾನದಲ್ಲಿ ಪ್ರತಿಪಾದಿಸಲಾದ ಜಾತ್ಯತೀತತೆಯ ಮೌಲ್ಯದ ಅಡಿಪಾಯವಾಗಿದೆ. ಅದೇ ಸಂದರ್ಭದಲ್ಲಿ ಧರ್ಮವು ಆಡಳಿತದಲ್ಲಿ ಹಸ್ತಕ್ಷೇಪ ಮಾಡಬಾರದು ಎಂಬುದನ್ನೂ ನಮ್ಮ ಸಂವಿಧಾನ ಸೂಚಿಸುತ್ತದೆ. ಆದಾಗ್ಯೂ, ಸಂವಿಧಾನವನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಪ್ರಮಾಣವಚನವನ್ನು ಸ್ವೀಕರಿಸಿದವರು ಈ ಎರಡೂ ತತ್ವಗಳನ್ನು ಉಲ್ಲಂಘಿಸುತ್ತಿರುವುದನ್ನು ನಾವೀಗ ನೋಡುತ್ತಿದ್ದೇವೆ. ನಾಜಿ ಜರ್ಮನಿ ಮತ್ತು ಭಾರತದ ಹಿಂದುತ್ವ ಆಡಳಿತಗಾರರ ನಡುವಿನ ಹೋಲಿಕೆಗಳು ವಿಷಯ ಮತ್ತು ಉದ್ದೇಶ ಎರಡರಲ್ಲೂ ಗಮನಾರ್ಹವಾಗಿವೆ. ಈ ಹಿನ್ನೆಲೆಯಲ್ಲಿ ನಾವು 1920 ಮತ್ತು 1930 ರ ದಶಕಗಳಲ್ಲಿ ನಾಜಿ ಜರ್ಮನಿ ಮತ್ತು ಫ್ಯಾಸಿಸ್ಟ್ ಇಟಲಿಯಿಂದ ಆರ್‌ಎಸ್‌ಎಸ್ ಸ್ಫೂರ್ತಿ ಪಡೆದಿದೆ ಎಂಬುದನ್ನು ನೆನಪಿನಲ್ಲಿಡಬೇಕು.

ಎಂ.ಎ. ಬೇಬಿ
ಅನು: ನಾಗರಾಜ ನಂಜುಂಡಯ್ಯ

ಬಿಜೆಪಿಯವರು ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಪರಿವರ್ತಿಸುವ ಯೋಜನೆಯನ್ನು ನಿಧಾನವಾಗಿ ಮತ್ತು ಕ್ರಮೇಣ ಕಾರ್ಯಗತಗೊಳಿಸುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಇದು ದಶಕಗಳಿಂದ ರೂಪಿಸಲಾಗುತ್ತಿರುವ ಅವರ ಯೋಜನೆಯಾಗಿದೆ. ಬಾಬರಿ ಮಸೀದಿಯನ್ನು ಕೆಡವಿ, ಅದೇ ಸ್ಥಳದಲ್ಲಿ ರಾಮ ಮಂದಿರವನ್ನು ನಿರ್ಮಿಸುವ ಅವರ ಕಾರ್ಯಗಳಲ್ಲಿ ಇದನ್ನು ನಾವು ನೋಡುತ್ತಿದ್ದೇವೆ. ಅದೇ ದಿಸೆಯಲ್ಲಿ ಅವರು ಧರ್ಮದ ಆಧಾರದ ಮೇಲೆ ಹೆಚ್ಚಿನ ವರ್ಗದ ಜನರಿಗೆ ಪೌರತ್ವವನ್ನು ನಿರಾಕರಿಸುವ ಕಾನೂನುಗಳ ಅನುಷ್ಠಾನವು ಅವರ ಮತ್ತೊಂದು ಹೆಜ್ಜೆಯಾಗಿದೆ.

ಧರ್ಮವನ್ನು ಪೌರತ್ವದ ಆಧಾರವಾಗಿ ಮಾಡುವ ವಾದವನ್ನು ತಿರಸ್ಕರಿಸಲಾಯಿತು

ಪೌರತ್ವಕ್ಕೆ ಸಂಬಂಧಿಸಿದಂತೆ ಎರಡು ಮುಖ್ಯ ದೃಷ್ಟಿಕೋನಗಳಿವೆ. ಒಂದು ಹುಟ್ಟಿನಿಂದ ಪೌರತ್ವ (ಜುಸ್ ಸೋಲಿ). ಇನ್ನೊಂದು ಜನಾಂಗ ಮತ್ತು ಅದರ ಸಂಸ್ಕೃತಿಯ ಆಧಾರದ ಮೇಲೆ ಪೌರತ್ವ (ಜುಸ್ ಸಾಂಗುನಿಸ್). ಇವುಗಳಲ್ಲಿ, ಆಗಸ್ಟ್ 1949ರಲ್ಲಿ ಸಂವಿಧಾನ ಸಭೆಯಲ್ಲಿ ನಡೆದ ಪೌರತ್ವದ ಕುರಿತು ಚರ್ಚೆಗಳ ನಂತರ, ಭಾರತೀಯ ಸಂವಿಧಾನವು ಹುಟ್ಟಿನಿಂದ ಪೌರತ್ವದ ಆಧುನಿಕ ದೃಷ್ಟಿಕೋನವನ್ನು ಎತ್ತಿಹಿಡಿಯಿತು. ಸಂವಿಧಾನ ಸಭೆಯಲ್ಲಿಯೂ ಸಹ, ಧರ್ಮವನ್ನು ಪೌರತ್ವದ ಆಧಾರವಾಗಿ ಮಾಡುವ ಪರವಾಗಿ ವಾದಗಳನ್ನು ಎತ್ತಲಾಯಿತು. ಆದರೆ, ಸಂವಿಧಾನ ಸಭೆಯಲ್ಲಿ ಈ ವಾದವನ್ನು ತಿರಸ್ಕರಿಸಿತು. ಧಾರ್ಮಿಕ ಗುರುತುಗಳ ಆಧಾರದ ಮೇಲೆ ಪೌರತ್ವವನ್ನು ನೀಡುವುದು ಪ್ರಗತಿಪರ ಸಮಾಜಕ್ಕೆ ಸರಿಹೊಂದುವುದಿಲ್ಲ ಎಂಬುದು ಸಂವಿಧಾನ ಸಭೆಯು ಅಳವಡಿಸಿಕೊಂಡ ನಿಲುವಾಗಿತ್ತು. ಧರ್ಮವನ್ನು ಪೌರತ್ವಕ್ಕೆ ಆಧಾರವನ್ನಾಗಿ ಮಾಡುವ ಯಾವುದೇ ರಾಷ್ಟ್ರವು ಜಾತ್ಯತೀತ ರಾಜ್ಯವಾಗುವುದಿಲ್ಲ, ಬದಲಿಗೆ ದೈವಪ್ರಭುತ್ವ ರಾಜ್ಯವಾಗುತ್ತದೆ. ಆದರೆ, ಭಾರತವನ್ನು ಅಂತಹ ರಾಜ್ಯವಾಗಿ ಪರಿವರ್ತಿಸುವುದು ಸಂವಿಧಾನಬಾಹಿರ ಕ್ರಮವಾಗುತ್ತದೆ. ಭಾರತೀಯ ಸಂವಿಧಾನದ 5 ರಿಂದ 11ನೇ ಪರಿಚ್ಛೇದಗಳು ಪೌರತ್ವದ ಪ್ರಶ್ನೆಯೊಂದಿಗೆ ವ್ಯವಹರಿಸುತ್ತವೆ. ಭಾರತದ ಭೂಪ್ರದೇಶದಲ್ಲಿ ಜನಿಸಿದ ಯಾರಾದರೂ ಭಾರತೀಯ ಪ್ರಜೆಯಾಗುತ್ತಾರೆ ಎಂದು ಪರಿಚ್ಛೇದ 5(ಎ) ನಿಸ್ಸಂದಿಗ್ಧವಾಗಿ ಹೇಳುತ್ತದೆ.

ದುರ್ಬಲಗೊಳಿಸುವ ತಿದ್ದುಪಡಿಗಳು

ಆದಾಗ್ಯೂ, ನಂತರ ಇದರಿಂದ ವಿಚಲನಗಳು ನಡೆದಿವೆ. 1986ರಲ್ಲಿ ರಾಜೀವ್ ಗಾಂಧಿ ಸರ್ಕಾರ ಮತ್ತು 2003ರಲ್ಲಿ ವಾಜಪೇಯಿ ಸರ್ಕಾರಗಳು ಈ ನಿಟ್ಟಿನಲ್ಲಿ ಮಾಡಿದ ತಿದ್ದುಪಡಿಗಳು ಈ ನಿಲುವನ್ನು ದುರ್ಬಲಗೊಳಿಸಿದವು. ವಿಶೇಷವಾಗಿ 2003ರ ತಿದ್ದುಪಡಿಯಲ್ಲಿ ಪೋಷಕರಲ್ಲಿ ಒಬ್ಬರು ಅಕ್ರಮ ವಲಸಿಗರಾಗಿರಬಾರದು ಎಂಬ ನಿಬಂಧನೆಯನ್ನು ಒಳಗೊಂಡಿತ್ತು. ಇದನ್ನು ಪ್ರಸ್ತುತ ನಾವು ನೋಡುತ್ತಿರುವ ಪೌರತ್ವ ತಿದ್ದುಪಡಿ ಕಾಯ್ದೆಯ (ಸಿಎಎ) ಮೊದಲ ಆವೃತ್ತಿ ಎಂದು ಕರೆಯಬಹುದು. ಅದು ಬಿಜೆಪಿಯ ಕೆಲಸವಾಗಿದ್ದರೂ, 2010ರಲ್ಲಿ ಎರಡನೇ ಯುಪಿಎ ಸರ್ಕಾರವು ಕೂಡ ರಾಷ್ಟ್ರೀಯ ಜನಸಂಖ್ಯಾ ನೋಂದಣಿ (ಎನ್‌ಪಿಆರ್) ತಯಾರಿಕೆಗೆ ಕ್ರಮಗಳನ್ನು ಕೈಗೊಂಡಿತು ಎಂಬುದನ್ನು ಗಮನಿಸಬೇಕು. ಬಿಜೆಪಿ ಸರ್ಕಾರ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ರಾಷ್ಟ್ರೀಯ ನಾಗರಿಕರ ನೋಂದಣಿ (ಎನ್‌ಆರ್‌ಸಿ) ಸಿದ್ಧಪಡಿಸುವ ಉದ್ದೇಶವನ್ನು ಘೋಷಿಸಿತು. ಜನರ ಅಸಮಾಧಾನದಿಂದಾಗಿ ಎನ್‌ಪಿಆರ್ ಮತ್ತು ಎನ್‌ಆರ್‌ಸಿ ಎರಡನ್ನೂ ಸ್ಥಗಿತಗೊಳಿಸಬೇಕಾಯಿತು.

ಅಮಿತ್ ಶಾ ಅವರ 'ಕಾಲಾನುಕ್ರಮ' ಮತ್ತು ಅಸ್ಸಾಂ ರಾಜ್ಯದ ಅನುಭವ

ಪೌರತ್ವ ತಿದ್ದುಪಡಿ ಕಾಯ್ದೆಯು ಅಸ್ತಿತ್ವದಲ್ಲಿರುವ ನಾಗರಿಕರ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಸಂಘ ಪರಿವಾರ ಹೇಳಿಕೊಳ್ಳುತ್ತದೆ. ಆದಾಗ್ಯೂ, ಕೇಂದ್ರ ಗೃಹ ಸಚಿವರು ಸಂಸತ್ತಿನ ಒಳಗೆ ಮತ್ತು ಹೊರಗೆ, 'ಕಾಲಾನುಕ್ರಮ ಸಂಜಿಯೇ' – ಅಂದರೆ, ಕಾಲಾನುಕ್ರಮವನ್ನು ಅರ್ಥಮಾಡಿಕೊಳ್ಳಿ ಎಂದು ಹೇಳಿದರು. ಆ ಕಾಲಾನುಕ್ರಮ ಏನಾಗಿತ್ತು? ಮೊದಲು, CAA ಬರುತ್ತದೆ, ನಂತರ NRC ಬರುತ್ತದೆ. ಅದು ಆದೇಶ. ಸರಿಯಾದ ದಾಖಲೆಗಳನ್ನು ನೀಡಲು ಸಾಧ್ಯವಾಗದವರು NRCಯಲ್ಲಿ ಸೇರಿಸಲು CAA ಮಾನದಂಡಗಳ ಆಧಾರದ ಮೇಲೆ ಪರಿಶೀಲನೆಗೆ ಒಳಗಾಗಬೇಕಾಗುತ್ತದೆ. ಹಾಗಾದರೆ CAA ಅಸ್ತಿತ್ವದಲ್ಲಿರುವ ನಾಗರಿಕರ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಒಬ್ಬರು ಹೇಗೆ ಹೇಳಬಹುದು? NRC ತಯಾರಿಕೆಯ ಸಮಯದಲ್ಲಿ, ಅವರ ಪೋಷಕರ ಜನ್ಮಸ್ಥಳ ಸೇರಿದಂತೆ ವಿವರಗಳಿಗೆ ನಿಖರವಾದ ಉತ್ತರಗಳನ್ನು ನೀಡಲು ಸಾಧ್ಯವಾಗದವರ ಪೌರತ್ವವು ಅನುಮಾನದ ನೆರಳಿನಲ್ಲಿ ಬೀಳುತ್ತದೆ. ಅಸ್ಸಾಂನಲ್ಲಿ NRC ಜಾರಿಗೆ ಬಂದಾಗ ನಾವು ಇದರ ಸ್ಪಷ್ಟ ಚಿತ್ರಣವನ್ನು ನೋಡಿದ್ದೇವೆ. ಅಲ್ಲಿ ಸುಮಾರು 19 ಲಕ್ಷ ಜನರನ್ನು ಹೊರಗಿಡಲಾಯಿತು. ಹೊರಗಿಡಲ್ಪಟ್ಟವರಲ್ಲಿ ಮೂರನೇ ಎರಡರಷ್ಟು ಮಹಿಳೆಯರಾಗಿದ್ದರು.

ಜನಸಂಖ್ಯೆಯ ಶೇಕಡಾ 42 ರಷ್ಟು ಜನರ ಸ್ಥಿತಿ...

ಸಂಘ ಪರಿವಾರದ ಪ್ರಾಥಮಿಕ ಗುರಿಗಳು ಧಾರ್ಮಿಕ ಅಲ್ಪಸಂಖ್ಯಾತರಾಗಿದ್ದರೂ, ಅಶಿಕ್ಷಿತರು ಮತ್ತು ಬಡವರು ಸಹ ಅಗತ್ಯ ದಾಖಲೆಗಳನ್ನು ಹೊಂದಿಲ್ಲದಿರಬಹುದು. ಅವರ ಪೌರತ್ವವೂ ಅನುಮಾನದ ನೆರಳಿನಲ್ಲಿ ಬೀಳುತ್ತದೆ. ಸ್ಪಷ್ಟ ದಾಖಲೆಗಳ ಅನುಪಸ್ಥಿತಿಯಲ್ಲಿ ಆದಿವಾಸಿಗಳು ಮತ್ತು ಟ್ರಾನ್ಸ್‌ಜೆಂಡರ್‌ಗಳ ಪೌರತ್ವವು ಸಹ ಅನುಮಾನಕ್ಕೆ ಒಳಗಾಗುತ್ತದೆ. ಭಾರತದಲ್ಲಿ ಸುಮಾರು ಶೇ. 42ರಷ್ಟು ಜನರಿಗೆ ಜನನ ಪ್ರಮಾಣಪತ್ರಗಳಿಲ್ಲ ಎಂದು ಅಂದಾಜಿಸಲಾಗಿದೆ. ಅವರ ಪೌರತ್ವವನ್ನು ಹೇಗೆ ನಿರ್ಧರಿಸಲಾಗುತ್ತದೆ ಎಂಬುದನ್ನು ಇನ್ನೂ ಸ್ಪಷ್ಟಪಡಿಸಲಾಗಿಲ್ಲ. ಇದರರ್ಥ ಅಗತ್ಯ ದಾಖಲೆಗಳ ಕೊರತೆಯಿಂದಾಗಿ ಕೋಟ್ಯಂತರ ಜನರು ಭಾರತೀಯ ನಾಗರಿಕರಾಗುವುದನ್ನು ತಡೆಯಲಾಗುತ್ತದೆ. ಅವರನ್ನು ಬಂಧನ ಕೇಂದ್ರಗಳಲ್ಲಿ ಬಂಧಿಸಲಾಗುತ್ತದೆ ಅಥವಾ 'ನಾಗರಿಕ ಹಕ್ಕುಗಳಿಲ್ಲದ ಜನಸಮೂಹ'ವಾಗುತ್ತಾರೆ. ಇದು ನಮ್ಮನ್ನು ಕಾಡುವ ಕರಾಳ ವಾಸ್ತವ ಸಂಗತಿಯಾಗಿದೆ.

ನಾಜಿ ಜರ್ಮನಿಯ ಪ್ರತಿ...

ಇಂದು ಭಾರತದಲ್ಲಿ ನಾವು ನೋಡುತ್ತಿರುವ ಕರಾಳ ವಾಸ್ತವಕ್ಕೆ ನಾಜಿ– ಜರ್ಮನಿಯಲ್ಲಿಯೂ ಇದೇ ರೀತಿಯ ಸಮಾನಾಂತರತೆಯನ್ನು ಕಾಣಬಹುದು. ವಿಶೇಷವಾಗಿ ಬಿಹಾರದಲ್ಲಿ ಮತದಾರರ ಪಟ್ಟಿಯನ್ನು ಪರಿಷ್ಕರಿಸುವ ನೆಪದಲ್ಲಿ ಭಾರತದ ಚುನಾವಣಾ ಆಯೋಗ (ಇಸಿಐ) ಇತ್ತೀಚೆಗೆ ತೆಗೆದುಕೊಂಡ ಕ್್ರವ್ಂಗ್ಳ್ೊಂದಿಗ್, NRC ತಯಾರಿಸಲು ಹಿಂಬಾಗಿಲಿನ ಪ್ರಯತ್ನ ನಡೆಸುತ್ತಿದೆ ಎಂಬುದನ್ನು ಸೂಚಿಸುತ್ತದೆ. ಸೆಪ್ಟೆಂಬರ್ 15, 1935ರಂದು, ನಾಜಿ ಜರ್ಮನಿ ನ್ಯೂರೆಂಬರ್ಗ್ ಕಾನೂನುಗಳನ್ನು ಜಾರಿಗೆ ತಂದಿತು. ಇದು ಯೆಹೂದ್ಯರ ವಿರೋಧಿಯಾಗಿತ್ತು ಮತ್ತು ಜನಾಂಗೀಯ ಕಾನೂನುಗಳ ಒಂದು ಗುಂಪಾಗಿತ್ತು.

ಧರ್ಮದಿಂದ ಜನಾಂಗಕ್ಕೆ ಮರುವ್ಯಾಖ್ಯಾನ

ಇದು ಮುಖ್ಯವಾಗಿ ಎರಡು ಕಾನೂನುಗಳನ್ನು ಒಳಗೊಂಡಿತ್ತು, ಇವೆರಡನ್ನೂ ರೀಚ್ ಪೌರತ್ವ ಕಾನೂನು ಮತ್ತು ಜರ್ಮನ್ ರಕ್ತ ಮತ್ತು ಜರ್ಮನ್ ಗೌರವದ ರಕ್ಷಣೆಗಾಗಿ ತಂದ ಕಾನೂನುಗಳಾಗಿತ್ತು ಎನ್ನಲಾಗುತ್ತದೆ. ಮೊದಲ ಕಾನೂನು 'ಜರ್ಮನ್ ಅಥವಾ ಸಂಬಂಧಿತ ರಕ್ತ' ಹೊಂದಿರುವ ಜನರು ಮಾತ್ರ ರೀಚ್‌ನ ನಾಗರಿಕರಾಗಬಹುದು ಎಂದು ಘೋಷಿಸಿತು. ಯಹೂದಿಗಳು ಮತ್ತು 'ಅನಪೇಕ್ಷಿತ' ಎಂದು ಪರಿಗಣಿಸಲಾದ ಇತರರನ್ನು 'ರಾಜ್ಯ ಪ್ರಜೆಗಳು' ಎಂದು ವರ್ಗೀಕರಿಸಲಾಯಿತು ಮತ್ತು ಮತದಾನದ ಹಕ್ಕು, ಸಾರ್ವಜನಿಕ ಹುದ್ದೆಯನ್ನು ಹೊಂದುವುದು ಮತ್ತು ಕಾನೂನು ರಕ್ಷಣೆಯನ್ನು ಅನುಭವಿಸುವುದು ಸೇರಿದಂತೆ ಪೌರತ್ವ ಹಕ್ಕುಗಳನ್ನು ಕಸಿದುಕೊಳ್ಳಲಾಯಿತು. ಎರಡನೇ ಕಾನೂನು ಯಹೂದಿಗಳು ಮತ್ತು 'ಜರ್ಮನ್ ಅಥವಾ ಸಂಬಂಧಿತ ರಕ್ತದ ನಾಗರಿಕರ' ನಡುವಿನ ವಿವಾಹಗಳು ಮತ್ತು ವಿವಾಹೇತರ ಸಂಬಂಧಗಳನ್ನು ನಿಷೇಧಿಸಿತು. ಇದು ಯಹೂದಿಗಳು 45 ವರ್ಷದೊಳಗಿನ ಜರ್ಮನ್ ಮಹಿಳೆಯರನ್ನು ತಮ್ಮ ಮನೆಗಳಲ್ಲಿ ನೇಮಿಸಿಕೊಳ್ಳುವುದನ್ನು ನಿಷೇಧಿಸಿತು ಮತ್ತು ಯಹೂದಿಗಳು ಜರ್ಮನ್ ಧ್ವಜವನ್ನು ಪ್ರದರ್ಶಿಸುವುದನ್ನು ಕೂಡ ನಿಷೇಧಿಸಿತು.

ಈ ಕಾನೂನುಗಳು ಯಹೂದಿಯರ ಗುರುತನ್ನು ಧಾರ್ಮಿಕತೆಯಿಂದ ಜನಾಂಗೀಯ ವರ್ಗಕ್ಕೆ ಮರು ವ್ಯಾಖ್ಯಾನಿಸಿದವು. ವೈಯಕ್ತಿಕ ನಂಬಿಕೆಗಳು ಅಥವಾ ಧಾರ್ಮಿಕ ಆಚರಣೆಗಳನ್ನು ಲೆಕ್ಕಿಸದೆ ಯಾರನ್ನು ಯಹೂದಿ ಎಂದು ಪರಿಗಣಿಸಬೇಕೆಂದು ನಿರ್ಧರಿಸಲು ಪೂರ್ವಜರನ್ನೂ ಕೂಡ ಬಳಸಲಾಗಿತ್ತು. ಮೂರು ಅಥವಾ ನಾಲ್ಕು ಪೀಳಿಗೆಯ ಅಂದರೆ, ಯಹೂದಿ ಅಜ್ಜ–ಅಜ್ಜಿಯರನ್ನು ಹೊಂದಿರುವ ಜನರನ್ನು ಯಹೂದಿಗಳು ಎಂದು ವರ್ಗೀಕರಿಸಲಾಯಿತು. ಆದರೆ ಒಬ್ಬರು ಅಥವಾ ಇಬ್ಬರು ಅಜ್ಜ–

ಅಜ್ಜಿಯರನ್ನು ಹೊಂದಿರುವವರನ್ನು 'ಮಿಶ್ಲಿಂ'ಗೆ ಅಥವಾ ಮಿಶ್ರ ಜನಾಂಗ' ಎಂಬ ವಿಭಿನ್ನ ಕಾನೂನು ಸ್ಥಾನಮಾನದೊಂದಿಗೆ ಲೇಬಲ್ ಮಾಡಲಾಯಿತು. ನ್ಯೂರೆಂಬರ್ಗ್ ಕಾನೂನುಗಳು ಯಹೂದಿಗಳನ್ನು ಕಾನೂನಿನ ನೆಪದಲ್ಲಿ ಕಿರುಕುಳ ನೀಡುವ ಮೂಲಕ ನಿರ್ಣಾಯಕ ಹೆಜ್ಜೆಯನ್ನು ಗುರುತಿಸಿದವು. ಹೀಗೆ ಮಿತಿಮೀರಿದ ಮತ್ತಷ್ಟು ತಾರತಮ್ಯ, ಹೊರಗಿಡುವಿಕೆ ಮತ್ತು ಅಂತಿಮವಾಗಿ, ಹತ್ಯಾಕಾಂಡಕ್ಕೆ ಅಡಿಪಾಯ ಹಾಕಿದವು.

ನಾಜಿ ಜರ್ಮನಿ ಮತ್ತು ಫ್ಯಾಸಿಸ್ಟ್ ಇಟಲಿಯಿಂದ ಸ್ಫೂರ್ತಿ

ನಾಜಿ ಜರ್ಮನಿ ಮತ್ತು ಭಾರತದ ಹಿಂದುತ್ವ ಆಡಳಿತಗಾರರ ನಡುವಿನ ಹೋಲಿಕೆಗಳು ವಿಷಯ ಮತ್ತು ಉದ್ದೇಶದಲ್ಲಿ ಎಷ್ಟು ಸ್ಪಷ್ಟವಾಗಿವೆಯೆಂದರೆ, ಅವುಗಳನ್ನು ಮತ್ತಷ್ಟು ವಿವರಿಸುವ ಅಗತ್ಯವಿಲ್ಲ. ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ, 'ರಾಷ್ಟ್ರೀಯ ಸ್ವಯಂಸೇವಕ ಸಂಘ' (ಆರ್‌ಎಸ್‌ಎಸ್) 1920 ಮತ್ತು 1930ರ ದಶಕದಲ್ಲಿ ಆರಂಭದ ಅದರ ರಚನೆಯ ವರ್ಷಗಳಲ್ಲಿ ನಾಜಿ ಜರ್ಮನಿ ಮತ್ತು ಫ್ಯಾಸಿಸ್ಟ್ ಇಟಲಿಯಿಂದ ಸ್ಫೂರ್ತಿ ಪಡೆದಿದೆ ಎಂಬುದನ್ನು ನಾವು ನೆನಪು ಮಾಡಿಕೊಳ್ಳಬೇಕಾಗಿದೆ. ಹಿಂದೂ ಮಹಾಸಭಾದ ಅಧ್ಯಕ್ಷ ಬಿ.ಎಸ್.ಮೂಂಜೆ ಮತ್ತು ಆರ್‌ಎಸ್‌ಎಸ್ ಸಂಸ್ಥಾಪಕ ಕೇಶವ್ ಬಲಿರಾಮ್ ಹೆಡ್ಗೆವಾರ್ ಅವರ ಮಾರ್ಗದರ್ಶಕರಾಗಿದ್ದರು. ಬಿ.ಎಸ್. ಮೂಂಜೆ 1931ರಲ್ಲಿ ಮುಸೊಲಿನಿಯೊಂದಿಗಿನ ಭೇಟಿಯು ಇಟಲಿ ಮತ್ತು ಭಾರತದಲ್ಲಿ ಹಿಂದೂ ರಾಷ್ಟ್ರೀಯತಾವಾದಿ ವಲಯಗಳ ನಡುವಿನ ಫ್ಯಾಸಿಸ್ಟ್ ವಿಚಾರಗಳ ಅಡ್ಡ–ಪರಾಗಸ್ಪರ್ಶದಲ್ಲಿ ಒಂದು ಪ್ರಮುಖ ಕ್ಷಣವಾಗಿತ್ತು.

ಮೂಂಜೆ ಮತ್ತು ಮುಸೊಲಿನಿ

ಈ ನಿಟ್ಟಿನಲ್ಲಿ ಮಾರ್ಚ್ 15ರಿಂದ 24, 1931 ರವರೆಗೆ, ಬಿ.ಎಸ್.ಮೂಂಜೆ ಇಟಲಿಗೆ ಪ್ರಯಾಣ ಬೆಳೆಸಿದರು. ಅಲ್ಲಿ ಅವರು ಪ್ರಧಾನಿ ಬೆನಿಟೊ ಮುಸೊಲಿನಿಯನ್ನು ಭೇಟಿಯಾದರು. ತಮ್ಮ ದಿನಚರಿಯಲ್ಲಿ, ಮೂಂಜೆ "ಇಟಲಿಯ ಮಿಲಿಟರಿ ಪುನರುತ್ಥಾನ"ದ ಬಗ್ಗೆ ಮುಸೊಲಿನಿಯ ದೃಷ್ಟಿಕೋನವನ್ನು ಶ್ಲಾಘಿಸಿದರು. ಹಾಗೆಯೇ "ಭಾರತ ಮತ್ತು ವಿಶೇಷವಾಗಿ ಹಿಂದೂ ಭಾರತಕ್ಕೆ ಹಿಂದೂಗಳ ಮಿಲಿಟರಿ ಪುನರುತ್ಥಾನಕ್ಕಾಗಿ ಅಂತಹ ಒಂದು ಸಂಸ್ಥೆಯ ಅಗತ್ಯವಿದೆ" ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಇಟಲಿಯ ಮಿಲಿಟರಿ ಪುನರುತ್ಥಾನದಿಂದ ಪ್ರೇರಿತರಾಗಿ, ಮೂಂಜೆ 1935ರಲ್ಲಿ 'ಕೇಂದ್ರ ಹಿಂದೂ ಮಿಲಿಟರಿ ಶಿಕ್ಷಣ ಸೊಸೈಟಿ'ಯನ್ನು ಮತ್ತು 1937ರಲ್ಲಿ ನಾಸಿಕ್‌ನಲ್ಲಿ 'ಭೋನ್ಸಾಲಾ ಮಿಲಿಟರಿ ಶಾಲೆ'ಯನ್ನು ಸ್ಥಾಪಿಸಿದರು. ಇದೇ ರೀತಿಯ ಮಾರ್ಗಗಳಲ್ಲಿ 'ಹಿಂದೂ ಭಾರತ'ವನ್ನು ಮಿಲಿಟರೀಕರಣಗೊಳಿಸುವ ಗುರಿಯನ್ನು ಹೊಂದಿದ್ದರು. ಹಾಗಾಗಿಯೇ, ಆರ್‌ಎಸ್‌ಎಸ್ ಇಟಲಿ ಮಾದರಿಯ ಅಂಶಗಳನ್ನು ಅಳವಡಿಸಿಕೊಂಡಿತು ಎಂಬುದನ್ನು ನಾವು ಅರಿಯಬೇಕು. ನೇಮಕಾತಿ ಮತ್ತು ಸಾಂಸ್ಥಿಕ ರಚನೆಯಲ್ಲಿ ಒಪೇರಾ ನಾಜಿಯೋನೇಲ್ ಬಲಿಲ್ಲಾ (ಇಟಾಲಿಯನ್ ಫ್ಯಾಸಿಸ್ಟ್ ಯುವ ಸಂಘಟನೆ)ಗೆ ಗಮನಾರ್ಹ ಹೋಲಿಕೆಗಳನ್ನು ಹೊಂದಿತ್ತು. ಮುಸೊಲಿನಿಯ ವಿಧಾನಗಳ ಬಗ್ಗೆ ಮೂಂಜೆಯವರ ಪ್ರಯತ್ನಗಳು ಮತ್ತು ಮೆಚ್ಚುಗೆಯು ಭಾರತದಲ್ಲಿ ಆರ್‌ಎಸ್‌ಎಸ್ ಮತ್ತು ಸಂಬಂಧಿತ ಹಿಂದೂ ರಾಷ್ಟ್ರೀಯತಾವಾದಿ ಸಂಸ್ಥೆಗಳ ಮಿಲಿಟರಿ ಮತ್ತು ಸಾಂಸ್ಥಿಕ ನೀತಿಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಹೀಗಾಗಿ, ಅವರು ಆರ್‌ಎಸ್‌ಎಸ್‌ನ ಸಾಂಸ್ಥಿಕ ಅಭಿವೃದ್ಧಿಯ ಮೇಲೆ ಶಾಶ್ವತವಾದ ಪ್ರಭಾವ ಬೀರಿದ್ದಾರೆ. ಇಟಾಲಿಯನ್ ಫ್ಯಾಸಿಸ್ಟ್ ಯುವಕರು ಮತ್ತು ಅರೆಸೈನಿಕ ರಚನೆಗಳ ಅಂಶಗಳನ್ನು ಮೂಂಜೆ ಪ್ರತಿಬಿಂಬಿಸುತ್ತಾರೆ.

ಅವರ ಎರಡನೇ ಮುಖ್ಯಸ್ಥ ಮಾಧವ ಸದಾಶಿವರಾವ್ ಗೋಲ್ವಾಲ್ಕರ್ ಮತ್ತು ಸಿದ್ಧಾಂತವಾದಿ ವಿನಾಯಕ ದಾಮೋದರ್ ಸಾವರ್ಕರ್ ಸೇರಿದಂತೆ, ಆರಂಭಿಕ ಆರ್‌ಎಸ್‌ಎಸ್ ನಾಯಕರು ಹಿಟ್ಲರ್ ಮತ್ತು ಮುಸೊಲಿನಿಯ ಆಡಳಿತಗಳ ಅಂಶಗಳನ್ನು ಬಹಿರಂಗವಾಗಿ ಮೆಚ್ಚಿದರು. ಅವರು ವಿಶೇಷವಾಗಿ "ಸಾಂಸ್ಕೃತಿಕ ರಾಷ್ಟ್ರೀಯತೆ" ಎಂಬ ಪರಿಕಲ್ಪನೆ ಮತ್ತು ಪ್ರಬಲ ಜನಾಂಗೀಯ ಅಥವಾ ಧಾರ್ಮಿಕ ಗುರುತಿನ ಸುತ್ತ ಸಮಾಜವನ್ನು ಸಂಘಟಿಸುವ ಫ್ಯಾಸಿಸ್ಟ್ ಮಾದರಿಯಿಂದ ಪ್ರಭಾವಿತರಾಗಿದ್ದರು.

ಫ್ಯಾಸಿಸ್ಟ್ ಮತ್ತು ನಾಜಿ ಮಾದರಿಗಳು ಮತ್ತು ಆರ್‌ಎಸ್‌ಎಸ್‌ನ ರಾಷ್ಟ್ರೀಯತೆ

ಗೋಲ್ವಾಲ್ಕರ್ ಅವರ ಪುಸ್ತಕ "ನಾವು ಅಥವಾ ನಮ್ಮ ರಾಷ್ಟ್ರೀಯತೆಯ ವ್ಯಾಖ್ಯಾನ" (`We or Our Nationhood Defined') (1939) ಪುಸ್ತಕವು ಹಿಟ್ಲರ್‌ನ ನೀತಿಗಳ ಬಗ್ಗೆ ಮೆಚ್ಚುಗೆಯನ್ನು ಸ್ಪಷ್ಟವಾಗಿ ಉಲ್ಲೇಖಿಸಿ, ಭಾರತವನ್ನು ಹಿಂದೂ ರಾಷ್ಟ್ರವೆಂದು ವ್ಯಾಖ್ಯಾನಿಸಬೇಕು ಮತ್ತು ನಾಜಿಗಳು ಯಹೂದಿಗಳನ್ನು ಹೇಗೆ ನಡೆಸಿಕೊಂಡರು, ಅದೇ ರೀತಿ ನಮ್ಮ ದೇಶದಲ್ಲಿ ಅಲ್ಪಸಂಖ್ಯಾತರನ್ನು ನಡೆಸಿಕೊಳ್ಳಬೇಕೆಂಬುದನ್ನು ಈ ಪುಸ್ತಕದಲ್ಲಿ ವಾದಿಸಲಾಗಿದೆ. ಈ ಪುಸ್ತಕವು ಆರ್‌ಎಸ್‌ಎಸ್‌ನ ಸಿದ್ಧಾಂತವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು ಮತ್ತು ಸಂಘಟನೆಯನ್ನು ಫ್ಯಾಸಿಸ್ಟ್ ಚಿಂತನೆಗೆ ಅನುಗುಣವಾಗಿ ಕಟ್ಟಿಕೊಟ್ಟಿತು. ಗೋಲ್ವಾಲ್ಕರ್ ತಮ್ಮ ಸಾರ್ವಜನಿಕ ಭಾಷಣಗಳಲ್ಲಿ ಆರೆಸ್ಸೆಸ್‌ನ ರಾಷ್ಟ್ರೀಯತೆಯ ದೃಷ್ಟಿಕೋನವನ್ನು ಫ್ಯಾಸಿಸ್ಟ್ ಮತ್ತು ನಾಜಿ ಮಾದರಿಗಳಿಗೆ ಜೋಡಿಸಿದ್ದಾರೆ. ತಮ್ಮ 'ಬಂಚ್ ಆಫ್ ಥಾಟ್ಸ್' (Bunch of Thoughts)ನಲ್ಲಿ, ಅವರು ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ಕಮ್ಯುನಿಸ್ಟರು ಭಾರತದ ಆಂತರಿಕ ಬೆದರಿಕೆಗಳು ಎಂದು ಬಣ್ಣಿಸಿದ್ದಾರೆ.

ನ್ಯೂರೆಂಬರ್ಗ್ ಕಾನೂನುಗಳು ಮತ್ತು ಬಿಹಾರದ ಚುನಾವಣಾ ವ್ಯವಸ್ಥೆ

ಜನಾಂಗೀಯ ನ್ಯೂರೆಂಬರ್ಗ್ ಕಾನೂನುಗಳನ್ನು ಜಾರಿಗೆ ತಂದ ಸ್ವಲ್ಪ ಸಮಯದ ನಂತರ ನಾಜಿ ಜರ್ಮನಿ ಎಲ್ಲಾ ಪ್ರಜಾಪ್ರಭುತ್ವ ಹಕ್ಕುಗಳನ್ನು ಸಂಪೂರ್ಣವಾಗಿ ರದ್ದುಗೊಳಿಸಿತು ಮತ್ತು ಚುನಾವಣೆಗಳನ್ನು ನಡೆಸುವುದನ್ನು ನಿಲ್ಲಿಸಿತು. ಸಿಎಎ, ಎನ್‌ಆರ್‌ಸಿ ಮತ್ತು ಬಿಹಾರದಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆಗಳು ನಾಜಿ ಜರ್ಮನಿಯನ್ನು ಅನುಸರಿಸುವ ನೀತಿಗಳಾಗಿವೆ, ಇವುಗಳನ್ನು ಇಂದಿನ ಭಾರತಕ್ಕೆ ಸೂಕ್ತವೆಂದು ಪರಿಗಣಿಸಲಾಗಿದೆ ಎಂದು ಆರ್‌ಎಸ್‌ಎಸ್ ಜಾರಿಗೆ ತರುತ್ತಿದೆ. ಅದಕ್ಕಾಗಿಯೇ ಭಾರತೀಯ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪ್ರಸ್ತುತ ಭಾರತೀಯ ಸನ್ನಿವೇಶವನ್ನು 'ಶಾಸ್ತ್ರೀಯ ಫ್ಯಾಸಿಸಂ'ಗೆ ವಿರುದ್ಧವಾಗಿ ನವ–ಫ್ಯಾಸಿಸಂ ಎಂದು ಸರಿಯಾಗಿ ಗುರುತಿಸಿದೆ.

ಧಾರ್ಮಿಕ ಗುರುತಿನ ಆಧಾರದ ಮೇಲೆ ಪೌರತ್ವ

ನಾಜಿ ರೀಚ್ ಪೌರತ್ವ ಕಾನೂನನ್ನು ಸಿಎಎ ಪ್ರತಿಧ್ವನಿಸುತ್ತದೆ. ಸಿಎಎ ಮತ್ತು ಎನ್‌ಆರ್‌ಸಿ ಎರಡನ್ನು ಸಂಯೋಜಿಸಿದಾಗ, ಪೌರತ್ವವು ಧಾರ್ಮಿಕ ಗುರುತಿಗೆ ಸಂಬಂಧಿಸಿದ ವ್ಯವಸ್ಥೆಯನ್ನು ಸೃಷ್ಟಿಸುತ್ತದೆ. ಈ ಕ್ರಮಗಳು ನಿರ್ದಿಷ್ಟವಾಗಿ ಭಾರತೀಯ ಮುಸ್ಲಿಮರನ್ನು ಗುರಿಯಾಗಿರಿಸಿಕೊಂಡಿವೆ. ಸಂಭಾವ್ಯವಾಗಿ ಅವರನ್ನು ಎರಡನೇ ದರ್ಜೆಯ ನಾಗರಿಕರನ್ನಾಗಿ ಅಥವಾ ಅವರು ಅಗತ್ಯವಿರುವ ದಾಖಲೆಗಳನ್ನು ನೀಡಲು ಸಾಧ್ಯವಾಗದಿದ್ದರೆ ಅವರನ್ನು ದೇಶರಹಿತರನ್ನಾಗಿ ಮಾಡುತ್ತವೆ. ನಾಜಿ ಕಾನೂನುಗಳು ಯಹೂದಿಗಳು ಮತ್ತು ಇತರ ಅಲ್ಪಸಂಖ್ಯಾತರನ್ನು ವ್ಯವಸ್ಥಿತವಾಗಿ ಪ್ರತ್ಯೇಕಿಸಿ ಹಕ್ಕುಗಳಿಂದ ವಂಚಿತಗೊಳಿಸಿದವು ಎಂಬುದನ್ನು ಇದು ಪ್ರತಿಬಿಂಬಿಸುತ್ತದೆ.

ಯಹೂದಿಗಳನ್ನು ಸಾರ್ವಜನಿಕ ಜೀವನದಿಂದ ಪ್ರತ್ಯೇಕಿಸಿದಂತೆಯೇ...

ಬಿಹಾರದಂತಹ ರಾಜ್ಯದಲ್ಲಿ ವಿಶೇಷ ತೀವ್ರ ಪರಿಷ್ಕರಣೆ (SIR) ಪ್ರಕ್ರಿಯೆಯು ಅಂಚಿನಲ್ಲಿರುವ ಸಮುದಾಯಗಳ, ವಿಶೇಷವಾಗಿ ಅಲ್ಪಸಂಖ್ಯಾತರ ಹಕ್ಕು ನಿರಾಕರಣೆಯ ಬಗ್ಗೆ ಗಂಭೀರ ಕಳವಳಗಳನ್ನು ಹುಟ್ಟುಹಾಕಿದೆ. ಕೆಲವು ಜನಸಂಖ್ಯೆಯನ್ನು ರಾಜಕೀಯ ಭಾಗವಹಿಸುವಿಕೆಯಿಂದ ಹೊರಗಿಡಲು ಅಧಿಕಾರಶಾಹಿ ಪ್ರಕ್ರಿಯೆಗಳನ್ನು ಬಳಸುವ ವಿಶಾಲ ಮಾದರಿಯ ಭಾಗವಾಗಿ ಇದನ್ನು ನೋಡಬೇಕಾಗಿದೆ. ಇದು ನಾಜಿ ಜರ್ಮನಿಯು ಸಾರ್ವಜನಿಕ ಜೀವನದಿಂದ ಯಹೂದಿಗಳನ್ನು ಪ್ರತ್ಯೇಕಿಸಲು ಕಾನೂನು ಮತ್ತು ಆಡಳಿತಾತ್ಮಕ ವಿಧಾನಗಳನ್ನು ಹೇಗೆ ಬಳಸಿತು ಎಂಬುದನ್ನು ನೆನಪಿಸುತ್ತದೆ. ಧಾರ್ಮಿಕ ಮಾರ್ಗಗಳಲ್ಲಿ ಪೌರತ್ವವನ್ನು ವ್ಯಾಖ್ಯಾನಿಸಲು ಮತ್ತು ಅಲ್ಪಸಂಖ್ಯಾತರ ಹಕ್ಕು ನಿರಾಕರಣೆಗೆ ಕಾನೂನು ಮತ್ತು ಅಧಿಕಾರಶಾಹಿಯ ಬಳಕೆಯು ಆ ದಿಕ್ಕಿನಲ್ಲಿ ಅಪಾಯಕಾರಿ ಹೆಜ್ಜೆಗಳಾಗಿವೆ. ಒಟ್ಟಾರೆಯಾಗಿ, ಈ ಬೃಹತ್ ಮತ್ತು ಅಪ್ರಕಟಿತ ಅಭಿಯಾನವು ದೇಶದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ಮತ್ತು ಜಾತ್ಯತೀತತೆಗೆ ತೀವ್ರ ಅಪಾಯದಿಂದ ತುಂಬಿರುವ ಭವಿಷ್ಯವನ್ನು ಸೂಚಿಸುತ್ತದೆ. 1933ರಲ್ಲಿ ನಾಜಿಗಳು ಅಧಿಕಾರಕ್ಕೆ ಬಂದ ನಂತರ ಜರ್ಮನಿಯಲ್ಲಿ ಏನಾಯಿತು ಎಂಬುದರ ಭಯಾನಕತೆಯನ್ನು ನೆನಪಿಸಿಕೊಳ್ಳದೆ ಇರಲು ಸಾಧ್ಯವಿಲ್ಲ. ಅವರು ಯಹೂದಿಗಳ ವಿರುದ್ಧ ತಾರತಮ್ಯ ಮಾಡಲು ಕಾನೂನಿನಲ್ಲಿ ಬದಲಾವಣೆಗಳೊಂದಿಗೆ ಪ್ರಾರಂಭಿಸಿದ್ದರು. ಭಾರತದಲ್ಲಿ ಈ ನೀತಿಗಳು ಮುಸ್ಲಿಮರು ಮತ್ತು ಇತರ ಅಂಚಿನಲ್ಲಿರುವ ಗುಂಪುಗಳನ್ನು ಗುರಿಯಾಗಿಸಿಕೊಂಡಿವೆ, ಭಾರತೀಯ ಪ್ರಜಾಪ್ರಭುತ್ವವು ದೈವಪ್ರಭುತ್ವಾತ್ಮಕ ರಾಜ್ಯಕ್ಕೆ ಮೂಗು ತೂರಿಸುವ ಬಗ್ಗೆ ಗಂಭೀರ ಕಳವಳಗಳನ್ನು ಹುಟ್ಟುಹಾಕುತ್ತಿವೆ.

ಬ್ರಿಟಿಷರನ್ನು ಸೋಲಿಸಿದ ಅದೇ ಒಗ್ಗಟ್ಟಿನಿಂದ

ಜಾತ್ಯತೀತತೆ ಮತ್ತು ಸಮಾಜವಾದವು ವಿದೇಶಿ ಪರಿಕಲ್ಪನೆಗಳು ಎಂದು ಕೊರಗುವವರು ವಾಸ್ತವವಾಗಿ ತಮ್ಮ ಕಾರ್ಯಸೂಚಿಯನ್ನು ಮುಂದುವರಿಸಲು ವಿದೇಶಿ ವಿಚಾರಗಳನ್ನು (ಸಾಮ್ರಾಜ್ಯಶಾಹಿ, ನಾಜಿ ಮತ್ತು ಫ್ಯಾಸಿಸ್ಟ್) ಬಳಸುತ್ತಿದ್ದಾರೆ. ಬ್ರಿಟಿಷರನ್ನು ಸೋಲಿಸಿದ ಅದೇ ಒಗ್ಗಟ್ಟಿನಿಂದ ನಾವು ಆರ್‌ಎಸ್‌ಎಸ್‌ನ ಕೋಮುವಾದಿ ಕಾರ್ಯಸೂಚಿಯನ್ನು ಸೋಲಿಸಬೇಕಾಗಿದೆ. ಆರ್‌ಎಸ್‌ಎಸ್ ಸ್ವಾತಂತ್ರ್ಯ ಹೋರಾಟದಿಂದ ದೂರವಿತ್ತು. ಆರ್‌ಎಸ್‌ಎಸ್ ಬೆಂಬಲವಿಲ್ಲದೆ ಎಲ್ಲಾ ಭಾರತೀಯರಿಗಾಗಿ ಭಾರತದ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ರಚಿಸಲಾಯಿತು. ಹಿಂದೂಗಳು, ಮುಸ್ಲಿಮರು, ಕ್ರಿಶ್ಚಿಯನ್ನರು, ಬೌದ್ಧರು, ಜೈನರು, ಪಾರ್ಸಿಗಳು, ಸಿಖ್ಖರು ಮತ್ತು ನಾಸ್ತಿಕರು ಒಟ್ಟಾಗಿ ನಿಂತು ಹೋರಾಡುವ ಮೂಲಕ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಮೊಣಕಾಲೂರಿಸಲಾಯಿತು. ಕಮ್ಯುನಿಸ್ಟರು ಸೇರಿದಂತೆ ಅನೇಕ ಧೈರ್ಯಶಾಲಿ ದೇಶಭಕ್ತರು ಆ ಹೋರಾಟದಲ್ಲಿ ತಮ್ಮ ಪ್ರಾಣವನ್ನು ತ್ಯಾಗಮಾಡಿದ್ದರು. ಆದ್ದರಿಂದ, ಈ ದೇಶವು ಅದರ ಎಲ್ಲಾ ವರ್ಗಗಳ ಜನರಿಗೆ ಸೇರಿದೆ ಮತ್ತು ನಮ್ಮ ಏಕತೆಯನ್ನು ಸಂರಕ್ಷಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳು ಕರ್ತವ್ಯ ನಮಗಿದೆ.

ಕೆಲಸದ ಸಮಯದ ಮೇಲಿನ ವರ್ಗ ಹೋರಾಟ!...

ಪುಟ 13 ರಿಂದ

ಅನುಗುಣವಾಗಿ ಕೈಬಿಟ್ಟಿರುವುದರಿಂದ, ರಿಂದ ಮಿಲಿಟರಿ ವೆಚ್ಚಗಳ ಏರಿಕೆಯನ್ನು ಈ ದೇಶಗಳ ದುಡಿಯುವ ಜನರಿಗೆ ನಷ್ಟ ಉಂಟುಮಾಡುವ ಮೂಲಕವೇ ಮಾಡಬೇಕಾಗುತ್ತದೆ. ಇದು ಕಾರ್ಮಿಕರ ಮೇಲೆ ಹೆಚ್ಚು ತೆರಿಗೆ ವಿಧಿಸುವ ರೂಪವನ್ನೋ ಅಥವಾ ಜನಕಲ್ಯಾಣ ವೆಚ್ಚಗಳ ಕಡಿತದ ರೂಪವನ್ನೋ ತೆಗೆದುಕೊಳ್ಳಬಹುದು.

ಕಾರ್ಮಿಕರ ಮೇಲೆ ಹೊರೆ ಹೆಚ್ಚಿಸುವ ಎರಡು ಪರ್ಯಾಯ ಮಾರ್ಗಗಳ ಪೈಕಿ, ಜನಕಲ್ಯಾಣ ವೆಚ್ಚಗಳ ಮೇಲಿನ ಕಡಿತವನ್ನು ಸುಲಭವಾಗಿ ಮಾಡಬಹುದು ಎಂಬುದು ನಿಸ್ಸಂಶಯವಾಗಿದೆ. ಆದರೂ, ಯಾವ ಮಾರ್ಗವನ್ನು ಅಳವಡಿಸಿಕೊಳ್ಳಲಾಗಿದೆ ಎಂಬುದು ಮುಖ್ಯವಲ್ಲ. ಏಕೆಂದರೆ, ಎರಡೂ ವಿಧಾನಗಳೂ ಕಾರ್ಮಿಕರ ಜೀವನ ಮಟ್ಟದಲ್ಲಿ ಕುಸಿತವನ್ನು ಉಂಟುಮಾಡುತ್ತವೆ. ಮಿಲಿಟರಿ ವೆಚ್ಚವನ್ನು ಜಿಡಿಪಿಯ ಶೇ. 2ರಿಂದ ಶೇ. 5ಕ್ಕೆ ಏರಿಕೆ ಮಾಡುವ ಉದ್ದೇಶದಿಂದ ಕಾರ್ಮಿಕರ ಮೇಲೆ ಜಿಡಿಪಿಯ ಶೇ. 3ರಷ್ಟು ಅಧಿಕ ಹೊರೆಯನ್ನು ಹೇರುವುದು ಒಂದು ಅಗಾಧವಾದ ಹೇರಿಕೆಯಾಗುತ್ತದೆ. ವಿಷಯವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, "ಕಲ್ಯಾಣಕಾರೀ ಬಂಡವಾಳಶಾಹಿ" ಎಂದು ಕರೆಯಲ್ಪಡುವ ದಿನಗಳು ಮುಗಿದಿವೆ ಮತ್ತು ವಿಶ್ವವು "ಪರಭಕ್ಷಕ ಬಂಡವಾಳಶಾಹಿ" ದಿನಗಳಿಗೆ ಮರಳಿದೆ ಎಂಬ ಸ್ಪಷ್ಟ ಸೂಚನೆಯನ್ನು ನ್ಯಾಟೋ ದೇಶಗಳು ಅಧಿಕೃತವಾಗಿ ನೀಡಿವೆ.

ಸಾಮ್ರಾಜ್ಯಶಾಹಿಯನ್ನು ಕಾಪಾಡಿಕೊಳ್ಳಲು

ನ್ಯಾಟೋ ದೇಶಗಳು ತಮ್ಮ ಮಿಲಿಟರಿ ವೆಚ್ಚವನ್ನು ಏರಿಸಲು ನಿರ್ಧರಿಸಿರುವುದಾದರೂ ಏಕೆ? ಪಶ್ಚಿಮ ಯುರೋಪಿಗೆ, ರಷ್ಯಾದ ಬೆದರಿಕೆಯ ಮೊರೆ ಹೋಗುವ ನೆಪವಂತೂ ಮಾಮೂಲಾಗಿ ಇದ್ದೇ ಇದೆ. ಆದರೆ, ಶೀತಲ ಸಮರವನ್ನು ಸಮರ್ಥಿಸಲು ಬಳಸಲಾದ ಸೋವಿಯತ್ ಬೆದರಿಕೆಯ ಉಚ್ಛ್ರಾಯ ಸ್ಥಿತಿಯಲ್ಲಿಯೂ ಸಹ, ಇಷ್ಟೊಂದು ಬೃಹತ್ ಮಟ್ಟದ ಮಿಲಿಟರಿ ವೆಚ್ಚಗಳನ್ನು ನ್ಯಾಟೋ ದೇಶಗಳು ಕಂಡಿರಲಿಲ್ಲ. ಜೊತೆಗೆ, ಅಮೆರಿಕವನ್ನು ಹೊರತುಪಡಿಸಿದರೆ, ಇಂದಿಗೂ ಸಹ ರಷ್ಯಾದ ವಾರ್ಷಿಕ ಮಿಲಿಟರಿ ವೆಚ್ಚವು ಯುರೋಪಿನ ನ್ಯಾಟೋ ದೇಶಗಳ ಒಟ್ಟು ವಾರ್ಷಿಕ ಮಿಲಿಟರಿ ವೆಚ್ಚದ ಮೂರನೇ ಒಂದು ಭಾಗಕ್ಕಿಂತಲೂ ಕಡಿಮೆ ಇದೆ. ಆದ್ದರಿಂದ, "ರಷ್ಯಾದ ಬೆದರಿಕೆ" ಎಂಬುದು ಕೇವಲ ಕಣ್ಣಿಗೆ ಮಣ್ಣೆರೆಚುವ ತಂತ್ರವಷ್ಟೇ. ನ್ಯಾಟೋ ದೇಶಗಳು ತಾವಾಗಿಯೇ ನಿಗದಿಪಡಿಸಿಕೊಂಡಿರುವ ಈ ಗಮನಾರ್ಹ ಮಟ್ಟದ ಬೃಹತ್ ಮಿಲಿಟರಿ ವೆಚ್ಚಗಳು, ತಮಗೆ ಸಂಭಾವ್ಯ ಸವಾಲುದಾರರು ಎಂದು ಪರಿಗಣಿಸಲ್ಪಟ್ಟ ಎಲ್ಲ ದೇಶಗಳ ವಿರುದ್ಧ ಬಲಪ್ರಯೋಗ ಮಾಡುವ ಮೂಲಕ ಕುಸಿಯುತ್ತಿರುವ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ವ್ಯವಸ್ಥೆಯನ್ನು ಕಾಪಾಡಿಕೊಳ್ಳುವ ಬಯಕೆಯಿಂದ ಪ್ರೇರೇಪಿಸಲ್ಪಟ್ಟಿವೆ. ಇರಾನ್ ಮೇಲೆ ನಡೆಸಿದ ಬಾಂಬ್ ದಾಳಿಯು ಈ ಬಯಕೆಯಿಂದಲೇ ಪ್ರೇರೇಪಿಸಲ್ಪಟ್ಟಿದೆ ಮತ್ತು ಮುಂಬರುವ ವರ್ಷಗಳಲ್ಲಿ ಅಂತಹ ಹಲವಾರು ಆಕ್ರಮಣಕಾರಿ ನಿದರ್ಶನಗಳನ್ನು ಕಾಣುವ ಸಾಧ್ಯತೆಯಿದೆ.

ಅಂತಹ ಒಂದು ಆಕ್ರಮಣಕ್ಕಾಗಿ ತಯಾರಿ ನಡೆಸುವ ಸಲುವಾಗಿ ಮುಂದುವರಿದ ದೇಶಗಳ ಕಾರ್ಮಿಕರು ಇಲ್ಲಿಯವರೆಗೆ ಅನುಭವಿಸಿದ ಜನಕಲ್ಯಾಣ ಕ್ರಮಗಳನ್ನೂ ಮರೆತುಬಿಡುವಂತೆ ಮಾಡಲಾಗುತ್ತಿದೆ. ಆದರೆ, ಕುಸಿಯುತ್ತಿರುವ ಸಾಮ್ರಾಜ್ಯಶಾಹಿಯು ಅತ್ಯಂತ ಅಪಾಯಕಾರಿಯಾಗುತ್ತದೆ, ಏಕೆಂದರೆ, ಅದು ಜಗತ್ತನ್ನು ದುರಂತಕ್ಕೆ ತಳ್ಳಲೂ ಹೇಸುವುದಿಲ್ಲ. ಇರಾನ್‌ನ ಪರಮಾಣು ತಾಣಗಳ ಮೇಲೆ ಬಾಂಬ್ ದಾಳಿ ಮಾಡುವಲ್ಲಿ ಒಳಗೊಂಡ ಎಚ್ಚರಗೇಡಿತನ ಇದಕ್ಕೆ ಒಂದು ಸಾಕ್ಷಿಯಾಗುತ್ತದೆ. ಆದ್ದರಿಂದ ಈ ಸಾಮ್ರಾಜ್ಯಶಾಹಿ ಎಚ್ಚರಗೇಡಿತನವನ್ನು ವಿರೋಧಿಸಲು ವಿಶ್ವಾದ್ಯಂತ ಜನರಲ್ಲಿ ಜಾಗೃತಿ ಮೂಡಿಸುವುದು ಅತ್ಯಗತ್ಯವಾಗುತ್ತದೆ.

"ಪ್ರಾಣ ಬಿಟ್ಟೇವು, ಭೂಮಿ ಬಿಡೆವು" ಎಂಬ ರೈತರ ದೃಢ ನಿರ್ಧಾರ, ಇದಕ್ಕೆ ಒತ್ತಾಸೆಯಾಗಿ ನಿಂತ ದೇಶದ ಜನಪರ ಚಳುವಳಿಗಳು, ಇವೆಲ್ಲಾ ಒಟ್ಟಿಗೆ ಸೇರಿ, ಅಂತಿಮವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು 'ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ 1777 ಎಕರೆ ಭೂಮಿಯ ಭೂಸ್ವಾಧೀನ ಪ್ರಕ್ರಿಯೆಯನ್ನು ಸಂಪೂರ್ಣ ಕೈಬಿಟ್ಟಿದ್ದೇವೆ' ಎಂದು ಘೋಷಿಸಿದರು. 1198 ದಿನಗಳ ಕಾಲ ಐತಿಹಾಸಿಕ ಹೋರಾಟ ನಡೆಸಿದ ರೈತರು ಅಂತಿಮವಾಗಿ ಗೆಲುವು ಸಾಧಿಸಿದ್ದಾರೆ. ಇಂದು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ದೇವನಹಳ್ಳಿಯ ಚನ್ನರಾಯಪಟ್ಟಣ ಎಂದರೆ, ಅಲ್ಲಿಯ ರೈತರ ಹೋರಾಟವೆಂದರೆ ಎಲ್ಲರಿಗೂ ಚಿರಪರಿಚಿತ. ಮಾತ್ರವಲ್ಲ, ತಮ್ಮ ಲಾಭಕೋರತನಕ್ಕಾಗಿ ಭೂಮಿ ಕಬಳಿಸುವ ಕಾರ್ಪೋರೇಟ್ ಶಕ್ತಿಗಳ ವಿರುದ್ಧ ನಡೆದ ಮಾದರಿ ಹೋರಾಟವಾಗಿದೆ. ಈ ಚಳುವಳಿ ಹುಟ್ಟಿಕೊಂಡಿದ್ದರ ಹಿನ್ನೆಲೆ ಮತ್ತು ಈ ದೀರ್ಘಾವಧಿಯಲ್ಲಿ ಚಳುವಳಿ ಎದುರಿಸಿದ ಸವಾಲುಗಳು, ಅದನ್ನೆಲ್ಲಾ ಎದುರಿಸಿ ದಿಟ್ಟವಾಗಿ ನಿಂತ ರೈತರ ಕುರಿತು ನಾವೆಲ್ಲರೂ ತಿಳಿದುಕೊಳ್ಳಲೇಬೇಕು.

ಎಚ್.ಆರ್. ನವೀನ್‌ಕುಮಾರ್, ಹಾಸನ



ದೇವನಹಳ್ಳಿ ಬಲವಂತದ ಭೂಸ್ವಾಧೀನ ವಿರುದ್ಧದ 1198 ದಿನಗಳ ಐತಿಹಾಸಿಕ ಹೋರಾಟ ರೈತರ ದೃಢತೆಗೆ ಸಂದ ಗೆಲುವು

ಭೂಮಿಯ ಜೊತೆಗಿರುವ ಭಾವನಾತ್ಮಕ ಸಂಭಂದ, ಅದನ್ನ ಬಿಟ್ಟರೆ ಬದುಕಿಗೆ ಬೇರೆ ಯಾವ ಅವಕಾಶಗಳೂ ಇಲ್ಲದಿರುವುದು, ವರ್ಷದಲ್ಲಿ 2–3 ಬೆಳೆ ಬೆಳೆಯುವ ಅತ್ಯಂತ ಫಲವತ್ತಾದ ಕೆಂಪು ಮಣ್ಣಿನ ಭೂಮಿ. ಸುತ್ತಲೂ ಅಚ್ಚ ಹಸಿರು, ಎಲ್ಲಿ ನೋಡಿದರಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವ ರೈತ ಸಮುದಾಯ. ರೇಷ್ಮೆ, ದ್ರಾಕ್ಷಿ, ದಾಳಿಂಬೆ, ಮಾವು, ಸಪೋಟ, ವಿವಿಧ ರೀತಿಯ ಹಣ್ಣುಗಳು, ಬಗೆಬಗೆಯ ಹೂವುಗಳು, ತರಕಾರಿಗಳು, ರಾಗಿ, ಜೋಳ ಸೇರಿದಂತೆ ವಿವಿಧ ಬೆಳೆಗಳನ್ನು ಮಕ್ಕಳನ್ನು ಬೆಳೆಸಿದ ರೀತಿಯಲ್ಲಿ ಬೆಳೆಸುತ್ತಿದ್ದಾರೆ. ಜೊತೆಗೆ ಪ್ರತಿಯೊಬ್ಬರ ಮನೆಗಳಲ್ಲೂ ಹಸು, ಎಮ್ಮೆ, ಕುರಿ, ಕೋಳಿ ಸಾಕಾಣಿಕೆ ನಡೆದಿದೆ. ಇದು ಇತ್ತೀಚೆಗೆ ದೇಶಾದ್ಯಂತ ಹೆಸರುವಾಸಿಯಾದ ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ ಸಾಕ್ಷ್ಯಚಿತ್ರ.

ಇವರಿಗೆ ಕೃಷಿಯೇ ಜೀವನದ ಮೂಲಾಧಾರ ಅಜ್ಜ ತಾತ, ತಂದೆ ತಾಯಂದಿರಿಂದ ಬಳುವಳಿಯಾಗಿ ಬಂದ ಈ ಭೂಮಿಯನ್ನೇ ನಂಬಿ ಇವರೆಲ್ಲಾ ಬದುಕು ಸಾಗಿಸುತ್ತಿದ್ದಾರೆ. ಜಗತ್ತಿಗೆ ಅತ್ಯಂತ ವೇಗವಾಗಿ ಸಂಪರ್ಕವನ್ನು ಕಲ್ಪಿಸುವ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪಕ್ಕದಲ್ಲಿದೆ. ಆಕಾಶದಲ್ಲಿ ಹಾರುವ ವಿಮಾನದಲ್ಲಿ ಕುಳಿತು ಕೆಳಗೆ ಇಣುಕಿದರೆ ಇರುವೆಗಳಂತೆ ಭಾಸವಾಗುವ ಈ ಹಳ್ಳಿಗಳು ಜನರ ಹೊಟ್ಟೆ ತುಂಬಿಸುವ ಆಹಾರ ಉತ್ಪಾದನಾ ಕೇಂದ್ರಗಳಾಗಿವೆ. ಇಂತಹ ಅನ್ನ ಬೆಳೆವ ಚಿನ್ನದಂತ ಭೂಮಿಗೆ ಆತಂಕ ಎದುರಾಗಿತ್ತು.

1198 ದಿನಗಳ ಕಾಲ ಅಂದರೆ ಸರಿಸುಮಾರು ಮೂರುವರೆ ವರ್ಷಗಳ ಕಾಲ, ಸತತವಾಗಿ ಅತ್ಯಂತ ಧೀರ್ಘಕಾಲದವರೆಗೆ ಜತನದಿಂದ ಕಾಪಾಡಿಕೊಂಡು ಬಂದು ಗೆಲುವನ್ನು ತಮ್ಮದಾಗಿಸಿಕೊಂಡ ಈ ಐತಿಹಾಸಿಕ ರೈತ ಚಳುವಳಿ ಹುಟ್ಟಿಕೊಂಡಿದ್ದರ ಹಿನ್ನೆಲೆ ಮತ್ತು ಈ ದೀರ್ಘಾವಧಿಯಲ್ಲಿ ಚಳುವಳಿ ಎದುರಿಸಿದ ಸವಾಲುಗಳ ಕುರಿತು ಮತ್ತು ಅದನ್ನೆಲ್ಲಾ ಎದುರಿಸಿ ದಿಟ್ಟವಾಗಿ ನಿಂತ ರೈತರ ಕುರಿತು ನಾವೆಲ್ಲರೂ ತಿಳಿದುಕೊಳ್ಳಲೇಬೇಕು. ಇಂದು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ದೇವನಹಳ್ಳಿಯ ಚನ್ನರಾಯಪಟ್ಟಣ ಎಂದರೆ, ಅಲ್ಲಿಯ ರೈತರ ಹೋರಾಟವೆಂದರೆ ಎಲ್ಲರಿಗೂ ಚಿರಪರಿಚಿತ. ಮಾತ್ರವಲ್ಲ, ತಮ್ಮ ಲಾಭಕೋರತನಕ್ಕಾಗಿ ಭೂಮಿ ಕಬಳಿಸುವ ಕಾರ್ಪೋರೇಟ್ ಶಕ್ತಿಗಳ ವಿರುದ್ಧ ನಡೆದ ಮಾದರಿ ಹೋರಾಟವಾಗಿದೆ.

ರೈತರ ಮೇಲೆ ಬರಸಿಡಿಲಿನಂತೆ ಎರಗಿದ ಸುದ್ದಿ

ಇಲ್ಲಿನ ರೈತರು ತಮ್ಮ ಪಾಡಿಗೆ ತಾವು ಕೃಷಿ ಕಾಯಕದಲ್ಲಿ ತಪ್ಪಸ್ಸಿನ ರೀತಿಯಲ್ಲಿ ಸಂಪೂರ್ಣ ತೊಡಗಿಸಿಕೊಂಡಿದ್ದಾರೆ. ಹೀಗಿರುವಾಗಲೇ, 2022ರ ಜನವರಿಯಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಯೊಂದು ಈ ರೈತರ ಮೇಲೆ ಬರಸಿಡಿಲಿನಂತೆ ಎರಗುತ್ತದೆ. ಅಂತಹ ಸುದ್ದಿ ಏನಿರಬಹುದು ಎಂದಿರಾ ಕರ್ನಾಟಕ ಇಂಡಸ್ಟ್ರಿಯಲ್ ಏರಿಯಾ ಡೆವಲಪ್ಮೆಂಟ್ ಬೋರ್ಡ್ (KIADB) ಹೊರಡಿಸಿದ್ದ ಪ್ರಕಟಣೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ 1777 ಎಕರೆ ಭೂಮಿಯನ್ನು ಏರೋಸ್ಪೇಸ್ ಟೆಕ್ ಪಾರ್ಕ್ ಮಾಡುವ ಉದ್ದೇಶದಿಂದ ಭೂಸ್ವಾಧೀನ ಮಾಡಿಕೊಳ್ಳಲಾಗುವುದು ಎಂದು ಘೋಷಿಸಿತ್ತು.

ಈ ಸುದ್ದಿಯನ್ನು ಕೇಳಿದ ಸುತ್ತಮುತ್ತಲಿನ ರೈತರು ಆತಂಕಗೊಂಡರು ಮಾತ್ರವಲ್ಲ, ಇದೇ ಚನ್ನರಾಯಪಟ್ಟಣ ಹೋಬಳಿಯಲ್ಲಿ KIADB ವಿವಿಧ ಯೋಜನೆಗಳ ಹೆಸರಿನಲ್ಲಿ 4 ಬಾರಿ ರೈತರಿಂದ ಭೂಸ್ವಾಧೀನ ಮಾಡಿದ್ದು ಮತ್ತು ಈಗಾಗಲೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಭೂಮಿ ಕಳೆದುಕೊಂಡಿದ್ದವರ ಜೀವನ ಸ್ಥಿತಿಯನ್ನು ಕಣ್ಣಾರೆ ಕಂಡಿದ್ದ ಇವರು ಮತ್ತಷ್ಟು ಆತಂಕಿತರಾದರು.

"ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ" ರಚನೆ

13 ಹಳ್ಳಿಗಳ ರೈತರು ಒಂದೆಡೆ ಸಭೆ ಸೇರಿ ಚರ್ಚಿಸಿ, ತನ್ನ ಜೀವನಾಡಿಯಾದ ಭೂಮಿಯನ್ನು ಉಳಿಸಿಕೊಳ್ಳಲು ಹೋರಾಟದ ಮಾರ್ಗವನ್ನು ಅನುಸರಿಸಲು ನಿರ್ಧರಿಸಿ "ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ" ಯನ್ನು ರಚಿಸಿಕೊಂಡು. KIADBಯ ಭೂಸ್ವಾಧೀನದ ನೋಟಿಸ್ ವಿರುದ್ಧ ಮೊಟ್ಟ ಮೊದಲಿಗೆ ಚನ್ನರಾಯಪಟ್ಟಣ ನಾಡಕಛೇರಿ ಮುಂಬಾಗ 2022ರ ಜನವರಿ 28ರಂದು ಪ್ರತಿಭಟನೆ ನಡೆಸಿದರು.

ಟ್ರ್ಯಾಕ್ಟರ್ ಪರೇಡ್

ತಾವು ನೀಡಿದ್ದ ಮನವಿಗೆ ಯಾವ ಪ್ರತಿಸ್ಪಂದನೆಯೂ ಸಿಗದಿದ್ದಾಗ ಹೋರಾಟವನ್ನು ಇನ್ನೊಂದು ಹಂತಕ್ಕೆ ತೆಗೆದುಕೊಂಡು ಹೋಗಲು ನಿರ್ಧರಿಸಿ, 2022ರ ಫೆಬ್ರವರಿ 16ರಂದು ಚನ್ನರಾಯಪಟ್ಟಣ ನಾಡಕಛೇರಿ ಮುಂಭಾಗದಿಂದ



ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಕಛೇರಿಗೆ ಕೃಷಿಯಲ್ಲಿ ತಮಗೆ ನಿರಂತರವಾಗಿ ಜೊತೆಗಿರುವ ರೈತ ಮಿತ್ರ ಟ್ರ್ಯಾಕ್ಟರ್‌ಗಳ ಜೊತೆ "ಟ್ರ್ಯಾಕ್ಟರ್ ಪರೇಡ್" ಮೆರವಣಿಗೆ ಮಾಡಿದರು. ಅಷ್ಟೊತ್ತಿಗಾಗಲೇ ದೆಹಲಿಯ ಗಡಿಭಾಗಗಳಲ್ಲಿ ನಿರಂತರವಾಗಿ 13 ತಿಂಗಳುಗಳ ಕಾಲ ಚಳುವಳಿ ನಡೆಸಿ ಕೇಂದ್ರ ಸರ್ಕಾರದ ಮೂರು ಕರಾಳ ಕೃಷಿ ಕಾಯ್ದೆಗಳನ್ನು ಬೀದಿ ಹೋರಾಟದ ಮೂಲಕ ವಾಪಸ್ ಮಾಡಿಸಿದ್ದ ಐತಿಹಾಸಿಕ ಗೆಲುವಿನ ದಾರಿ ಈ ರೈತರ ಮೇಲೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪರಿಣಾಮ ಬೀರಿತ್ತು ಎಂಬುದು ಅವರ ಹೋರಾಟದ ಸ್ವರೂಪಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಸ್ಪಷ್ಟವಾಗುತ್ತದೆ.

ಸ್ಪಂಧಿಸದ ಬಿಜೆಪಿ ಸರಕಾರ

ಎರಡು ಹಂತದ ಹೋರಾಟಗಳನ್ನು ಮಾಡಿದ್ದರೂ ಇದ್ಯಾವುದಕ್ಕೂ ಅಂದು ರಾಜ್ಯದ ಮುಖ್ಯಮಂತ್ರಿಯಾಗಿದ್ದ ಬಿಜೆಪಿಯ ಬಸವರಾಜ ಬೊಮ್ಮಾಯಿ, ಕೈಗಾರಿಕಾ ಸಚಿವ ಮುರಗೇಶ್ ನಿರಾಣಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಂ.ಟಿ.ಬಿ. ನಾಗರಾಜ್ ಇವರ್‍ಯಾರು ರೈತರ ಮನವಿಗೆ ಸ್ಪಂದಿಸಲಿಲ್ಲ.

2022ರ ಏಪ್ರಿಲ್ 4ರಂದು ಅನಿರ್ಧಿಷ್ಟಾವಧಿ ಹೋರಾಟಕ್ಕೆ...

ಬಿಡಿಬಿಡಿಯಾಗಿ, ಒಂದೊಂದು ದಿನ ಒಂದೊಂದು ಕಡೆ ಪ್ರತಿಭಟನೆ ಮಾಡುವುದರಿಂದ ಆಳುವ ಸರ್ಕಾರವನ್ನು ಮಣಿಸಲು ಸಾಧ್ಯವಾಗುವುದಿಲ್ಲ, ಭೂಮಿಯನ್ನು ಉಳಿಸಿಕೊಂಡು ಗೆಲುವು ಸಾಧಿಸಬೇಕಾದರೆ, ದೆಹಲಿ ಮಾದರಿಯಲ್ಲಿ ನಿರಂತರ ಬೇಡಿಕೆ ಈಡೇರುವವರೆಗೂ ಹೋರಾಟ ಮಾಡಬೇಕೆಂದು ತೀರ್ಮಾನಿಸಿದರು. 2022 ಏಪ್ರಿಲ್ 4ರಂದು ಚನ್ನರಾಯಪಟ್ಟಣ ನಾಡ ಕಛೇರಿ ಪಕ್ಕದಲ್ಲಿ ಅನಿರ್ಧಿಷ್ಟಾವಧಿ ಹೋರಾಟಕ್ಕೆ ಟೆಂಟ್ ಹಾಕಲಾಯಿತು. ಇದರ ವಿರುದ್ಧವೂ ಪೊಲೀಸಿನವರು, ಅಧಿಕಾರಿಗಳು ಇನ್ನಿಲ್ಲದ ಕಿರುಕುಳಗಳನ್ನು ಕೊಟ್ಟರು. ಅವೆಲ್ಲವನ್ನು ಎದುರಿಸಿ ಧರಣಿ ಮುಂದುವರೆಯಿತು. ಪ್ರತಿದಿನ 13 ಹಳ್ಳಿಗಳ ರೈತರು ಧರಣಿ ಸ್ಥಳಕ್ಕೆ ಬಂದು ಭಾಗವಹಿಸಲು ಆರಂಭಿಸಿದರು. ಇದು ಒಂದು ರೀತಿಯಲ್ಲಿ ಬೆಳಗೆದ್ದು ಕೃಷಿ ಚಟುವಟಿಕೆಗಳಿಗೆ ಹೊಲ, ತೋಟಗಳಿಗೆ ಹೋದಷ್ಟೇ ಸಹಜವಾಗಿ ಪ್ರತಿ ದಿನ ಧರಣಿ ಸ್ಥಳಕ್ಕೆ ಭೇಟಿಕೊಡಬೇಕೆನ್ನುವುದು ಸಹಜಯಿತು.

ಈ ಹೋರಾಟದ ದಿನಗಳನ್ನು ಎಣಿಸುವಾಗ 2022 ಏಪ್ರಿಲ್ 4ರಂದು ನಿರಂತರ ಧರಣಿ ಆರಂಭಿಸಿದ ದಿನಗಳಿಂದ ಲೆಕ್ಕಹಾಕಿ, 2025 ಜುಲೈ 15ಕ್ಕೆ 1189 ದಿನಗಳು ಎಂದು ಹೇಳುತ್ತಿದ್ದೇವೆ. ಆದರೆ ಈ ಹೋರಾಟ ನಿಜವಾಗಲೂ ಆರಂಭವಾಗಿದ್ದು 2022 ಜನವರಿ 28ರಂದು ಚನ್ನರಾಯಪಟ್ಟಣದ ನಾಡಕಛೇರಿಯ ಎದರು ಪ್ರತಿಭಟನೆ ನಡೆಸಿದ ದಿನಾಂಕವನ್ನು ಪರಿಗಣಿಸಿ ಲೆಕ್ಕಹಾಕಬೇಕು. ಹೀಗೆ ಲೆಕ್ಕಹಾಕಿದರೆ ಸುಮಾರು ನಾಲ್ಕು ತಿಂಗಳುಗಳ ಕಾಲವನ್ನು ಅಂದರೆ 120 ದಿನಗಳು ಸೇರ್ಪಡೆಯಾಗಬೇಕು.

ದೇವನಹಳ್ಳಿ ಬಂದ್

ದೇವನಹಳ್ಳಿ ಎಂದರೆ ಎಲ್ಲರಿಗೂ ನೆನಪಾಗುವುದು ಅಪ್ಪಟ ದೇಶಪ್ರೇಮಿ, ಬ್ರಿಟೀಷ್ ಸಾಮ್ರಾಜ್ಯಶಾಹಿಗಳಿಗೆ ಸಿಂಹಸ್ವಪ್ನವಾಗಿದ್ದ, ಬ್ರಿಟೀಷರ ವಿರುದ್ಧದ ಕದನ ಕಣದಲ್ಲೇ ವೀರ ಮರಣವನ್ನಪ್ಪಿದ ಟಿಪ್ಪೂಸುಲ್ತಾನ್ ಹುಟ್ಟಿದ ನೆಲ. ಇಷ್ಟು ಮಾತ್ರವಲ್ಲ, ಇದೇ ಟಿಪ್ಪು ಚೀನಾ ದೇಶದಿಂದ ತಂದು ಆರಂಭಿಸಿದ ರೇಷ್ಮೆ ಕೃಷಿಗೆ ದೇವನಹಳ್ಳಿ ಪ್ರಸಿದ್ಧವಾದದ್ದು. ಇಷ್ಟು ಮಹತ್ವವಿರುವ ಈ ಊರು 2022 ಜೂನ್ 17ರಂದು ಅಕ್ಷರಶಃ ಸಂಪೂರ್ಣ ಸ್ತಬ್ಧವಾಗಿತ್ತು. ಭೂಸ್ವಾಧೀನ ವಿರೋಧಿ ಹೋರಾಟ

ಸಮಿತಿ ಕರೆ ನೀಡಿದ್ದ ‘ದೇವನಹಳ್ಳಿ ಬಂದ್’ಗೆ ತಾಲ್ಲೂಕಿನ ನಾಗರೀಕರು, ಎಲ್ಲಾ ಸಂಘ ಸಂಸ್ಥೆಗಳು, ವ್ಯಾಪಾರಸ್ಥರು ವ್ಯಾಪಕವಾಗಿ ಬೆಂಬಲ ವ್ಯಕ್ತಪಡಿಸುವ ಮೂಲಕ ಸ್ವಯಂ ಪ್ರೇರಿತವಾಗಿ ಭಾಗವಹಿಸಿ ಬಂದ್ ಯಶಸ್ವಿಗೊಳಿಸಿ, ಅನ್ನದ ಋಣವನ್ನು ತೀರಿಸಲು ಇದ್ದ ಒಂದು ಸಣ್ಣ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡರು.

ಮೊದಲ ಬಾರಿಗೆ ಕೈಗಾರಿಕಾ ಸಚಿವರ ಜೊತೆ ಮಾತುಕತೆ

ಈ ‘ದೇವನಹಳ್ಳಿ ಬಂದ್’ ಯಶಸ್ಸಿನ ನಂತರ ಮೊದಲ ಬಾರಿಗೆ 2022 ಜೂನ್ 25ರಂದು ಬೆಂಗಳೂರಿನ ಖನಿಜ ಭವನದಲ್ಲಿ ಕೆಐಎಡಿಬಿ ಅಧಿಕಾರಿಗಳು ಮತ್ತು ಕೈಗಾರಿಕಾ ಸಚಿವ ಮುರಗೇಶ್ ನಿರಾಣಿ ಜೊತೆ ಮಾತುಕತೆ ನಡೆಯಿತು. ಈ ಸಭೆಯಲ್ಲಿಯೂ ಯಾವುದೇ ಆಶಾದಾಯಕ ತೀರ್ಮಾನ ಹೊರಬೀಳಲಿಲ್ಲ. ಚನ್ನರಾಯಪಟ್ಟಣದಲ್ಲಿ ಧರಣಿ ಮುಂದುವರೆಯಿತು.

ಪ್ರತಿ ಗ್ರಾಮದಿಂದ ಒಬ್ಬೊಬ್ಬರು ಹೋರಾಟ ಸಮಿತಿಯ ಮುಖಂಡರು


ಈ ಚಳುವಳಿಯನ್ನು 13 ಹಳ್ಳಿಗಳ ರೈತರು ಒಟ್ಟಿಗೆ ಸೇರಿ ನಡೆಸುತ್ತಿರುವಾಗ ರಚನೆಯಾದ ಹೋರಾಟ ಸಮಿತಿಗೆ ನಂಜಪ್ಪಣ್ಣ ಅಧ್ಯಕ್ಷರಾಗಿ, ಇದೇ ದೇವನಹಳ್ಳಿ ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯರಾಗಿದ್ದ ದಲಿತ ಸಂಘರ್ಷ ಸಮಿತಿಯ ಮುಖಂಡರಾದ ಕಾರಳ್ಳಿ ಶ್ರೀನಿವಾಸ್ ಸಂಚಾಲಕರಾಗಿ ಮತ್ತು ಚನ್ನರಾಯಪಟ್ಟಣದ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದ ಮಾರೇಗೌಡರು, ರಮೇಶ್ ಚೀಮಾಚನಹಳ್ಳಿ ಮುಂತಾದವರ ಜೊತೆ ಪ್ರತಿ ಗ್ರಾಮದಿಂದ ಒಬ್ಬೊಬ್ಬರು ಈ ಹೋರಾಟ ಸಮಿತಿಯ ಮುಖಂಡರಾಗಿದ್ದರು. ಇವರುಗಳ ಜೊತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾಗಿದ್ದ ಚಂದ್ರ ತೇಜಸ್ವಿಯವರೂ ಇದ್ದರು.

ರಾತ್ರೋರಾತ್ರಿ ಎಲ್ಲಾ ಮುಖಂಡರನ್ನು ಬಂದಿಸಿದರು

ಚನ್ನರಾಯಪಟ್ಟಣದ ಧರಣಿ ಸ್ಥಳದಲ್ಲಿ ನಿಧಾನಕ್ಕೆ ಬೇರೂರಲು ಆರಂಭಿಸಿದ ಈ ಹೋರಾಟ 2022 ಆಗಸ್ಟ್ 15 ಸುವರ್ಣ ಸ್ವಾತಂತ್ರ್ಯೋತ್ಸವ ಆಚರಣೆಯ ಸಂದರ್ಭದಲ್ಲಿ ಗಮನ ಸೆಳೆಯುವ ವಿಶೇಷ ಕಾರ್ಯಕ್ರಮವನ್ನು ರೂಪಿಸಬೇಕೆಂದು ಚರ್ಚಿಸಿತು. ಇದರ ಭಾಗವಾಗಿ ದೇವನಹಳ್ಳಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾಗಿದ್ದ ಜಿ.ಸಿ.ಬಯ್ಯಾರೆಡ್ಡಿಯವರು, ಸರ್ಕಾರ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡದಿದ್ದರೆ ಸ್ವತಂತ್ರ ದಿನಾಚರಣೆಯ ದಿನ ರೈತರು ಮೆರವಣಿಗೆ ನಡೆಸಿ ಕಪ್ಪು ಬಾವುಟ ಪ್ರದರ್ಶನ ಮಾಡಬೇಕಾಗುತ್ತದೆ ಎಂದು ಘೋಷಿಸಿದರು. ಇದರಿಂದ ಭೀತಿಗೊಂಡ ಸರ್ಕಾರ ರಾತ್ರೋರಾತ್ರಿ ಎಲ್ಲಾ ಮುಖಂಡರನ್ನು ಅವರ ಮನೆಗಳಿಗೆ ಹೋಗಿ ಬಂದಿಸಿದರು.

ಮಲಗಿದ್ದ ರೈತರ ಮೇಲೆ ಮಾರಣಾಂತಿಕ ದಾಳಿ

ಇಷ್ಟು ಮಾತ್ರವಲ್ಲದೆ, ಮಧ್ಯರಾತ್ರಿಯವರೆಗೂ ಕಾರ್ಯಕ್ರಮದ ತಯಾರಿ ಮಾಡಿ ಧರಣಿ ಸ್ಥಳದಲ್ಲೇ ಮಲಗಿದ್ದ ರೈತರ ಮೇಲೆ ಪೊಲೀಸರು ಮಾರಣಾಂತಿಕ ದಾಳಿ ನಡೆಸಿದರು. ಈ ಸಂಘರ್ಷದಲ್ಲಿ ಯುವ ರೈತ ಹೋರಾಟಗಾರ ಪ್ರಮೋದ್ ತನ್ನ ಎಡಗಣ್ಣನ್ನೇ ಕಳೆದುಕೊಳ್ಳಬೇಕಾಯಿತು. ಬೆಳಿಗ್ಗೆ ಈ ಘಟನೆಯನ್ನು ಖಂಡಿಸಿ ರೈತರು ದೇವನಹಳ್ಳಿಯಲ್ಲಿ ಪ್ರತಿಭಟನೆ ಮಾಡಲು ಮುಂದಾದರು. ಒಂದು ಕೈಯಲ್ಲಿ ತ್ರಿವರ್ಣ ಧ್ವಜ, ಮತ್ತೊಂದು ಕೈಯಲ್ಲಿ ಹಸಿರು ಬಾವುಟ ಹಿಡಿದಿದ್ದ ರೈತರನ್ನು ಪೊಲೀಸರು ಅತ್ಯಂತ ದೌರ್ಜನ್ಯದಿಂದ ಎಳೆದಾಡಿ, ಘರ್ಷಣೆ



ಉಂಟುಮಾಡಿ 100ಕ್ಕೂ ಹೆಚ್ಚು ರೈತರನ್ನು ಬಂಧಿಸಿ ಬೆಂಗಳೂರಿನ ಹೌಗ್ರೌಂಡ್ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಇರಿಸಿದರು. ಅವರನ್ನು ಮಧ್ಯರಾತ್ರಿಯ ನಂತರ ಬಿಡುಗಡೆ ಮಾಡಿದರು. ಮಧ್ಯರಾತ್ರಿಯಲ್ಲಿ ಬಿಡುಗಡೆ ಮಾಡಿದವರನ್ನು ಕನಿಷ್ಟ ಬಂಧಿಸಿದ ಜಾಗಕ್ಕಾದರೂ ವಾಪಸ್ ಕರೆದೊಯ್ಯುವ ಕೆಲಸವನ್ನು ಪೊಲೀಸರು ಮಾಡಲಿಲ್ಲ. ಈ ಸಂದರ್ಭದಲ್ಲಿ ಬಂದಿತರಿಂದ ವಶಪಡಿಸಿಕೊಂಡಿದ್ದ ರೈತರ 72 ಮೊಬೈಲ್‌ಗಳನ್ನು ಒಂದೂವರೆ ತಿಂಗಳ ನಂತರ ಕೋರ್ಟ್ ಮೂಲಕ ಬಿಡಿಸಿಕೊಳ್ಳಬೇಕಾಯ್ತು.

ಜಿಲ್ಲಾಧಿಕಾರಿ ಕಛೇರಿ ಎದುರು ಧರಣಿ

ಈ ನಡುವೆ 2022 ಆಗಸ್ಟ್ 25ರಂದು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಕಛೇರಿ ಎದುರು ಧರಣಿ ನಡೆಸಲಾಯಿತು. ಇಲ್ಲಿ ಧರಣಿ ನಿರತರು ಅಲ್ಲೇ ಅಡುಗೆ ಮಾಡಿ ಊಟ ಮಾಡಲು ನಿರ್ಧರಿಸಿದ್ದರು. ಆದರೆ ಅಲ್ಲಿಯ ಪೊಲೀಸರು ಇದಕ್ಕೆ ಅವಕಾಶ ಕೊಡದೆ, ಪ್ರತಿಭಟನಾನಿರತ ರೈತರಿಗೆ ಇನ್ನಿಲ್ಲದೆ ರೀತಿಯ ಕಿರುಕುಳವನ್ನು ನೀಡಿದರು. ಆದರೆ ಇವಕ್ಕೆಲ್ಲಾ ಜಗ್ಗದ ರೈತ ಮಹಿಳೆಯರೂ ಪ್ರತಿಭಟನಾ ಸ್ಥಳದಲ್ಲೇ ಅಡುಗೆ ಮಾಡಿ ಪೊಲೀಸರಿಗೂ ಸೇರಿ ಊಟ ಕೊಟ್ಟರು. ಇದೇ ಅನ್ನದಾತರಿಗಿರುವ ಉದಾರ ಗುಣ. ತಮ್ಮ ಶತೃಗಳಿಗಾದರೂ ಅವರು ಅನ್ನ ನೀಡುತ್ತಾರೆ.

ಧರಣಿ ಸ್ಥಳಕ್ಕೆ ಭೇಟಿ ನೀಡಿದ ಸಿದ್ಧರಾಮಯ್ಯ

ಜಿಲ್ಲೆಯವರೆಗೂ ಹೋರಾಟವನ್ನು ಮುನ್ನಡೆಸಿದ್ದ ರೈತರು ಈ ಹೋರಾಟವನ್ನು ರಾಜಧಾನಿಗೆ ತೆಗೆದುಕೊಂಡು ಹೋಗಲು ನಿರ್ಧರಿಸಿದರು. 2022ರ ಸೆಪ್ಟೆಂಬರ್ 13ರಿಂದ 11 ದಿನಗಳ ಕಾಲ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಿರಂತರ ಧರಣಿ ನಡೆಸಿದರು. ಇದೇ ಸಂದರ್ಭದಲ್ಲಿ ಸೆಪ್ಟೆಂಬರ್ 21 ರಂದು ಅಂದಿನ ವಿರೋಧ ಪಕ್ಷದ ನಾಯಕರಾಗಿದ್ದ, ಇಂದಿನ ಮುಖ್ಯ ಮಂತ್ರಿಗಳಾದ ಸಿದ್ಧರಾಮಯ್ಯನವರು ಧರಣಿ ಸ್ಥಳಕ್ಕೆ ಭೇಟಿ ನೀಡಿದರು. ಅಂದು ರೈತರನ್ನು ಬೆಂಬಲಿಸಿ ಮಾತನಾಡಿದ್ದ ಅವರು, ತಾವು ಅಧಿಕಾರಕ್ಕೆ ಬಂದ ಮೇಲೆ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡುವುದಾಗಿ ಭರವಸೆ ನೀಡಿದ್ದರು.

ಭೂಮಿ ಕೊಡಲು ಒಪ್ಪದವರಿಂದ ದಾಖಲೆಗಳ ಸಂಗ್ರಹ

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಪ್ರತಿಭಟನೆ ನಡೆದ ನಂತರ ಮತ್ತೊಮ್ಮೆ ಕೆಐಎಡಿಬಿ ಅಧಿಕಾರಿಗಳು ಮತ್ತು ಮಂತ್ರಿಗಳೊಂದಿಗೆ ಮಾತುಕತೆ ನಡೆಯಿತು. ಈ ಸಭೆಯಲ್ಲಿ ಭೂಸ್ವಾಧೀನಕ್ಕೆ ಒಪ್ಪದವರ ಪಟ್ಟಿ ಮತ್ತು ಅವರ ದಾಖಲಾತಿಗಳನ್ನು ಸಂಗ್ರಹಿಸಲು ತೀರ್ಮಾನಿಸಲಾಯಿತು. ಡಿಸೆಂಬರ್ 15 ರಿಂದ 3 ದಿನಗಳ ಕಾಲ ಕೆಐಎಡಿಬಿ ಅಧಿಕಾರಿಗಳು ಖುದ್ದು 13 ಹಳ್ಳಿಗಳಿಗೆ ಭೇಟಿನೀಡಿ ಭೂಮಿಯನ್ನು ಕೊಡಲು ಒಪ್ಪದವರಿಂದ ದಾಖಲೆಗಳನ್ನು ಸಂಗ್ರಹಿಸಿದರು. ಇದರಿಂದ ಶೇ. 72ರಷ್ಟು ರೈತರು ತಮ್ಮ ಭೂಮಿಯನ್ನು ಕೆಐಡಿಬಿಯ ಭೂಸ್ವಾಧೀನಕ್ಕೆ ಒಳಪಡಿಸುವುದಿಲ್ಲ ಎಂದು ದಾಖಲೆ ಸಮೇತ ಸಹಿಮಾಡಿ ಸಲ್ಲಿಸಿದರು. ಇದರಲ್ಲಿ 13 ಹಳ್ಳಿಗಳಲ್ಲಿ ಭೂಸ್ವಾಧೀನಕ್ಕೆ ನಿಗದಿಯಾಗಿದ್ದ 1777 ಎಕರೆಗಳಲ್ಲಿ 1292 ಎಕರೆಯನ್ನು ಕೊಡುವುದಿಲ್ಲವೆಂದು ರೈತರು ಸ್ಪಷ್ಟವಾಗಿ ಬರೆದುಕೊಟ್ಟಿದ್ದರು.

ಚನ್ನರಾಯಪಟ್ಟಣ ತಾಲ್ಲೂಕಿನ ಈ 13 ಹಳ್ಳಿಗಳಲ್ಲಿ ಎಲ್ಲಾ ಸಮುದಾಯದ ಜನರು ವಾಸವಾಗಿದ್ದು ತಮಗಿರುವ ಭೂಮಿಯಲ್ಲಿ ಕೃಷಿ ಚಟುವಟಿಕೆ ಮತ್ತು ಹೈನುಗಾರಿಕೆ ನಡೆಸುತ್ತಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದ ರೈತರ ಅನುಭವದಲ್ಲಿರುವ 475 ಎಕರೆ ಭೂಮಿಯನ್ನು ಅಲ್ಲಿಯ ದಲಿತರು ಕೊಡುವುದಿಲ್ಲವೆಂದು ಸ್ಪಷ್ಟಪಡಿಸಿದ್ದರು.

ಭರವಸೆ ನೀಡಿದ ಕೆ.ಎಚ್.ಮುನಿಯಪ್ಪ

ರಾಜ್ಯ ವಿಧಾನಸಭೆಗೆ ಚುನಾವಣೆ ನಿಗದಿಯಾಯಿತು. ಈ ಸಂದರ್ಭದಲ್ಲಿ ಕ್ಷೇತ್ರಕ್ಕಾಗಿ ಹುಡುಕಾಟ ನಡೆಸುತ್ತಿದ್ದ ಕೆ.ಎಚ್.ಮುನಿಯಪ್ಪ ಮೀಸಲು ಕ್ಷೇತ್ರವಾಗಿದ್ದ ದೇವನಹಳ್ಳಿಗೆ ಪ್ರವೇಶ ಪಡೆದರು. ಚುನಾವಣೆಗೆ ಸ್ಪರ್ಧಿಸುವುದು ಖಚಿತವಾದ ಮೇಲೆ ಚನ್ನರಾಯಪಟ್ಟಣದಲ್ಲಿ ರೈತರು ಧರಣಿ ನಡೆಸುತ್ತಿದ್ದ ಸ್ಥಳಕ್ಕೆ ಭೇಟಿ ನೀಡಿ, ಚುನಾವಣೆಯಲ್ಲಿ ನನ್ನನ್ನು ಬೆಂಬಲಿಸಿ, ಗೆದ್ದನಂತರ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಸಲು ಬೇಕಾದ ಕ್ರಮಕ್ಕೆ ಮುಂದಾಗುತ್ತೇನೆ ಎಂದು ಭರವಸೆ ನೀಡಿದದರು.

10 ದಿನಗಳ ಕಾಲ 13 ಹಳ್ಳಿಗಳಲ್ಲೂ ಪಾದಯಾತ್ರೆ

2023 ಫೆಬ್ರವರಿ 26ರಿಂದ ಚನ್ನರಾಯಪಟ್ಟಣದ ಬಲವಂತದ ಭೂಸ್ವಾಧೀನಕ್ಕೆ ಒಳಪಡುತ್ತಿದ್ದ 13 ಹಳ್ಳಿಗಳಲ್ಲೂ ಭೂಸ್ವಾಧೀನ ಹೋರಾಟ ಸಮಿತಿಯ ನೇತೃತ್ವದಲ್ಲಿ 10 ದಿನಗಳ ಕಾಲ ಪಾದಯಾತ್ರೆ ನಡೆಸಲಾಯಿತು. ಈ ಪಾದಯಾತ್ರೆಯು, ಚಳುವಳಿಯಲ್ಲಿ ರೈತರನ್ನು ಮತ್ತಷ್ಟು ಗಟ್ಟಿಗೊಳಿಸುವ ಕೆಲಸಕ್ಕೆ ಒತ್ತು ನೀಡಿತು.

ರಾಜ್ಯ, ದೇಶದ ಎಲ್ಲಾ ಚಳುವಳಿಗಳ ಮುಖಂಡರು

ಹೀಗೆ ಹಲವು ಹಂತದ ಮತ್ತು ಹಲವು ರೀತಿಯ ಹೋರಾಟಗಳನ್ನು ನಡೆಸುತ್ತಲೇ ತಣ್ಣಗೆ ಚನ್ನರಾಯಪಟ್ಟಣದ ಧರಣಿ ಸ್ಥಳದಲ್ಲಿ ಚಳುವಳಿ ಆಳಕ್ಕೆ ಬೇರೂರಿದಂತೆಲ್ಲ, ರಾಜ್ಯ, ದೇಶದ ಎಲ್ಲಾ ಚಳುವಳಿಗಳ ಮುಖಂಡರು ಇಲ್ಲಿಗೆ ಬಂದು ಭಾಗವಹಿಸಿ ಹೋರಾಟ ನಿರತ ರೈತರಿಗೆ ದನಿಯಾದರು. ರೈತ ಚಳುವಳಿಗಳ ಮುಖಂಡರು, ಸಾಹಿತಿ ಕಲಾವಿಧರು, ಪ್ರಜ್ಞಾವಂತರೆಲ್ಲ ಈ ಚಳುವಳಿಗೆ ಧ್ವನಿಯಾದರು. ದೆಹಲಿಯ ಗಡಿಭಾಗಗಳಲ್ಲಿ ಸತತ 13 ತಿಂಗಳುಗಳ ಕಾಲ ನಿರಂತರ ಚಳುವಳಿ ನಡೆಸಿ, ಕರಾಳ ಕೃಷಿ ಕಾಯ್ದೆಗಳನ್ನು ವಾಪಸ್ ಮಾಡಲು ನಾಯಕತ್ವ ನೀಡಿದ್ದ ಸಂಯುಕ್ತ ಕಿಸಾನ್ ಮೋರ್ಚಾದ ರಾಷ್ಟ್ರ ನಾಯಕರೆಲ್ಲಾ ಧರಣಿ ಸ್ಥಳಕ್ಕೆ ಬಂದು ಬೆಂಬಲಿಸಿದರು.

“ಸಂಯುಕ್ತ ಹೋರಾಟ ಕರ್ನಾಟಕ”

ರಾಜ್ಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳ ವಿರುದ್ಧ ರೈತರು, ಕಾರ್ಮಿಕರು, ದಲಿತರು, ಮಹಿಳೆಯರು, ವಿದ್ಯಾರ್ಥಿ, ಯುವಜನರ ಸಂಘಟನೆಗಳು ಸೇರಿದ ಹಸಿರು, ಕೆಂಪು, ನೀಲಿಗಳ ಸಂಗಮದ ಒಂದು ಐಕ್ಯ ವೇದಿಕೆ “ಸಂಯುಕ್ತ ಹೋರಾಟ ಕರ್ನಾಟಕ” ಈ ಭೂಮಿ ಹೋರಾಟದಲ್ಲಿ ಗಂಭೀರ ಮಧ್ಯ ಪ್ರವೇಶ ಮಾಡಿದ ನಂತರ ಇದರ ಸ್ವರೂಪ ಬದಲಾಗತೊಡಗಿತು. ಮೂರು ವರ್ಷಗಳ ಕಾಲ ನಿರಂತರವಾಗಿ ದೃಡವಾಗಿ ಚಳುವಳಿ ರೂಪಿಸಿಕೊಂಡು ಬಂದಿದ್ದ ರೈತ ಸಮುದಾಯಕ್ಕೆ ರಾಜ್ಯದ ಎಲ್ಲಾ ಚಳುವಳಿಕಾರರು ಒಟ್ಟು ಸೇರಿ 2025 ಜೂನ್ 25ರಂದು “ದೇವನಹಳ್ಳಿ ಚಲೋ” ನಡೆಸಲು ನಿರ್ಧರಿಸಲಾಯಿತು. ಇದಕ್ಕೂ ಮೊದಲು ಮುಖ್ಯಮಂತ್ರಿಗಳು, ಮಂತ್ರಿಗಳ ಜೊತೆ ಸಾಕಷ್ಟು ಮಾತುಕತೆಗಳು ನಡೆದಿದ್ದವು. ಹಲವು ಹೋರಾಟಗಳಲ್ಲಿ ‘ಸಂಯುಕ್ತ

ಪುಟ 11 ನೋಡಿ

ಧರಣಿ ಆರಂಭಿಸಿದಾಗ ನೆಟ್ಟ ಅರಳಿ ಮರ ಇಂದು ಧರಣಿಯ ಟೆಂಟಿನ ಆಚೆಗೆ ಬೆಳೆದು ಮುಗಿಲು ನೋಡುತ್ತಾ ನಿಂತಿದೆ. ಅಂದು ಧರಣಿ ಸ್ಥಳದಲ್ಲಿ ತಾವೇ ಬೆಳೆದಿದ್ದ ಹಲಸಿನ ಹಣ್ಣನ್ನು ತಿಂದು ನೆಟ್ಟಿದ ಬೀಜ ಈಗ ಮರವಾಗಿ ಹಣ್ಣು ಕೊಡಲು ಸಿದ್ದವಾಗಿದೆ. ತಾತ್ಕಾಲಿಕ ವೇದಿಕೆಯಾಗಿದ್ದ ಧರಣಿ ಇಟ್ಟಿಗೆ ಸಿಮೆಂಟ್‌ಗಳಿಂದ ನಿರ್ಮಾಣವಾದ ವೇದಿಕೆಯಾಗಿ ರೂಪಗೊಂಡಿತು. ಮಟ್ಟಬರಲು ಗ್ರಾಮದ ಪಲ್ಲಣ್ಣ ತಪ್ಪಿಸದೇ ಪ್ರತೀ ದಿನವು ಧರಣಿ ಸ್ಥಳದಲ್ಲಿ ರಾತ್ರಿ ಮಲಗಿ ಧರಣಿ ಜಾಗವನ್ನು ಸುರಕ್ಷಿತವಾಗಿಡಲು ಮುಂದಾದರು. ಪ್ರತಿ ದಿನ ಧರಣಿ ನಿರತರಿಗೆ ನಂಜೇಗೌಡರು ಅಡುಗೆ ಮಾಡಿಕೊಟ್ಟರು. ಅನುಸೂಯಮ್ಮ, ಮುನಿಯಮ್ಮ, ಲಕ್ಷ್ಮಮ್ಮ, ವೆಂಕಟಮ್ಮ, ಮೋಹನ್, ವೆಂಕಟೇಶ್, ಮುಂತಾದವರು ಪ್ರತಿ ದಿನವೂ ಧರಣಿಯಲ್ಲಿ ಭಾಗವಹಿಸಿ ಈ ಹೋರಾಟ ದಾಖಲೆ ಸೃಷ್ಟಿಸಲು ಕಿರುಕಾಣಿಕೆಯನ್ನು ನೀಡಿದರು.



4ನೇ 'ಅತ್ಯಂತ ಸಮಾನ ಸಮಾಜ' ಎಂಬ 'ಅಧಿಕೃತ' ಫೇಕ್ ನ್ಯೂಸ್!



ಎಲ್ಲ ಸೂಚ್ಯಂಕಗಳೂ ಭಾರತ ಒಂದು ಅತ್ಯಂತ ಅಸಮಾನತೆ ಇರುವ ದೇಶ ಮತ್ತು ಈ ಅಸಮಾನತೆ ಇತ್ತೀಚಿನ ದಶಕಗಳಲ್ಲಿ ಹೆಚ್ಚುತ್ತಲೇ ಇದೆ ಎಂಬ ತೀರ್ಮಾನದತ್ತವೇ ಒಯ್ಯುತ್ತಿರುವಾಗ ಭಾರತ ಜಗತ್ತಿನಲ್ಲಿ ನಾಲ್ಕನೇ ಅತ್ಯಂತ ಸಮಾನತೆಯ ದೇಶ ಎಂದು ಭಾರತ ಸರಕಾರದ ಪ್ರೆಸ್ ಇನ್‌ಫಾರ್ಮೇಷನ್ ಬ್ಯುರೊ ಸಂಭ್ರಮ ಪಟ್ಟಿರುವುದು ಹೇಗೆ? ಏಕೆ?

'ವಿಶ್ವಬ್ಯಾಂಕ್ ಭಾರತವನ್ನು ಜಗತ್ತಿನ ಅತ್ಯಂತ ಸಮಾನ ಸಮಾಜಗಳಲ್ಲಿ ಪರಿಗಣಿಸಿದೆ' –ಎಂಬ ಸುದ್ದಿ ಜುಲೈ 5ರಂದು ಭಾರತದ ಪ್ರಮುಖ ಪತ್ರಿಕೆಗಳಲ್ಲಿ, ಅದರಲ್ಲೂ ಇಂಗ್ಲಿಷ್ ಪತ್ರಿಕೆಗಳಲ್ಲಿ ದೊಡ್ಡದಾಗಿ ಪ್ರಕಟವಾಯಿತು. ಅದರಲ್ಲೂ, ದಿ ಹಿಂದು, ಇಂಡಿಯನ್ ಎಕ್ಸ್‌ಪ್ರೆಸ್ ನಂತಹ ಪತ್ರಿಕೆಗಳಲ್ಲಿ ಇದು ದೊಡ್ಡ ಸುದ್ದಿಯಾಗಿ ಪ್ರಕಟವಾದದ್ದು ಹಲವರಿಗೆ ಆಶ್ಚರ್ಯ ಉಂಟುಮಾಡಿತು. ಏಕೆಂದರೆ ಭಾರತದಲ್ಲಿ ಅಸಮಾನತೆ ಹೆಚ್ಚುತ್ತಿದೆ ಎಂಬುದು ಇತ್ತೀಚಿನ ವರ್ಷಗಳಲ್ಲಿ ಈ ಪತ್ರಿಕೆಗಳಲ್ಲೂ ಬಹಳಷ್ಟು ಚರ್ಚೆಗೆ ಒಳಗಾಗಿರುವ ವಿಷಯ.


ಇದು ಸರಕಾರದ ನಿಯಂತ್ರಣದಲ್ಲಿರುವ ಪ್ರೆಸ್ ಇನ್‌ಫಾರ್ಮೇಷನ್ ಬ್ಯುರೊ (ಪಿಐಬಿ) ಬಿಡುಗಡೆಮಾಡಿದ ಹೇಳಿಕೆಯನ್ನು ಆಧರಿಸಿದ ಸುದ್ದಿಯಾಗಿತ್ತು. "ಭಾರತ ನಾಲ್ಕನೇ ದೊಡ್ಡ ಅರ್ಥವ್ಯವಸ್ಥೆ ಮಾತ್ರವಲ್ಲ, ವಿಶ್ವ ಬ್ಯಾಂಕಿನ ಜೀನಿ ಸೂಚ್ಯಂಕ 2011–12ರಲ್ಲಿ 28.8 ಇದ್ದದ್ದು 2022–23ರಲ್ಲಿ 25.5ಕ್ಕೆ ಇಳಿದಿದೆ. ಅಂದರೆ ಅಸಮಾನತೆಯ ಪ್ರಮಾಣ ಇಳಿದಿದೆ, ಅದೀಗ ಸೂಚ್ಯಂಕದ ಪ್ರಕಾರ ಸ್ಲೊವಾಕ್ ಗಣತಂತ್ರ, ಸ್ಲೊವೆನಿಯ ಮತ್ತು ಬೆಲರೂಸ್ ನಂತರ ನಾಲ್ಕನೆಯ ಸ್ಥಾನದಲ್ಲಿದೆ" ಎಂದು ಮುಂದುವರೆದು ಈ ಸುದ್ದಿ ಹೇಳಿತು. ಮತ್ತು ಇದು ಬಡತನವನ್ನು ಕಡಿಮೆಮಾಡುವ ಮತ್ತು ನೇರ ಕಲ್ಯಾಣ ಬೆಂಬಲದ ಸರಕಾರದ ನೀತಿಗಳನ್ನು ಬಿಂಬಿಸುತ್ತದೆ ಎಂದೂ ವರ್ಣಿಸಿತು. ಸಹಜವಾಗಿಯೇ, ಇದು 'ಭಕ್ತ'ಗಣ ಕುಣಿದಾಡುವಂತೆ ಮಾಡಿದೆ.

ಆದರೆ ಇದು ದೊಡ್ಡ ಪತ್ರಿಕೆಗಳು ವಾಸ್ತವಾಂಶವನ್ನು ಪರೀಕ್ಷಿಸುವ ತಮ್ಮ ಹೊಣೆ ನಿಭಾಯಿಸದೆ ಪ್ರಕಟಿಸಿದ ಸುದ್ದಿ ಎಂದು ಬೇಗನೇ ಬೆಳಕಿಗೆ ಬಂತು. ಏಕೆಂದರೆ ವಿಶ್ವ ಬ್ಯಾಂಕ್ ಪ್ರಕಟಿಸಿದ ಅಂಕಿ–ಅಂಶ ಹೇಳಿರುವುದು ಭಾರತದ ಬಳಕೆ ಅಸಮಾನತೆ ಕುರಿತಾದ ಜೀನಿ ಸೂಚ್ಯಂಕ ಉತ್ತಮಗೊಂಡಿದೆಯೆಂದೇ ಹೊರತು ಒಟ್ಟು ಅಸಮಾನತೆ ಇಳಿದಿದೆಯೆಂದೇನೂ ಅಲ್ಲ.
ಅದರ ಹೇಳಿಕೆ ಹೀಗಿದೆ:

"ಭಾರತದ ಬಳಕೆ–ಆಧಾರಿತ ಜೀನಿ ಸೂಚ್ಯಂಕ 2011–12ರಲ್ಲಿದ್ದ 28.8ರಿಂದ 2022–23ರಲ್ಲಿ 25.5ಕ್ಕೆ ಇಳಿದಿದೆ. ಆದಾಗ್ಯೂ ದತ್ತಾಂಶಗಳ ಮಿತಿಗಳಿಂದಾಗಿ ಅಸಮಾನತೆಯ ಕೆಳ–ಅಂದಾಜು ಆಗಿರಬಹುದು. ತದ್ವಿರುದ್ಧವಾಗಿ, 'ವಿಶ್ವ ಅಸಮಾನತಾ ದತ್ತಾಂಶ ನೆಲೆ' ಆದಾಯ ಅಸಮಾನತೆಯ ಜೀನಿ ಸೂಚ್ಯಂಕ 2004ರಲ್ಲಿ 52 ಇದ್ದದ್ದು 2023ರಲ್ಲಿ 62ಕ್ಕೇರಿದೆ ಎಂದು ತೋರಿಸುತ್ತದೆ. ಸಂಬಳ ಅಸಮಾನತೆ ಮೇಲ್ಮಟ್ಟದಲ್ಲೇ ಉಳಿದಿದೆ, ಅತ್ಯಂತ ಮೇಲಣ ಶೇ. 10 ಮಂದಿಯ ಮಧ್ಯಮ ಆದಾಯ ಅತ್ಯಂತ ಕೆಳಗಿನ ಶೇ. 10 ಮಂದಿಯ ಮಧ್ಯಮ ಆದಾಯದ 13 ಪಟ್ಟು ಇದೆ" **ಎಂದು ಇದೇ ವಿಶ್ವಬ್ಯಾಂಕ್ ಹೇಳಿಕೆ ತಿಳಿಸುತ್ತದೆ! ಅಂದರೆ ಆದಾಯ ಸಮಾನತೆಯ ಸೂಚ್ಯಂಕದಲ್ಲಿ ಭಾರತಕ್ಕಿಂತ ಮೇಲಿನ ಸ್ಥಾನಗಳಲ್ಲಿ ಮೂರು ದೇಶಗಳಲ್ಲ, 61 ದೇಶಗಳಿವೆ ಎಂದು ಸ್ವತಃ ವಿಶ್ವ ಬ್ಯಾಂಕ್ ಹೇಳಿದೆ!**

ಪಿಐಬಿ ಕೈಚಳಕ?

ಪಿಐಬಿ ಹೇಳಿಕೆ ಇಲ್ಲಿ ಬಳಕೆ–ಆಧಾರಿತ ಸೂಚ್ಯಂಕವನ್ನು ಮಾತ್ರ ಕೈಗೆತ್ತಿಕೊಂಡು ಕೈಚಳಕ ನಡೆಸಿದೆ ಎಂಬುದು ಇದರಿಂದ ಎದ್ದು ಕಾಣುತ್ತದೆ. ನಿಜ ಹೇಳಬೇಕೆಂದರೆ, ವಿಶ್ವ ಬ್ಯಾಂಕ್ ಜೂನ್ 5ರಂದು ಈ ಹೇಳಿಕೆ ಪ್ರಕಟಿಸಿತ್ತು. ಪಿಐಬಿ, ಸರಿಯಾಗಿ 1 ತಿಂಗಳ ನಂತರ ಇದನ್ನು ಉಲ್ಲೇಖಿಸಿ ಹೇಳಿಕೆ ಪ್ರಕಟಿಸಿತು. ಅಂದರೆ ಈ ಕೈಚಳಕ ಪ್ರದರ್ಶಿಸಲು ಅದಕ್ಕೆ ಒಂದು ತಿಂಗಳು ಹಿಡಿಸಿದಂತೆ ಕಾಣುತ್ತದೆ ಎಂದು ಒಬ್ಬ ಅರ್ಥಶಾಸ್ತ್ರಜ್ಞರು ಟಿಪ್ಪಣಿ ಮಾಡಿದ್ದಾರೆ.



ಇದರಲ್ಲಿ ಪಿಐಬಿ ಬಳಸಿಕೊಂಡದ್ದು ಅನುಭೋಗ ಆಧಾರಿತ ಅಥವ ಬಳಕೆ–ಆಧಾರಿತ ಜಿನಿ ಸೂಚ್ಯಂಕ ಮತ್ತು ಆದಾಯ ಆಧಾರಿತ ಜೀನಿ ಸೂಚ್ಯಂಕ ಇವೆರಡರ ನಡುವಿನ ವ್ಯತ್ಯಾಸದ ಬಗೆಗಿನ ತಿಳುವಳಿಕೆಯ ಅಭಾವವನ್ನು ಎನ್ನುತ್ತಾರೆ ಅರ್ಥಶಾಸ್ತ್ರಜ್ಞರು.

ವಿಶ್ವಬ್ಯಾಂಕ್ ಸಮಯ–ಸಮಯಕ್ಕೆ ವಿವಿಧ ಅಭಿವೃದ್ಧಿ ಸೂಚಕ ಅಂಶಗಳನ್ನು ಕುರಿತ ದತ್ತಾಂಶಗಳನ್ನು ಪ್ರಕಟಿಸುತ್ತದೆ. ಇದರಲ್ಲಿ ಆದಾಯ ಅಸಮಾನತೆಯ ಜೀನಿ ಸೂಚ್ಯಂಕವೂ ಒಂದು. ಆದರೆ ಇದು ಬಳಕೆ–ಆಧಾರಿತ ಜೀನಿ ಸೂಚ್ಯಂಕಕ್ಕಿಂತ ಭಿನ್ನವಾಗಿದೆ. ಹೆಸರೇ ಸೂಚಿಸುವಂತೆ ಮೊದಲನೆಯದ್ದು ಒಟ್ಟು ಆದಾಯ ಕುರಿತ ದತ್ತಾಂಶಗಳನ್ನು ಆಧರಿಸಿದ್ದರೆ, ಎರಡನೆಯದ್ದು ಅನುಭೋಗ ಅಥವ ಬಳಕೆ ಆಧಾರಿತವಾಗಿದೆ. ಅಂದರೆ ಆಹಾರ, ವಸತಿ, ಬಟ್ಟೆ, ಆರೋಗ್ಯ, ಶಿಕ್ಷಣ ಮುಂತಾದವುಗಳಿಗೆ ಮಾಡುವ ಖರ್ಚುಗಳ ದತ್ತಾಂಶಗಳನ್ನು ಆಧರಿಸಿರುತ್ತದೆ. ಯುರೋಪಿನ ದೇಶಗಳಲ್ಲಿ, ಒಟ್ಟಾರೆಯಾಗಿ ಶ್ರೀಮಂತ ದೇಶಗಳಲ್ಲಿ ಆದಾಯ ಕುರಿತ ಸರ್ವೆಗಳನ್ನು ನಡೆಸಿ ಪಡೆವ ದತ್ತಾಂಶಗಳನ್ನು ಸಂಗ್ರಹಿಸಲಾಗುತ್ತಿದೆ. ಆದ್ದರಿಂದ ವಿಶ್ವಬ್ಯಾಂಕ್ ಜನಸಂಖ್ಯೆಯ ಎಷ್ಟು ಶೇಕಡಾ ಪ್ರಮಾಣ ಎಷ್ಟು ಆದಾಯ ಹೊಂದಿದೆ ಎಂಬ ಆದಾಯದ ಹಂಚಿಕೆಯ ಆಧಾರದಲ್ಲಿ ಜೀನಿ ಸೂಚ್ಯಂಕವನ್ನು ಲೆಕ್ಕ ಹಾಕುತ್ತದೆ.

ಆದರೆ ಭಾರತದಂತಹ ಕೃಷಿಪ್ರಧಾನ ದೇಶದಲ್ಲಿ ಇಂತಹ ಅಂಕಿ–ಅಂಶಗಳನ್ನು ಪಡೆಯಲು ಸಾಧ್ಯವಿಲ್ಲವಾದ್ದರಿಂದ ಬಹಳ ಹಿಂದಿನಿಂದಲೂ 'ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಸಂಘಟನೆ' (ಎನ್‌ಎಸ್‌ಎಸ್‌ಒ–ಈಗ ಇದು ಎನ್‌ಎಸ್‌ಒ ಅಂದರೆ ರಾಷ್ಟ್ರೀಯ ಸಾಂಖ್ಯಿಕ ಕಚೇರಿ ಎಂದಾಗಿದೆ) ಬಳಕೆಗೆ ಪ್ರತಿ ಕುಟುಂಬ ಮಾಡುವ ಖರ್ಚಿನ ಸರ್ವೆಗಳನ್ನು ನಡೆಸುತ್ತ ಬಂದಿದೆ. ಈ ಮೊದಲಿನ ಇಂತಹ ಸರ್ವೆ 2011–12ರಲ್ಲಿ ನಡೆದಿತ್ತು. ನಂತರ 2017–18ರಲ್ಲಿ ನಡೆಸಲಾಯಿತು. ಆದರೆ ಇದು ಸರಿಯಾಗಿಲ್ಲ ಎಂದು ಅದರ ಅಂಕಿ–ಅಂಶಗಳನ್ನು ಪ್ರಕಟಿಸಲಿಲ್ಲ. ಈ ಸರ್ವೆಯ ಫಲಿತಾಂಶ ಸರಕಾರಕ್ಕೆ ಅಪಥ್ಯವಾಗಿದ್ದುದೇ ಇದಕ್ಕೆ ಕಾರಣವೆನ್ನಲಾಗಿದೆ. ನಂತರ ಇತ್ತೀಚೆಗೆ ಸರ್ವೆಯ ಮಾರ್ಗಸೂಚಿಗಳಲ್ಲಿ ಬದಲಾವಣೆಗಳನ್ನು ಮಾಡಿ 2022–23ರಲ್ಲಿ ಇಂತಹ ಸರ್ವೆ ನಡೆಯಿತು. ವಿಶ್ವ ಬ್ಯಾಂಕ್ ಇತ್ತೀಚೆಗೆ ಪ್ರಕಟಿಸಿರುವುದು ಇದರ ಮತ್ತು 2011–12ರ ಸರ್ವೆಯ ಆಧಾರದಲ್ಲಿ ಲೆಕ್ಕ ಹಾಕಿದ ಜೀನಿ ಸೂಚ್ಯಂಕವನ್ನು.

ಇಲ್ಲಿ, ಬಳಕೆ–ಆಧಾರಿತ ಜೀನಿ ಸೂಚ್ಯಂಕಗಳ ವಿಷಯದಲ್ಲೂ, 2011–12ರ ಸರ್ವೆ ಆಧಾರಿತ ಸೂಚ್ಯಂಕ ಮತ್ತು 2022–23 ಸರ್ವೆ ಆಧಾರಿತ ಸೂಚ್ಯಂಕವನ್ನು ಕೂಡ ಹೋಲಿಸುವುದು ಸಾಧ್ಯವಿಲ್ಲ ಎಂಬುದನ್ನೂ ಗಮನಿಸಬೇಕು.

ಗಮನಾರ್ಹ ವ್ಯತ್ಯಾಸ

ಮೇಲೆ ಹೇಳಿದಂತೆ, ಆದಾಯ–ಆಧಾರಿತ ಮತ್ತು ಬಳಕೆ–ಆಧಾರಿತ ಇವೆರಡರ ನಡುವೆ ಗಮನಾರ್ಹ ವ್ಯತ್ಯಾಸವಿದೆ.

ಏಕೆಂದರೆ, ಶ್ರೀಮಂತ ವಿಭಾಗಗಳು ತಮ್ಮ ಆದಾಯದ ಗಮನಾರ್ಹ ಭಾಗವನ್ನು ಉಳಿತಾಯ ಮಾಡುತ್ತವೆ ಅಥವ ಬೇರೆ ಕಡೆ ಪೇರಿಸಿಡುತ್ತವೆ. ಬಡವಿಭಾಗಗಳ ಉಳಿತಾಯದ ಪ್ರಮಾಣ ಬಹಳ ಕಡಿಮೆ, ಹಲವಾರು ವಿಭಾಗಗಳಲ್ಲಿ ಇಲ್ಲವೇ ಇಲ್ಲ ಎನ್ನಬಹುದು. ಬಳಕೆ ಖರ್ಚುಗಳಿಗೆ ಸಂಬಂಧಪಟ್ಟ ದತ್ತಾಂಶಗಳು ಇದನ್ನು ಬಿಂಬಿಸುವುದಿಲ್ಲ. ಆದ್ದರಿಂದ ಇವೆರಡನ್ನು ಆಧರಿಸಿದ ಸೂಚ್ಯಂಕಗಳು ಸಂಪೂರ್ಣ ಭಿನ್ನ ಸೂಚಕಗಳು, ಇವನ್ನು ಪರಸ್ಪರ ಹೋಲಿಸುವುದು ಸಾಧ್ಯವಿಲ್ಲ. ವಿಶ್ವ ಬ್ಯಾಂಕ್ ತನ್ನ ವರದಿಗಳಲ್ಲಿ ಅಸಮಾನತೆಯ ಲೆಕ್ಕಾಚಾರಕ್ಕೆ ಸಂಬಂಧಪಟ್ಟಂತೆ ಇವೆರಡನ್ನೂ ತನಗೆ ಲಭ್ಯವಿರುವಂತೆ ಪ್ರಕಟಿಸಿದರೂ, ಇವನ್ನು ಪರಸ್ಪರ ಹೋಲಿಸುವಂತಿಲ್ಲ ಎಂದು ಕೂಡ ಸ್ಪಷ್ಟವಾಗಿ ಹೇಳಿದೆ ಎಂಬುದನ್ನು ಇಲ್ಲಿ ಗಮನಿಸಬೇಕು. ಅಲ್ಲದೆ, ಮೇಲೆ ಹೇಳಿದಂತೆ, 2011–12 ಮತ್ತು 2022–23ರ ದತ್ತಾಂಶಗಳನ್ನೂ ಕೂಡ ಪರಸ್ಪರ ಹೋಲಿಸಲು ಸಾಧ್ಯವಿಲ್ಲ, ಏಕೆಂದರೆ, 2022–23ರ ಸರ್ವೆ ಪ್ರಶ್ನೆಪಟ್ಟಿಯಲ್ಲಿ ಗಮನಾರ್ಹ ಬದಲಾವಣೆಗಳನ್ನು ಮಾಡಲಾಗಿತ್ತು. ಅಂದರೆ, 2011–12ರಿಂದ 2022–23ರ ಅವಧಿಯಲ್ಲಿ ಬಳಕೆ–ಆಧಾರಿತ ಸಮಾನತೆ ಉತ್ತಮಗೊಂಡಿದೆ ಎಂದೂ ಹೇಳುವಂತಿಲ್ಲ! ವಿಶ್ವಬ್ಯಾಂಕ್ ಹೇಳಿಕೆ ಇದನ್ನು ಕೂಡ ಸ್ಪಷ್ಟವಾಗಿ ಹೇಳಿದೆ.

ಇವೆಲ್ಲವೂ ಪಿಐಬಿ ಹೇಳಿಕೆಯನ್ನು ಸಿದ್ಧಪಡಿಸಿದವರಿಗೆ ಅಥವ ಅದನ್ನು ಒದಗಿಸಿದ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ತಿಳಿದಿಲ್ಲ ಎಂದೇನಲ್ಲ. ಆದರೂ ಇಂತಹ ಹೇಳಿಕೆಯನ್ನು ಬಿಡುಗಡೆ ಮಾಡಿದ್ದರ ನಿಜವಾದ ಕಾರಣ ಏನು ಎಂಬುದು ಅವರವರ ಊಹೆಗೆ ಬಿಟ್ಟದ್ದು.

ಪುಟ 12 ನೋಡಿ

..ಐತಿಹಾಸಿಕ ಹೋರಾಟ: ರೈತರ ದೃಡತೆಗೆ ಸಂದ ಗೆಲುವು

ಪುಟ 9 ರಿಂದ

ಹೋರಾಟ ಕರ್ನಾಟಕ'ದ ಮುಖಂಡರುಗಳು ಭಾಗವಹಿಸಿದ್ದರು.

ದೇವನಹಳ್ಳಿ ಚಲೋ, ಪೊಲೀಸ್ ದೌರ್ಜನ್ಯ

'ದೇವನಹಳ್ಳಿ ಚಲೋ' ಹೋರಾಟದಲ್ಲಿ ಸಾವಿರಾರು ಜನ ರಾಜ್ಯದ ವಿವಿಧ ಜಿಲ್ಲೆಗಳಿಂದ, ವಿವಿಧ ಸಂಘಟನೆಗಳನ್ನು ಪ್ರತಿನಿಧಿಸಿ ಭಾಗವಹಿಸಿದ್ದರು. ಈ ಹೋರಾಟದಲ್ಲಿ ಕಲಾವಿಧರಾದ ಪ್ರಕಾಶ್ ರಾಜ್ ಸೇರಿದಂತೆ ಹಲವು ಕಲಾವಿದರು, ಸಾಹಿತಿಗಳು, ಚಿಂತಕರು ಜೊತೆಯಾದರು. ಶಾಂತಿಯುತವಾಗಿ ನಡೆಯುತ್ತಿದ್ದ ಪ್ರತಿಭಟನಾ ಸಭೆಗೆ ದಿನದ ಕೊನೆಯಲ್ಲಿ ಪೊಲೀಸಿನವರು ಹೋರಾಟಗಾರರ ಮೇಲೆ ಅಮಾನವೀಯವಾಗಿ ದೌರ್ಜನ್ಯ ಎಸಗಿ, ವೇದಿಕೆಯ ಮೇಲೆ ನುಗ್ಗಿ ಮುಖಂಡರನ್ನು ದಬ್ಬಾಳಿಕೆಗಳ ಮೂಲಕ ಬಂಧಿಸಿದರು.

ಈ ಹೋರಾಟದಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿದ್ದ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್.ವರಲಕ್ಷ್ಮಿ ಮತ್ತು ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಹೇಳಿದ್ದ ಒಂದು ಮಾತು "ಈ ಹೋರಾಟ ಸೋತರೆ ಜನತೆಗೆ ಚಳುವಳಿಗಳ ಮೇಲೆ ವಿಶ್ವಾಸ ಹೊರಟು ಹೋಗುತ್ತದೆ, ಒಮ್ಮೆ ಜನರಲ್ಲಿ ಹೋರಾಟದ ವಿಶ್ವಾಸ ಕಳೆದುಹೋದರೆ ಅದು ಮುಂದೆ ಏನನ್ನೂ ಮಾಡದಂತಹ ವಾತಾವರಣವನ್ನು ಸೃಷ್ಠಿಸುತ್ತದೆ. ಹಾಗಾಗಿ ದೇವನಹಳ್ಳಿ ರೈತರ ಹೋರಾಟದ ಗೆಲುವಿನೊಂದಿಗೆ ನಾವು ಎಲ್ಲರಲ್ಲಿ ಚಳುವಳಿಯ ಕುರಿತಾದ ವಿಶ್ವಾಸವನ್ನು ತುಂಬುವ ಅಗತ್ಯವಿದೆ" ಎಂದಿದ್ದರು.

ರಾಜ್ಯಾಂದ್ಯಂತ ಪ್ರತಿರೋಧ

ದೇವನಹಳ್ಳಿ ಚಲೋ ಸಂದರ್ಭದಲ್ಲಿ ಉಂಟಾದ ಪೊಲೀಸ್ ದೌರ್ಜನ್ಯ ಮತ್ತು ಬಂದನವನ್ನು ಖಂಡಿಸಿ ರಾಜ್ಯಾಂದ್ಯಂತ ಜೂನ್ 26ರಂದು ವ್ಯಾಪಕವಾದ ಪ್ರತಿರೋಧ ವ್ಯಕ್ತವಾಯಿತು. ಅದೇ ದಿನ ಬೆಂಗಳೂರಿನಲ್ಲಿ ಸಾಹಿತಿ, ಕಲಾವಿಧರ ಪ್ರಕಾಶ್ ರಾಜ್ ನೇತೃತ್ವದಲ್ಲಿ ಮುಖ್ಯಮಂತ್ರಿಗಳ ಮನೆಗೆ ನಡಿಗೆ ಮಾಡಿದರು. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಜುಲೈ 4ರಂದು ರೈತ ಮುಖಂಡರೊಂದಿಗೆ ಚರ್ಚಿಸಲು ಸಭೆ ನಿಗದಿಗೊಳಿಸಿದರು. ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಸಭೆ ನಡೆಯುವವರೆಗೆ ಈ ಹೋರಾಟದ ಕಾವನ್ನು ಕಾಪಾಡಿಕೊಳ್ಳಬೇಕೆಂದು ಚರ್ಚಿಸಿದ ಸಂಯುಕ್ತ ಹೋರಾಟ ಕರ್ನಾಟಕ ಮತ್ತು ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿಯು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಜೂನ್ 27ರಿಂದ ನಿರಂತರ ಧರಣಿ ನಡೆಸಲು ತೀರ್ಮಾನಿಸಲಾಯಿತು. ಇಲ್ಲಿಂದ ಜೂನ್ 4ರವರೆಗೆ ಪ್ರತಿದಿನ ರಾಜ್ಯದ ವಿವಿಧ ಸಂಘಟನೆಗಳು, ವ್ಯಕ್ತಿಗಳು ಬಂದು ಬೆಂಬಲ ಸೂಚಿಸಲು ಆರಂಭವಾಗಿತು.

ನಾಡ ಉಳಿಸಿ ಸಮಾವೇಶದಲ್ಲಿ ರಾಷ್ಟ್ರ ಮುಖಂಡರು

ಚನ್ನರಾಯಪಟ್ಟಣದಲ್ಲಿ ಬೇರೂರಿದ್ದ ಈ ಹೋರಾಟ ರಾಜ್ಯಮಟ್ಟದ ಚಳುವಳಿಯಾಗಿ ಹಬ್ಬಿತು, ಅದೇ ಸಂದರ್ಭದಲ್ಲಿ ರಾಷ್ಟ್ರಮಟ್ಟದ ಗಮನ ಸೆಳೆಯಿತು. ಈ ಧರಣಿಯಲ್ಲಿ "ಸಂಯುಕ್ತ ಕಿಸಾನ್ ಮೋರ್ಚಾ"ದ ರಾಷ್ಟ್ರ ಮುಖಂಡರಾದ ಧರ್ಶನ್ ಪಾಲ್, ಡಾ.ವಿಜೂ ಕೃಷ್ಣನ್, ರಾಕೇಶ್ ಟಿಕಾಯತ್, ಡಾ.ಸುನೀಲಂ ಸೇರಿದಂತೆ ಹಲವರು ಜುಲೈ 4ರಂದು ಮುಖ್ಯಮಂತ್ರಿಗಳು ಸಭೆ ಕರೆದ ದಿನದಂದೇ ಫ್ರೀಡಂ ಪಾರ್ಕ್‌ನಲ್ಲಿ ಸಂಘಟಿಸಿದ್ದ "ನಾಡ ಉಳಿಸಿ ಸಮಾವೇಶದಲ್ಲಿ ಭಾಗವಹಿಸಿದ್ದರು.

ಈ ಗೆಲುವಿನ ಕುರಿತಾದ ಹತ್ತು ಹಲವು ವಿಶ್ಲೇಷಣೆಗಳು ಎಲ್ಲೆಡೆ ಚರ್ಚೆಯಾಗುತ್ತಿದೆ. ಆದರೆ ಈ ಹೋರಾಟದ ಮುಂಚೂಣಿಯಲ್ಲಿದ್ದ ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿಯ ಸಂಚಾಲಕರಾದ ಕಾರಳ್ಳಿ ಶ್ರೀನಿವಾಸ್ ಅವರು ಹೇಳಿದ ಮಾತು ಒಟ್ಟು ಚಳುವಳಿಯ ಸರಿಯಾದ ವಿಶ್ಲೇಷಣೆ ಎಂದೆನಿಸುತ್ತದೆ. "ನಾನು ದಲಿತ ಹುಡುಗ. ದಲಿತ ಸಂಘರ್ಷ ಸಮಿತಿ ನನ್ನ ಸಂಘಟನೆ. ಚನ್ನರಾಯಪಟ್ಟಣ ಭೂಸ್ವಾಧೀನ ವಿರೋಧಿ ಹೋರಾಟದಲ್ಲಿ ಎಲ್ಲ ಸಮುದಾಯದ ಜನರು ನನ್ನ ನಾಯಕತ್ವವನ್ನು ಒಪ್ಪಿಕೊಂಡರು. ನನ್ನೊಳಗೆ ನೀಲಿ ಮಾತ್ರ ಇತ್ತು, ಈಗ ಕೆಂಪು ನನ್ನ ರಕ್ತವಾಗಿದೆ, ಹಸಿರು ಉಸಿರಾಗಿದೆ. ಈ ಗೆಲುವು ಜನ ಚಳುವಳಿಗೆ ಶಕ್ತಿ ತುಂಬಲಿ." ಈ ಮಾತುಗಳು ಬರಿಯ ಮಾತುಗಳಲ್ಲ ರಾಜ್ಯದ ರೈತ, ದಲಿತ ಮತ್ತು ಕಮ್ಯೂನಿಸ್ಟ್ ಚಳುವಳಿಗಳು (ಹಸಿರು, ನೀಲಿ, ಕೆಂಪು) ಒಟ್ಟಿಗೆ ನಿಂತು ನಡೆಸಿದ ಹೋರಾಟದ ಫಲ, ಅಂತಿಮವಾಗಿ "ಒಗ್ಗಟ್ಟಿನಲ್ಲಿ ಬಲವಿದೆ" ಎಂಬ ಮಾತು ಮತ್ತೆ ಸಾಬೀತಾಗಿದೆ. ಒಗ್ಗಟ್ಟಿನಿಂದ ವಿಷಯಾಧಾರಿತವಾಗಿ ಎಲ್ಲಾ ಚಳುವಳಿಗಳು ಒಟ್ಟಿಗೆ ಸೇರಿ ಕೆಲಸ ಮಾಡಿದರೆ ಎಂತಹ ಆಳುವ ಪ್ರಭುತ್ವವನ್ನಾದರೂ ಬೀದಿ ಹೋರಾಟಗಳಿಂದ ಮಣಿಸಬಹುದು ಎಂಬ ವಿಶ್ವಾಸ ಮೂಡಿದೆ. ಮಾತ್ರವಲ್ಲ ಈ ಚಳುವಳಿ ಎಲ್ಲರಿಗೂ ಹತ್ತು ಹಲವು ಪಾಠಗಳನ್ನು ಕಲಿಸಿದೆ. ಈ ಪಾಠಗಳು ಎಲ್ಲಾ ಜನಚಳುವಳಿಗೆ ಮಾರ್ಗದರ್ಶನವಾಗುವುದರಲ್ಲಿ ಯಾವ ಅನುಮಾನವೂ ಇಲ್ಲ.

ಮುಖ್ಯಮಂತ್ರಿಗಳ ಜೊತೆಗಿನ ಸಭೆಯ ನಿಯೋಗದಲ್ಲಿ ತೆರಳಿದ್ದ 13 ಹಳ್ಳಿಗಳ ರೈತರು ತಾವು ಬೆಳೆದಿದ್ದ ತರಕಾರಿ, ಹಣ್ಣು, ಹೂವುಗಳ ಬುಟ್ಟಿಗಳ ಜಿತೆಗೆ ಮೆರವಣಿಗೆ ಮಾಡಿದರು. ಮಾತ್ರವಲ್ಲ ಇವುಗಳನ್ನೆಲ್ಲ ಮುಖ್ಯಮಂತ್ರಿಗಳಿಗೆ ಅರ್ಪಿಸಿ "ನೀವು ಕಿತ್ತುಕೊಳ್ಳಲು ಹೊರಟಿರುವ ಭೂಮಿಯ ಫಲ ನಿಮ್ಮ ಮುಂದಿದೆ, ನಿರ್ಧಾರ ನಿಮ್ಮದು. ಅನ್ನ ಬೆಳೆವ ಭೂಮಿಗೆ ಬೆಂಕಿ ಹಾಕುವುದಿಲ್ಲವೆಂದು ನಂಬಿದ್ದೇವೆ ಎಂದರು". ಈ ಚಳುವಳಿಗೆ ಭಾಗವಹಿಸಲು ಮೈಸೂರಿನಿಂದ ರೈಲಿನಲ್ಲಿ ಹೊರಟಿದ್ದ ರೈತ ಮುಖಂಡರಾದ ಈಶ್ವರಪ್ಪ ಬೆಂಗಳೂರು ರೈಲ್ವೇ ನಿಲ್ದಾಣದಲ್ಲಿ ಹೃದಯಾಘಾತದಿಂದ ಸಾವನಪ್ಪಿದರು.

ಮತ್ತೆ ಹಳ್ಳಿಗಳ ಕಡೆ ಮುಖಮಾಡಿದ ಹೋರಾಟಗಾರರು

ಜುಲೈ 4ರಂದು ನಡೆದ ಸಭೆಯಲ್ಲಿ ಚಳುವಳಿ ನಿರತರ ಜೊತೆಗೆ ಮಾತುಕತೆ ನಡೆಸಿದ ಮುಖ್ಯಮಂತ್ರಿಯವರು, ಜುಲೈ 15ರವರೆಗೆ ಕಾಲಾವಕಾಶ ಕೇಳಿದರು. ಇಷ್ಟು ದಿನಗಳ ಕಾಲ ಅತ್ಯಂತ ಎಚ್ಚರಿಕೆಯಿಂದ ಮತ್ತು ದೃಡತೆಯಿಂದ ಕಾಪಾಡಿಕೊಂಡು ಬಂದಿದ್ದ ಈ ಹೋರಾಟವನ್ನು ಇನ್ನೊಂದು ಹಂತಕ್ಕೆ ಮುಂದುವರೆಸಲು ನಿರ್ಧರಿಸಿ ರಾಜಧಾನಿಯಿಂದ ಮತ್ತೆ ಹಳ್ಳಿಗಳ ಕಡೆ ಮುಖಮಾಡಿದರು. ಜುಲೈ 15ರಂದು ಮುಖ್ಯಮಂತ್ರಿಗಳೊಂದಿಗಿನ ಸಭೆಯವರೆಗೆ, ಪ್ರತಿದಿನ ಒಂದೊಂದು ಹಳ್ಳಿಯಲ್ಲಿ "ಗ್ರಾಮ ಸಂಕಲ್ಪ ಸಮಾವೇಶ"ಗಳನ್ನು ಸಂಘಟಿಸಿ ಮುಂದಿನ ನಿರ್ಣಾಯಕ ಹೋರಾಟಕ್ಕೆ ಜನತೆಯನ್ನು ಅಣಿನೆರೆಸುವ ಕಾಯಕದಲ್ಲಿ ಎಲ್ಲರೂ ತೊಡಗಿದರು. ಈ ಸಭೆಗಳಲ್ಲಿ ದೃಡ ಸಂಕಲ್ಪ ಮಾಡಿದ 13 ಹಳ್ಳಿಗಳ ರೈತರು "ಎಂತಹ ಪರಿಸ್ಥಿತಿ ನಿರ್ಮಾಣವಾದರೂ ನಮ್ಮ ಬದುಕಿಗೆ ಆಶ್ರಯವಾಗಿರುವ ಭೂಮಿಯನ್ನು ಬಿಟ್ಟುಕೊಡುವುದಿಲ್ಲ" ಎಂದು ನಿರ್ಧರಿಸಿದರು.

ಎಲ್ಲರ ಕುತೂಹಲಕ್ಕೆ ಕಾರಣವಾಗಿದ್ದ ಜುಲೈ 15ರ ಮುಖ್ಯಮಂತ್ರಿಗಳ ಸಭೆಗೆ ಮುನ್ನ ರಾಜ್ಯ ಮತ್ತು ದೇಶಾದ್ಯಂತ ಈ ಐತಿಹಾಸಿಕ ಚಳುವಳಿಯನ್ನು ಗೆಲ್ಲಿಸಲೇಬೇಕೆಂದು ಸಂಕಲ್ಪ ಮಾಡಿದ ಎಲ್ಲರೂ, ತಮ್ಮದೇ ರೀತಿಯಲ್ಲಿ ರಾಜ್ಯ ಸರ್ಕಾರದ ಮೇಲೆ ಒತ್ತಡಗಳನ್ನು ಹಾಕುವ ಕೆಲಸದಲ್ಲಿ ತೊಡಗಿದರು. "ಪ್ರಾಣ ಬಿಟ್ಟೇವು, ಭೂಮಿ ಬಿಡೆವು" ಎಂಬ ರೈತರ ದೃಡ ನಿರ್ಧಾರ, ಇದಕ್ಕೆ ಒತ್ತಾಸೆಯಾಗಿ ನಿಂತ ದೇಶದ ಜನಪರ ಚಳುವಳಿಗಳು, ಇವೆಲ್ಲಾ ಒಟ್ಟಿಗೆ ಸೇರಿ ಅಂತಿಮವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ 1777 ಎಕರೆ ಭೂಮಿಯ ಭೂಸ್ವಾಧೀನ ಪ್ರಕ್ರಿಯೆಯನ್ನು ಸಂಪೂರ್ಣ ಕೈಬಿಟ್ಟಿದ್ದೇವೆಂದು ಘೋಷಿಸಿದರು.

ರಾಜ್ಯದ ಚಳುವಳಿಗಳಲೆಲ್ಲ ಸಂಭ್ರಮದ ವಾತಾವರಣ

1198 ದಿನಗಳಿಂದ ಕಾಯುತ್ತಿದ್ದ ಈ ಸುದ್ದಿ ಸಂಭ್ರಮಕ್ಕೆ ಕಾರಣವಾಯಿತು. ಅಂದು ರಾಜ್ಯದ ಚಳುವಳಿಗಳೆಲ್ಲ ಸಂಭ್ರಮದ ವಾತಾವರಣದಲ್ಲಿದ್ದವು. ಅಷ್ಟು ದಿನಗಳವರೆಗೆ ಆತಂಕದಲ್ಲಿದ್ದ ರೈತರ ಮೊಗದಲ್ಲಿ ಇನ್ನಿಲ್ಲದ ಸಂತೋಷ, ಈ ಖುಷಿಯನ್ನ ತಡೆಯಲಾರದೆ ಕಣ್ಣಲ್ಲಿ ಆನಂದಭಾಷ್ಪ, ಅವರುಗಳ ಮನದಲ್ಲಾಗುತ್ತಿರುವ ಉತ್ಕಟ ಸಂತೋಷವನ್ನು ಅವರಿಂದ ವ್ಯಕ್ತಪಡಿಸಲೂ ಆಗುತ್ತಿಲ್ಲ, ನನ್ನಿಂದ ಅವುಳನ್ನು ಅಕ್ಷರಗಳಲ್ಲಿ ಕಟ್ಟಿಕೊಡಲೂ ಸಾಧ್ಯವಾಗುತ್ತಿಲ್ಲ. ಎಲ್ಲವನ್ನೂ ಮೀರಿದ ಬಾವ... ಅಂತಹ ಒಂದು ಸಂಭ್ರಮ ಎಲ್ಲೆಡೆ ಮನೆ ಮಾಡಿತ್ತು. ಈ ಸಿಹಿ ಸುದ್ದಿಯನ್ನು ಹೊತ್ತು ಚಳುವಳಿಗೆ ಒತ್ತಾಸೆಯಾಗಿ ನಿಂತಿದ್ದ ಎಲ್ಲ ಮುಖಂಡರೊಂದಿಗೆ



ಮರಳಿ ಹಳ್ಳಿಗಳಿಗೆ ಹೆಜ್ಜೆಹಾಕಿದರೆ ಅಲ್ಲಿ ಬೀದಿ ಬೀದಿಗಳಲ್ಲಿ ಕುಟುಂಬ ಸಮೇತರಾಗಿ ಕಾಯುತ್ತಿದ್ದ ರೈತರು ಆರತಿ ಎತ್ತಿ, ಹೂವಿನ ಮಳೆಗರೆದು, ಕುಣಿದು ಕುಪ್ಪಳಿಸಿ ಇಷ್ಟು ದಿನಗಳ ಕಾಲ ತಮ್ಮ ಒಡಲಿನಲ್ಲಿ ಹದುಮಿಟ್ಟಿದ್ದ ಎಲ್ಲವನ್ನು ಹೊರಹಾಕಿ ಸಂಭ್ರಮಿಸಿದರು.

ಈ ಹೋರಾಟದ ಗೆಲುವು ನಿಜವಾದ ಅರ್ಥದಲ್ಲಿ ದೀರ್ಘಕಾಲ 1198 ದಿನಗಳವರೆಗೂ ಎಲ್ಲ ಸವಾಲುಗಳನ್ನು ಎದುರಿಸಿ ದೃಡವಾಗಿ ಕಾಪಾಡಿಕೊಂಡು ಬಂದ 13 ಹಳ್ಳಿಗಳ ರೈತರದು. ಜೊತೆಗೆ ಇದು ರಾಜ್ಯದ ಮತ್ತು ದೇಶದ ಚಳುವಳಿಗಳ ಗೆಲುವು ಕೂಡ, ಹೋರಾಟಗಳೆಂದರೆ ಮೂಗುಮುರಿಯುವ ಸಂದರ್ಭದಲ್ಲಿ ಒಂದು ಜನಚಳುವಳಿ ಗೆಲ್ಲುವುದೆಂದರೆ ಅದು ಎಲ್ಲರಲ್ಲಿ ಅದಮ್ಯ ಚೈತನ್ಯವನ್ನು ಮತ್ತು ಹೋರಾಟದ ಮೇಲಿನ ವಿಶ್ವಾಸವನ್ನು ಹೆಚ್ಚಿಸುತ್ತದೆ.

"ಸಂಯುಕ್ತ ಹೋರಾಟದ ಕರ್ನಾಟಕ"ದ ನಾಯಕತ್ವದ ಕೆಲಸ ಗಮನಾರ್ಹ

ಈ ಚಳುವಳಿಯನ್ನು ಒಂದು ನಿರ್ಣಾಯಕ ಹಂತಕ್ಕೆ ತೆಗೆದುಕೊಂಡು ಬರಲು "ಸಂಯುಕ್ತ ಹೋರಾಟ ಕರ್ನಾಟಕ"ದ ನಾಯಕತ್ವದ ಕೆಲಸ ಗಮನಾರ್ಹವಾದದ್ದು ಇದರಲ್ಲಿ ಬಡಗಲಪುರ ನಾಗೇಂದ್ರ, ಎಸ್.ವರಲಕ್ಷ್ಮಿ, ಮೀನಾಕ್ಷಿ ಸುಂದರಂ, ಚುಕ್ಕಿ ನಂಜುಂಡಸ್ವಾಮಿ, ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರಗೋಡು, ನಾಗರಾಜ್, ಟಿ.ಯಶವಂತ, ಎಚ್.ಆರ್. ಬಸವರಾಜಪ್ಪ, ನೂರ್ ಶ್ರೀಧರ್, ಯು.ಬಸವರಾಜು, ಎಸ್. ಆರ್.ಹಿರೇಮಠ, ಕೆ.ವಿ.ಭಟ್, ಡಿ.ಎಚ್.ಪೂಜಾರ್ ಸೇರಿದಂತೆ ಕೋರ್ ಕಮಿಟಿಯ ಎಲ್ಲ ಸದಸ್ಯರು ಮತ್ತು ಸಹಭಾಗಿ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ದುಡಿದಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕರ್ನಾಟಕ ಪ್ರಾಂತ ರೈತ ಸಂಘದ ಚಂದ್ರತೇಜಸ್ವಿ ಮತ್ತು ಪ್ರಭಾ ಬೆಳವಂಗಲ ಈ ಚಳುವಳಿಯ ಉದ್ದಕ್ಕೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ಗೆಲುವಿನಲ್ಲಿ ಕರ್ನಾಟಕ ಸಂಯುಕ್ತ ಹೋರಾಟ ಕರ್ನಾಟಕದ ಸಂಚಾಲಕರೂ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರೂ ಆಗಿದ್ದ ಚಳುವಳಿಯ ಮಧ್ಯದಲ್ಲೇ ಅಕಾಲಿಕ ಮರಣವನ್ನಪ್ಪಿದ, ಇದನ್ನು ಗೆಲ್ಲಿಸಲೇಬೇಕೆಂದು ಕನಸು ಕಾಣುತ್ತಾ ಅದಕ್ಕಾಗಿ ಶ್ರಮಿಸುತ್ತಿದ್ದ ಜಿ.ಸಿ.ಬಯ್ಯಾರೆಡ್ಡಿಯವರನ್ನು ನೆನೆಯದವರಿಲ್ಲ.

ಈ ಚಳುವಳಿ ನಡೆಯುತ್ತಿರುವಾಗ ಹಲವರು ಈ ರೈತರಿಗೆ ಇಂತಹ ದೃಡತೆ ಎಲ್ಲಿಂದ ಬಂತು ಎಂದು ಕೇಳಿದ್ದಿದೆ. ನಾನು ಸ್ವತಃ ಚನ್ನರಾಯಪಟ್ಟಣದ ಹಲವು ಹಳ್ಳಿಗಳಲ್ಲಿ ಓಡಾಡಿ, ರೈತರೊಂದಿಗೆ ಮಾತುಕತೆ ನಡೆಸಿದಾಗ ನನ್ನ ಅನುಭವಕ್ಕೆ ಬಂದದ್ದು. ಈ ಭೂಮಿಯೇ ಅಂತಹದ್ದು ಅದು ಅತ್ಯಂತ ಫಲವತ್ತಾದ ಭೂಮಿ, ಇಲ್ಲಿಯ ರೈತರು ಭೂಮಿಯನ್ನು ಪ್ರೀತಿಸುವುದು ಮಾತ್ರವಲ್ಲ ತಮ್ಮ ಕೃಷಿ ಕಾಯಕವನ್ನು ಹಂತ ಹಂತವಾಗಿ ಮಾರ್ಪಡಿಸಿಕೊಂಡು ಆಧುನೀಕರಣಗೊಳಿಸಿಕೊಂಡಿದ್ದಾರೆ. ಇಲ್ಲಿಯ ರೈತರು ಭೂಮಿಯಲ್ಲಿ ಬೆವರು ಸುರಿಸಿ ದುಡಿಮೆಯ ಫಲ ನೋಡಿದ್ದಾರೆ. ತಮ್ಮ ಸುತ್ತಲೂ ನಡೆದ ಭೂಸ್ವಾಧೀನದಲ್ಲಿ ಭೂಮಿ ಕಳೆದುಕೊಂಡ ಅಣ್ಣ ತಮ್ಮಂದಿರ ಬದುಕನ್ನು ಹತ್ತಿರದಿಂದ ಕಂಡಿದ್ದಾರೆ. ಇವೆಲ್ಲವೂ ಇವರಿಗೆ ತಮ್ಮ ಭೂಮಿ ಮಾತ್ರವೇ ಬದುಕನ್ನು ನಿರ್ಮಿಸಿಕೊಡಬಲ್ಲದು ಎಂಬ ವಿಶ್ವಾಸವನ್ನು ಮೂಡಿಸಿದೆ. ಈ ಚಳುವಳಿ ಆರಂಭವಾದಾಗಿನಿಂದ ಇವರು ಹಂತ ಹಂತವಾಗಿ ನಿಜವಾದ ಅರ್ಥದಲ್ಲಿ ಒಂದು ವರ್ಗವಾಗಿ ಪರಿವರ್ತನೆಯಾಗಿದ್ದಾರೆ.

ಐತಿಹಾಸಿಕ ಧರಣಿ ಸ್ಥಳದಲ್ಲಿ ಗೆಲುವಿನ ಸಂಭ್ರಮಾಚರಣೆಯ ಮಾತುಗಳನ್ನಾಡುವಾಗ ಸಂಯುಕ್ತ ಹೋರಾಟ ಕರ್ನಾಟಕದ ಸಂಚಾಲಕರಲ್ಲಿ ಒಬ್ಬರಾದ, ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಟಿ.ಯಶವಂತರವರು ಆಡಿದ ಮಾತು ನಮ್ಮ ಮುಂದಿರುವ ಕೆಲಸವನ್ನು ನೆನಪಿಸುವಂತಿತ್ತು. "ಎಲ್ಲಿಂದ ಬಂದಿರೆಂದು ಕೇಳಬಹುದು ನೀವು, ಜನರ ನಡುವಿನಿಂದ ಎಂದು ಹೇಳುತ್ತೇವೆ ನಾವು, ಮತ್ತೆ ಪಯಣ ಎಲ್ಲಿಗೆಂದು ಕೇಳಬಹುದು ನೀವು, ತಿರುಗಿ ಮತ್ತೆ ಜನರ ನಡುವೆ ಹೋಗುತ್ತೇವೆ ನಾವು". ಈ ಗೆಲುವನ್ನು ಜನರೊಂದಿಗೆ ತೆಗೆದುಕೊಂಡು ಹೋಗಿ ಕೇಂದ್ರ ರಾಜ್ಯ ಸರ್ಕಾರಗಳ ಕಾರ್ಪೋರೇಟ್ ಪರವಾದ ನೀತಿಗಳಿಂದ ನಲುಗುತ್ತಿರುವ ರಾಜ್ಯದ ಎಲ್ಲ ದುಡಿಯುವ ಜನರನ್ನು ಸಂಘಟಿಸಿ, ಎಲ್ಲರಿಗೂ ಇಂತಹ ಗೆಲುವನ್ನು ತಮ್ಮದಾಗಿಸಬೇಕಿದೆ. ●

ಜಮ್ಮು ಮತ್ತು ಕಾಶ್ಮೀರದ ಜನರ 'ಹುತಾತ್ಮ ದಿನ' ಆಚರಣೆಗೆ ಅಡ್ಡಿ: ಮುಖ್ಯಮಂತ್ರಿಗಳ ಮೇಲೆಯೇ ಕೈಮಾಡಿದ ಪೊಲೀಸ್, ರಾಜಕೀಯ ಮುಖಂಡರ ಗೃಹಬಂಧನ

ಜಮ್ಮು ಮತ್ತು ಕಾಶ್ಮೀರ ಡೋಗ್ರಾ ರಾಜರ ಊಳಿಗಮಾನ್ಯ ದಬ್ಬಾಳಿಕೆಯ ವಿರುದ್ಧ ಕಾಶ್ಮೀರಿಗಳು ನಡೆಸಿದ ಹೋರಾಟಗಳಲ್ಲಿ ಜುಲೈ 13, 1931 ಒಂದು ಮಹತ್ವದ ದಿನ. ಅಂದು ದಬ್ಬಾಳಿಕೆಯ ವಿರುದ್ಧ ಪ್ರತಿಭಟಿಸಲು, ಬಂಧಿಸಿದ್ದ ತಮ್ಮ ಮುಖಂಡರನ್ನು ಬಿಡುಗಡೆ ಮಾಡುವಂತೆ ಆಗ್ರಹಿಸಲು ಸೇರಿದ್ದ ಜನರ ಮೇಲೆ ಡೋಗ್ರಾ ಮಹಾರಾಜನ ಸೈನ್ಯ ಸಿಕ್ಕಾಪಟ್ಟೆ ಗುಂಡು ಹಾರಿಸಿ 22 ಮಂದಿಯನ್ನು ಕೊಂದಿತು. ಪ್ರತಿಭಟನಾಕಾರರು ಆ ಹುತಾತ್ಮರ ದೇಹಗಳನ್ನು ಶ್ರೀನಗರದ ನಕ್ಷ್‌ಬಂದ್ ಸಾಹಿಬ್ ಎಂಬ ಸ್ಥಳದಲ್ಲಿ ದಫನ್ ಮಾಡಿದರು. ಮುಂದೆ ಇದು ಬ್ರಿಟಿಷ್ ಆಳರಸರು ಮತ್ತು ಅವರ ಹಿಡಿತಕ್ಕೆ ಒಳಗಾದ ಡೋಗ್ರ ಮಹಾರಾಜರ ಪಾಳೆಯಗಾರೀ ದಬ್ಬಾಳಿಕೆಯ ವಿರುದ್ಧ ರೈತರು, ಕಾರ್ಮಿಕರು ಮತ್ತು ಇತರ ಜನವಿಭಾಗಗಳವರು ಒಟ್ಟುಗೂಡಿ ನಡೆಸಿದ 'ನಯಾ ಕಾಶ್ಮೀರ್' ಹೋರಾಟದ ಇತಿಹಾಸದಲ್ಲಿ ಒಂದು ತಿರುಗು ಬಿಂದುವಾಯಿತು. ಅಂದಿನಿಂದ ಪ್ರತಿವರ್ಷ ಜುಲೈ 13ನ್ನು 'ಹುತಾತ್ಮದಿನ'ವಾಗಿ ಆಚರಿಸಲಾಗುತ್ತಿದೆ. ಜುಲೈ 13 ಜಮ್ಮು ಮತ್ತು ಕಾಶ್ಮೀರದಲ್ಲಿ ಸಾರ್ವಜನಿಕ ರಜಾದಿನವಾಗಿತ್ತು. ಆದರೆ 2019ರಲ್ಲಿ ಸಂವಿಧಾನದ 370ನೇ ವಿಧಿಯನ್ನು ರದ್ದುಮಾಡಿದ ನಂತರ ಇದರ ಆಚರಣೆಗೆ ಅಡೆತಡೆ ಉಂಟಾಗುತ್ತಿದೆ.

ಈ ವರ್ಷ, ಜಮ್ಮು ಮತ್ತು ಕಾಶ್ಮೀರದ ಚುನಾಯಿತ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ಹುತಾತ್ಮರಿಗೆ ಗೌರವ ಸಲ್ಲಿಸಲು ನಕ್ಷ್‌ಬಂದ್ ಸಾಹಿಬ್ ಸ್ಮಶಾನಕ್ಕೆ ಹೋದಾಗ ಅವರ ಮೇಲೆಯೇ ಪೊಲೀಸರು ಕೈಮಾಡಿದರು. ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಹಾಗೂ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯ



ಸದಸ್ಯ ಮೊಹಮ್ಮದ್ ಯೂಸುಫ್ ತಾರಿಗಾಮಿ ಸೇರಿದಂತೆ ಜಮ್ಮು ಮತ್ತು ಕಾಶ್ಮೀರದ ಅನೇಕ ರಾಜಕೀಯ ನಾಯಕರನ್ನು ಗೃಹಬಂಧನದಲ್ಲಿ ಇರಿಸಿ, ಅವರುಗಳು ಹುತಾತ್ಮರಿಗೆ ಗೌರವ ಸಲ್ಲಿಸಲು ಹೋಗದಂತೆ ತಡೆಯಲಾಯಿತು. ಇದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

"ಜಮ್ಮು ಮತ್ತು ಕಾಶ್ಮೀರದ ಜನರ ಭಾವನೆಗಳೊಂದಿಗೆ ಆಟವಾಡುವುದನ್ನು ನಿಲ್ಲಿಸಿ"

ಈಗ ಕೇಂದ್ರಾಡಳಿತ ಮಟ್ಟಕ್ಕೆ ಇಳಿಸಲಾದ ರಾಜ್ಯದಲ್ಲಿ ಚುನಾಯಿತ ಸರಕಾರ ಇದ್ದರೂ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ತನ್ನದೇ ಆದ ಆದೇಶಗಳು ಮತ್ತು ಪ್ರತಿಗಾಮಿ ದೃಷ್ಟಿಕೋನಗಳನ್ನು ಜಾರಿಗೊಳಿಸಲು ಪ್ರಯತ್ನಿಸುತ್ತಿದೆ. ಇದಕ್ಕೆ ಉದಾಹರಣೆಯೆಂದರೆ ಹುತಾತ್ಮರ ದಿನವಾದ ಜುಲೈ 13ರ ರಜಾದಿನವನ್ನು ಉಪ ರಾಜ್ಯಪಾಲರು ರದ್ದುಗೊಳಿಸಿರುವುದು. ಮತ್ತೊಂದೆಡೆ, ಹೋರಾಟಗಾರರ ಮೇಲೆ ಗೋಲೀಬಾರು ಮತ್ತು ಹತ್ಯೆಗೆ ಕಾರಣರಾದ ಮಹಾರಾಜರ ಜನ್ಮದಿನವನ್ನು ರಜಾದಿನವೆಂದು ಘೋಷಿಸಲಾಗಿದೆ. ಕೇಂದ್ರ ಸರ್ಕಾರದಿಂದ ನೇಮಿಸಲ್ಪಟ್ಟ ಉಪ ರಾಜ್ಯಪಾಲರು ವಿಧ್ಯುಕ್ತವಾಗಿ ಚುನಾಯಿತವಾದ ರಾಜ್ಯ ಸರ್ಕಾರದ ಸುಗಮ ಕಾರ್ಯನಿರ್ವಹಣೆಗೆ ಅಡ್ಡಿ ಪಡಿಸುತ್ತಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟೀಕಿಸಿದೆ.

ಬಿಜೆಪಿ ಸರಕಾರ ಜಮ್ಮು ಮತ್ತು ಕಾಶ್ಮೀರದ ಜನರ ಭಾವನೆಗಳೊಂದಿಗೆ ಆಟವಾಡುವುದನ್ನು ನಿಲ್ಲಿಸಬೇಕು, ಜುಲೈ 13ರ ಹುತಾತ್ಮರ ದಿನವನ್ನು ಮತ್ತೆ ರಜಾದಿನವಾಗಿ ಮಾಡಬೇಕು ಮತ್ತು ಜಮ್ಮು ಮತ್ತು ಕಾಶ್ಮೀರದ ಜನರ ಪ್ರಜಾಪ್ರಭುತ್ವ ಹಕ್ಕುಗಳನ್ನು ಗೌರವಿಸಿ ರಕ್ಷಿಸಬೇಕು ಎಂದು ಬಿಜೆಪಿ ಸರ್ಕಾರವನ್ನು ಆಗ್ರಹಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಮುಖ್ಯಮಂತ್ರಿಗಳು, ರಾಜಕೀಯ ನಾಯಕರು ಹಾಗೂ ಜಮ್ಮು ಮತ್ತು ಕಾಶ್ಮೀರದ ಜನರ ಮೇಲಿನ ಈ ಪ್ರಹಾರಕ್ಕೆ ಉಪ ರಾಜ್ಯಪಾಲರು ಕ್ಷಮೆಯಾಚಿಸಬೇಕು ಎಂದು ಹೇಳಿದೆ.

......'ಅಧಿಕೃತ' ಫೇಕ್ ನ್ಯೂಸ್!

ಪುಟ 10 ರಿಂದ

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಕುಟುಂಬ ಸರ್ವೆಗಳಲ್ಲಿ ಅತ್ಯಂತ ಶ್ರೀಮಂತ ವಿಭಾಗಗಳನ್ನು ಸಾಮಾನ್ಯವಾಗಿ ಒಳಗೊಳ್ಳುವುದಿಲ್ಲ. ಒಬ್ಬ ಅರ್ಥಶಾಸ್ತ್ರಜ್ಞರು ಹೇಳಿರುವಂತೆ, ಮುಂಬೈಯಲ್ಲಿರುವ ಅಂಬಾನಿ ಕುಟುಂಬದ ಭವ್ಯ ಭವನಕ್ಕೆ ಒಬ್ಬ ಸರ್ವೆ ಮಾಡುವವರು ಹೋಗಿ ಅವರು ಪ್ರತಿ ತಿಂಗಳು ಅನ್ನ–ಬಟ್ಟೆ ಇತ್ಯಾದಿಗೆ ಎಷ್ಟು ಖರ್ಚು ಮಾಡುತ್ತಾರೆ ಎಂದು ಕೇಳಲು ಸಾಧ್ಯವೇ? ಇದರಿಂದಾಗಿ ಬಳಕೆ ಖರ್ಚುಗಳ ಈ ದತ್ತಾಂಶಗಳು ಈ ಅತಿ ಸಣ್ಣ ವಿಭಾಗದ ಖರ್ಚುಗಳನ್ನು ಬಿಂಬಿಸಲಾರವು. ಆದರೆ ಭಾರತದಂತಹ ದೇಶದಲ್ಲಿ ತುತ್ತ ತುದಿಯ ಈ 1 ಶೇಕಡಾ ಜನರಲ್ಲೇ ಗರಿಷ್ಟ ಆದಾಯ ಮತ್ತು ಸಂಪತ್ತು ತುಂಬಿಕೊಂಡಿರುವಾಗ, ಇವು ಒಟ್ಟು ದತ್ತಾಂಶಗಳಲ್ಲಿ ಸೇರಿರದಿದ್ದರೆ, ಉಳಿದ ಜನವಿಭಾಗಗಳ ಬಳಕೆ ಖರ್ಚಿನ ಮಟ್ಟದಲ್ಲಿ ಬಹಳಷ್ಟು ವ್ಯತ್ಯಾಸಗಳೇನೂ ಬಿಂಬಿತವಾಗುವುದಿಲ್ಲ, **ಇದು ಸಹಜವಾಗಿಯೇ 'ಸಮಾನತೆ'ಯ ಭ್ರಮೆಯನ್ನು ಉಂಟುಮಾಡುತ್ತದೆ. ಇಂತಹ ಭ್ರಮೆಯನ್ನು ಹರಡುವ ಪ್ರಯತ್ನದಲ್ಲಿ ಪತ್ರಿಕೆಗಳೂ ಅಮಾಯಕರಂತೆ ಪಾಲ್ಗೊಳ್ಳಬೇಕೇ ಎಂಬುದು ಕೇಳಬೇಕಾಗಿರುವ ಪ್ರಶ್ನೆ.**

ವಾಸ್ತವತೆ ತದ್ವಿರುದ್ಧ

ವಾಸ್ತವ ಪರಿಸ್ಥಿತಿ ಪಿಐಬಿ ಹೇಳಿಕೆಗೆ, ಆಮೂಲಕ ಸರಕಾರ ಬಿಂಬಿಸಬಯಸುವುದಕ್ಕೆ ತದ್ವಿರುದ್ಧವಾಗಿದೆ. ಇತರ ಹಲವು ಜಾಗತಿಕ ಸೂಚ್ಯಂಕಗಳು ಈಗಾಗಲೇ ಇದನ್ನು ಬಿಂಬಿಸಿವೆ. ಇವುಗಳಲ್ಲಿ ತೀರಾ ಇತ್ತೀಚಿನದ್ದೆಂದರೆ, ಈ ಪಿಐಬಿ ಹೇಳಿಕೆ ಪ್ರಕಟವಾಗುವುದಕ್ಕಿಂತ ಸ್ವಲ್ಪವೇ ಮುಂಚೆ ಬೆಳಕಿಗೆ ಬಂದ ಪೋಷಣಾಂಶ ಸೇವನೆ ಕುರಿತ ವರದಿ. ಇದು ಕೂಡ ಸರಕಾರವೇ ಬಿಡುಗಡೆ ಮಾಡಿರುವ ಎನ್‌ಎಸ್‌ಒ ವರದಿ. 2022–23 ಮತ್ತು 2023–24ರಲ್ಲಿ ನಡೆಸಿದ ಸರ್ವೆಗಳ ಫಲಿತಾಂಶಗಳನ್ನು ಇದು ಒಳಗೊಂಡಿದೆ. 1,55 ಲಕ್ಷ ಗ್ರಾಮವಾಸಿಗಳು ಮತ್ತು 1,07 ನಗರವಾಸಿಗಳ ನಡುವೆ ನಡೆಸಿದ ಸರ್ವೆಯಿದು.

ಈ ವರದಿಯ ಪ್ರಕಾರ, ಒಬ್ಬ ವಯಸ್ಕ ವ್ಯಕ್ತಿಯ ಕನಿಷ್ಟ ಪೋಷಣಾಂಶ ಆವಶ್ಯಕತೆ 2325 ಕೆಕ್ಯಾಲರಿ (2017–18ರ ಮೊದಲು ಇದು 2700 ಕೆಕ್ಯಾಲರಿ ಎಂದಿತ್ತು–ಇದರಲ್ಲಿ ಕಡಿತ ಮಾಡಿದ್ದೇಕೆ ಎಂಬುದಕ್ಕೆ ಸರಿಯಾದ ಕಾರಣಗಳನ್ನು ತಿಳಿಸಲಾಗಿಲ್ಲ ಎಂಬುದು ಬೇರೆಯೇ ಸಂಗತಿ).

ಸರ್ವೆಯ ಫಲಿತಾಂಶಗಳ ಪ್ರಕಾರ:

* ಅತ್ಯಂತ ಬಡ ಶೇ. 5ರಷ್ಟು ಜನಸಂಖ್ಯೆಗೆ ಗ್ರಾಮೀಣ ಪ್ರದೇಶಗಳಲ್ಲಿ ಸಿಗುವ ಸರಾಸರಿ ಪೋಷಣಾಂಶ 1688 ಕೆಕ್ಯಾಲರಿ. ನಗರಪ್ರದೇಶಗಳಲ್ಲಿ 1696 ಕೆಕ್ಯಾಲರಿ. ಅಂದರೆ ಕನಿಷ್ಟ ಆವಶ್ಯಕತೆಗಿಂತ ಶೇ. 30ರಷ್ಟು ಕಡಿಮೆ.
* ಇನ್ನೊಂದು ತುದಿಯಲ್ಲಿ, ಅತ್ಯಂತ ಶ್ರೀಮಂತ ಶೇ. 5ರಷ್ಟು ಜನಸಂಖ್ಯೆಯ ಪೋಷಣಾಂಶ ಸೇವನೆಯ ಸರಾಸರಿ ಗ್ರಾಮೀಣ ಪ್ರದೇಶಗಳಲ್ಲಿ 2942 ಕೆಕ್ಯಾಲರಿ, ನಗರಪ್ರದೇಶಗಳಲ್ಲಿ 3092 ಕೆಕ್ಯಾಲರಿ. ಅಂದರೆ ಕನಿಷ್ಟ ಆವಶ್ಯಕತೆಗಿಂತ ಶೇ. 30ರಷ್ಟು ಹೆಚ್ಚು!
* ಜನಸಂಖ್ಯೆಯ ಶೇ. 60–70 ಕನಿಷ್ಟ ಆವಶ್ಯಕತೆಯಾದ 2325 ಕೆಕ್ಯಾಲರಿಗಿಂತ ಕಡಿಮೆ ಸೇವನೆ ಮಾಡುತ್ತಾರೆ.

ಈ ವರದಿ ಪ್ರೊಟೀನ್ ಸೇವನೆ, ಕೊಬ್ಬು ಸೇವನೆಯಲ್ಲೂ ಇದೇ ತರಹದ ಭಾರೀ ಅಸಮಾನತೆಗಳು ಕಂಡುಬಂದಿವೆ ಎಂದೂ ಹೇಳುತ್ತದೆ.

ಈ ವರದಿ ಕೊಡುವ ಒಟ್ಟಾರೆ ಚಿತ್ರ ಎಂದರೆ, ಬಡವರು ಮತ್ತು ಶ್ರೀಮಂತರ ನಡುವೆ ಅಗಾಧ ಅಂತರ. ಇವು ಆದಾಯಗಳಲ್ಲಿನ ಅಗಾಧ ಅಂತರಕ್ಕೆ ಅನುಗುಣವಾಗಿಯೇ ಇವೆ ಎಂದು ಬೇರೆ ಹೇಳಬೇಕಾಗಿಲ್ಲ.


ಅಸಮಾನತೆಯ ಪ್ರಮಾಣವನ್ನು ಸೂಚಿಸುವ ಇನ್ನೂ ಕೆಲವು ಸೂಚ್ಯಂಕಗಳನ್ನು ಗಮನಿಸಿ:

* ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ, ಆಹಾರ ಮತ್ತು ಕೃಷಿ ಸಂಘಟನೆ(ಎಫ್‌ಎಒ)ಯ 2019ರ ಆಹಾರ ಸೇವನೆ ಸೂಚ್ಯಂಕದಲ್ಲಿಯೂ, ಭಾರತದ ಸ್ಥಾನ 185 ದೇಶಗಳಲ್ಲಿ 102ನೇಯದ್ದು. 2009ರಲ್ಲಿ 82ನೇ ಸ್ಥಾನದಲ್ಲಿತ್ತು.
* ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತದ ಸ್ಥಾನ 127 ದೇಶಗಳಲ್ಲಿ 105ನೇಯದ್ದು
* ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 193 ದೇಶಗಳಲ್ಲಿ 134ನೇಯದ್ದು
* ಹೆಚ್ಚುತ್ತಿರುವ ಅಸಮಾನತೆಯ ಚರ್ಚೆಗೆ ಇಂಬು ನೀಡಿದ ಥಾಮಸ್ ಪಿಕೆಟ್ಟಿ ಮತ್ತು ಸಂಗಡಿಗರ 'ಗ್ಲೋಬಲ್ ಇನಿಕ್ವಾಲಿಟಿ ಡಾಟಾಬೇಸ್' (ಜಾಗತಿಕ ಅಸಮಾನತೆ ದತ್ತಾಂಶ ನೆಲೆ) ವರದಿಯ ಇತ್ತೀಚಿನ ಆವೃತ್ತಿಯ ಶಿರೋನಾಮೆಯೇ "ಭಾರತದಲ್ಲಿ ಆದಾಯ ಮತ್ತು ಸಂಪತ್ತು ಅಸಮಾನತೆ 1922–2023: ಬಿಲಿಯಾಧಿಪತಿಗಳ ರಾಜ್ಯಭಾರ" ಎಂದಿರುವುದನ್ನು ಗಮನಿಸಬೇಕು.
* ಇದರ ಪ್ರಕಾರ, 2023ರಲ್ಲಿ, ತೆರಿಗೆ ಪೂರ್ವ ಆದಾಯದ ಜೀನಿ ಸೂಚ್ಯಂಕ 61 ಆಗಿದ್ದರೆ, ಸಂಪತ್ತಿನ ಜೀನಿ ಸೂಚ್ಯಂಕ 75. ಈ ಡಾಟಾಬೇಸ್ ಪರಿಶೀಲಿಸಿದ 218 ಅರ್ಥವ್ಯವಸ್ಥೆಗಳಲ್ಲಿ, ಆದಾಯದ ವಿಷಯದಲ್ಲಿ ಭಾರತ 171ನೇ ಸ್ಥಾನದಲ್ಲಿದ್ದರೆ, ಸಂಪತ್ತಿನ ವಿಷಯದಲ್ಲಿ 68ನೇ ಸ್ಥಾನದಲ್ಲಿದೆ, (ಇದನ್ನು ಪಿಐಬಿ ಸಂಭ್ರಮಿಸುವ ಭಾರತಕ್ಕೆ ನಾಲ್ಕನೇ ಅತ್ಯಂತ ಸಮಾನತೆಯ ಸ್ಥಾನ ನೀಡಿದೆ ಎನ್ನಲಾದ ಬಳಕೆ–ಆಧಾರಿತ ಜೀನಿ ಸೂಚ್ಯಂಕ 25,5 ರೊಂದಿಗೆ ಹೋಲಿಸಿ ನೋಡಬಹುದು).

ಅಂದರೆ, ಯಾವುದೇ ರೀತಿಯಲ್ಲಿ ನೋಡಿದರೂ, ಭಾರತ ಅತ್ಯಂತ ಅಸಮಾನತೆಯಿರುವ ದೇಶ ಮತ್ತು ಈ ಅಸಮಾನತೆ ಹೆಚ್ಚುತ್ತಲೇ ಇದೆ ಎಂಬ ತೀರ್ಮಾನಕ್ಕೇ ಬರಬೇಕಾಗುತ್ತದೆ. ಆದರೂ ಪಿಐಬಿ ಬಳಕೆ–ಆಧಾರಿತ ಜೀನಿ ಸೂಚ್ಯಂಕವನ್ನು ಸಂಭ್ರಮಿಸಲು ಮುಂದಾದ್ದೇಕೆ? ಬಹುಶಃ ಅದಕ್ಕೆ ಉತ್ತರವೂ ಈ ಹೆಚ್ಚುತ್ತಲೇ ಇರುವ ಅಸಮಾನತೆಯಲ್ಲಿಯೇ

ಸಾಮ್ರಾಜ್ಯಶಾಹಿ ವ್ಯವಸ್ಥೆಯ ರಕ್ಷಣೆಗೆ ಪಾಶ್ಚಿಮಾತ್ಯ ದೇಶಗಳಲ್ಲೂ ಜನಕಲ್ಯಾಣ ವೆಚ್ಚಗಳಲ್ಲಿ ಕಡಿತ

ಇರಾನ್ ಮೇಲೆ ನಡೆಸಿದ ಬಾಂಬ್ ದಾಳಿಯು ಕುಸಿಯುತ್ತಿರುವ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ವ್ಯವಸ್ಥೆಯನ್ನು ಕಾಪಾಡಿಕೊಳ್ಳುವ ಬಯಕೆಯಿಂದ ಪ್ರೇರೇಪಿಸಲ್ಪಟ್ಟಿವೆ. ಮುಂಬರುವ ವರ್ಷಗಳಲ್ಲಿ ಇಂತಹ ಹಲವಾರು ಆಕ್ರಮಣಕಾರಿ ನಿದರ್ಶನಗಳನ್ನು ಕಾಣುವ ಸಾಧ್ಯತೆಯಿದೆ. ಅದಕ್ಕೆ ತಯಾರಿ ನಡೆಸುವ ಸಲುವಾಗಿ ಮುಂದುವರಿದ ದೇಶಗಳ ಕಾರ್ಮಿಕರು ಇಲ್ಲಿಯವರೆಗೆ ಅನುಭವಿಸಿದ ಜನಕಲ್ಯಾಣ ಕ್ರಮಗಳನ್ನೂ ಮರೆತುಬಿಡುವಂತೆ ಮಾಡಲಾಗುತ್ತಿದೆ. ಕುಸಿಯುತ್ತಿರುವ ಸಾಮ್ರಾಜ್ಯಶಾಹಿಯು ಅತ್ಯಂತ ಅಪಾಯಕಾರಿಯಾಗುತ್ತದೆ. ಏಕೆಂದರೆ, ಅದು ಜಗತ್ತನ್ನು ದುರಂತಕ್ಕೆ ತಳ್ಳಲೂ ಹೇಸುವುದಿಲ್ಲ. ಆದ್ದರಿಂದ ಈ ಸಾಮ್ರಾಜ್ಯಶಾಹಿ ಎಚ್ಚರಗೇಡಿತನವನ್ನು ವಿರೋಧಿಸಲು ವಿಶ್ವಾದ್ಯಂತ ಜನರಲ್ಲಿ ಜಾಗೃತಿ ಮೂಡಿಸುವುದು ಅತ್ಯಗತ್ಯವಾಗುತ್ತದೆ.



ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಮಹಾಯುದ್ಧದ ನಂತರ ಬಂಡವಾಳಶಾಹಿಯು ತನ್ನ ಅಸ್ತಿತ್ವಕ್ಕೇ ಎದುರಾದ ಒಂದು ಗಂಭೀರ ಸವಾಲನ್ನು ನಿಭಾಯಿಸಲು ಒಂದು ಇಬ್ಬಗೆಯ ಕಾರ್ಯತಂತ್ರವನ್ನು ಅಳವಡಿಸಿಕೊಂಡಿತು. ಮೊದಲನೆಯದು, ಬಂಡವಾಳಶಾಹಿ ವ್ಯವಸ್ಥೆಯನ್ನು ಮರುಮಾತಾಡದೆ ಒಪ್ಪಿಕೊಳ್ಳುವಂತೆ ಆಯಾಯ ದೇಶಗಳಲ್ಲಿ ಕಾರ್ಮಿಕ ವರ್ಗವನ್ನು ಭಯಭೀತಗೊಳಿಸುವ ಸಲುವಾಗಿ, ಒಂದು "ಕಮ್ಯೂನಿಸ್ಟ್ ಭೀತಿ"ಯನ್ನು ಅದು ಹುಟ್ಟುಹಾಕಿತು. ಎರಡನೆಯದು, ಅದು ತನ್ನ ಕಾರ್ಯವಿಧಾನದಲ್ಲಿ ಕೆಲವು ಹೊಂದಾಣಿಕೆಗಳನ್ನು ಮಾಡಿಕೊಳ್ಳುವುದು ಅನಿವಾರ್ಯವಾಯಿತು. ಈ ಹೊಂದಾಣಿಕೆಗಳಲ್ಲಿ ನಾಲ್ಕು ಅಂಶಗಳು ಗಮನಾರ್ಹವಾಗಿವೆ. ಅವುಗಳೆಂದರೆ, ತಾನು ಹೊಂದಿದ್ದ ವಸಾಹತುಗಳಿಂದ ಅಧಿಕೃತವಾಗಿ ನಿರ್ಗಮಿಸುವುದು (ಅಪ–ವಸಾಹತೀಕರಣ), ಸಾರ್ವತ್ರಿಕ ವಯಸ್ಕ ಮತದಾನ ಹಕ್ಕುಗಳ ಆಧಾರದ ಮೇಲೆ ಪ್ರಜಾಪ್ರಭುತ್ವ ಆಡಳಿತವನ್ನು ಪರಿಚಯಿಸುವುದು, ರಾಶಿ ರಾಶಿ ನಿರುದ್ಯೋಗವನ್ನು ತೊಡೆದುಹಾಕಲು ಕೀನ್ಸ್ ಪ್ರತಿಪಾದಿಸಿದ್ದ "ಬೇಡಿಕೆ ನಿರ್ವಹಣೆ"ಯನ್ನು ಅಳವಡಿಸಿಕೊಳ್ಳುವುದು ಮತ್ತು ಕಲ್ಯಾಣ ಪ್ರಭುತ್ವದ ಕ್ರಮಗಳನ್ನು, ವಿಶೇಷವಾಗಿ ಪಶ್ಚಿಮ ಯುರೋಪಿನಲ್ಲಿ ಅಳವಡಿಸಿಕೊಳ್ಳುವುದು. ಈ ಬದಲಾವಣೆಗಳು ಎಷ್ಟು ಮಹತ್ವ ಹೊಂದಿದ್ದವು ಎಂದರೆ, "ಬಂಡವಾಳಶಾಹಿ ಬದಲಾಗಿದೆ", ಅದೀಗ ನಾವು ಕಂಡ ಹಳೆಯ ಸುಲಿಗೆಕೋರ ಬಂಡವಾಳಶಾಹಿಯಲ್ಲ, ಬದಲಾಗಿ ಇದೊಂದು ಹೊಸ "ಕಲ್ಯಾಣಕಾರೀ ಬಂಡವಾಳಶಾಹಿ" ಎಂಬ ಅನಿಸಿಕೆ ಎಲ್ಲೆಡೆ ಹರಡಿತು.

ಯುದ್ಧಾನಂತರ ಉಂಟಾದ ಒಂದು ಸುದೀರ್ಘ ಆರ್ಥಿಕ ಉತ್ಕರ್ಷದ ಅವಧಿಯಲ್ಲಿ ಹಣಕಾಸು ಬಂಡವಾಳವು ಸಾಕಷ್ಟು ಬಲಗೊಂಡಿತು. ನಂತರ ಅದು ಜಾಗತೀಕರಣಗೊಂಡಿತು. ಜಾಗತೀಕರಣಗೊಂಡ ಬಂಡವಾಳವು ರಾಷ್ಟ್ರ–ಪ್ರಭುತ್ವಗಳು ಹೊಂದಿದ್ದ ಸ್ವಾಯತ್ತತೆಯನ್ನು ದುರ್ಬಲಗೊಳಿಸಿತು ಮತ್ತು ಎಲ್ಲೆಡೆಯೂ ನವ–ಉದಾರವಾದಿ ಆಳ್ವಿಕೆಯನ್ನು ಹೇರಲು ದಾರಿ ಮಾಡಿಕೊಟ್ಟಿತು. ಈ ನವ–ಉದಾರವಾದಿ ಆಳ್ವಿಕೆಯು ಯುದ್ಧಾನಂತರದಲ್ಲಿ ಅಳವಡಿಸಿಕೊಂಡಿದ್ದ ಕಲ್ಯಾಣ ಪ್ರಭುತ್ವದ ಕ್ರಮಗಳ ಪ್ರಯೋಜನವನ್ನು ತಗ್ಗಿಸುವ ಪ್ರಕ್ರಿಯೆಯನ್ನು ಆರಂಭಿಸಿತು. ಈ ಪ್ರಕ್ರಿಯೆಯು ಈಗ ಒಂದು ಅಭೂತಪೂರ್ವ ವೇಗವನ್ನು ಪಡೆದುಕೊಂಡಿದೆ. ಬೆಳೆದು ಬರುತ್ತಿರುವ ನವ–ಫ್ಯಾಸಿಸಂ ಮತ್ತು ಬೂರ್ಜ್ವಾ ಸರ್ವಾಧಿಕಾರವು ಪ್ರಜಾಪ್ರಭುತ್ವದಲ್ಲಿ ಜನತೆಗೆ ಲಭ್ಯವಿರುವ ಅವಕಾಶಗಳನ್ನು ಕ್ಷೀಣಗೊಳಿಸಿದೆ. ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಪ್ರಾಬಲ್ಯದಿಂದಾಗಿ ವಿಶ್ವ ಬಂಡವಾಳಶಾಹಿಯ ಆರ್ಥಿಕ ಬಿಕ್ಕಟ್ಟನ್ನು ಇನ್ನು ಮುಂದೆ ಕೀನ್ಸ್ ಅವರ "ಬೇಡಿಕೆ ನಿರ್ವಹಣೆ"ಯ ಮೂಲಕ ಪರಿಹರಿಸುವಂತಿಲ್ಲ. ಮತ್ತು, ಪ್ರಭುತ್ವಗಳು ಎಲ್ಲೆಡೆಯೂ ಅಳವಡಿಸಿಕೊಂಡಿದ್ದ ಜನಕಲ್ಯಾಣ ಕ್ರಮಗಳ ಮೇಲಿನ ವೆಚ್ಚಗಳನ್ನು ಕಡಿತಗೊಳಿಸುತ್ತಿವೆ. ಈ ಮೂಲಕ ಲಭಿಸುವ ಹಣವನ್ನು ಹೆಚ್ಚಿನ ಮಟ್ಟದ ಮಿಲಿಟರಿ ವೆಚ್ಚಗಳಿಗಾಗಿ ವಿನಿಯೋಗಿಸಲಾಗುವುದು. ಈ ಮಾರ್ಗವಾಗಿ ಬಂಡವಾಳಗಾರರರಿಗೆ ವರ್ಗಾವಣೆ



ಮಾಡಲಾಗುವುದು. ಈ ಪ್ರಯತ್ನಗಳು ಸಂಘಟಿತವಾಗಿ ನಡೆಯುತ್ತಿವೆ. ಮೆಟ್ರೋಪಾಲಿಟನ್ (ಮುಂದುವರೆದ ಬಂಡವಾಳಶಾಹಿ) ದೇಶಗಳ ಬಂಡವಾಳಶಾಹಿಯ ಬೆಂಬಲದೊಂದಿಗೆ ಪ್ಯಾಲೆಸ್ಟೀನಿಯನ್ನರ ವಿರುದ್ಧ ನಡೆಸಲಾಗುತ್ತಿರುವ ಬಹಿರಂಗ ನರಮೇಧವು ವಸಾಹತುಶಾಹಿ ಕಾಲದಷ್ಟೇ ಕ್ರೌರ್ಯದಿಂದ ಕೂಡಿದೆ.

ಶ್ರೀಮಂತರಿಗೆ ವರ್ಗಾಯಿಸುವ ಲಜ್ಜೆಗೆಟ್ಟ ಕ್ರಮ

ಅಮೆರಿಕದ ಎರಡೂ ಸದನಗಳಿಂದ ಅಂಗೀಕರಿಸಲ್ಪಟ್ಟ ಮತ್ತು ಈಗ ಒಂದು ಕಾನೂನೇ ಆಗಿರುವ ಡೊನಾಲ್ಡ್ ಟ್ರಂಪ್ ಅವರ "ದೊಡ್ಡ ಸುಂದರ ಮಸೂದೆ"ಯು ಜನಕಲ್ಯಾಣ ವೆಚ್ಚಗಳ ಮೇಲೆ ನಡೆಸಿದ ಒಂದು ಬಹು ದೊಡ್ಡ ದಾಳಿಯಾಗಿದೆ. ಅಮೆರಿಕ ಸರ್ಕಾರದ ಖರ್ಚುಗಳ ಅಂದಾಜುಗಳನ್ನು ಸ್ವತಂತ್ರವಾಗಿ ಮಾಡುವ ಕಾಂಗ್ರೆಸ್ಸಿನ ಬಜೆಟ್ ಕಚೇರಿಯ ಪ್ರಕಾರ, ಈ ಮಸೂದೆಯು ಮುಂದಿನ ಹತ್ತು ವರ್ಷಗಳಲ್ಲಿ 4.5 ಟ್ರಿಲಿಯನ್ ಡಾಲರ್ ಮೌಲ್ಯದ ಸಂಚಿತ ತೆರಿಗೆ ರಿಯಾಯಿತಿಗಳನ್ನು ನೀಡುತ್ತದೆ. ಈ ತೆರಿಗೆ ರಿಯಾಯಿತಿಗಳ ಪ್ರಧಾನ ಫಲಾನುಭವಿಗಳು ಶ್ರೀಮಂತರೇ ಆಗಿರುತ್ತಾರೆ. ಜೊತೆಗೆ, ಮಿಲಿಟರಿ ವೆಚ್ಚವು 150 ಬಿಲಿಯನ್ ಡಾಲರ್‌ನಷ್ಟು ಮತ್ತು "ಗಡಿ ಭದ್ರತೆ" ವೆಚ್ಚವು (ಅಂದರೆ, ವಲಸಿಗರನ್ನು ಹೊರಗಿಡಲು ಮಾಡುವ ವೆಚ್ಚ) 129 ಬಿಲಿಯನ್ ಡಾಲರ್‌ನಷ್ಟು ಏರಿಕೆಯಾಗುತ್ತದೆ. ಈ ಎಲ್ಲಾ ಖರ್ಚುಗಳಿಗೆ ಬೇಕಾಗುವ ಹಣವನ್ನು ಆರೋಗ್ಯ ವಿಮೆಯಲ್ಲಿ 930 ಬಿಲಿಯನ್ ಡಾಲರ್, ಹಸಿರು ಇಂಧನದಲ್ಲಿ 488 ಬಿಲಿಯನ್ ಡಾಲರ್ ಮತ್ತು ಆಹಾರ ಸಬ್ಸಿಡಿಯಲ್ಲಿ 287 ಬಿಲಿಯನ್ ಡಾಲರ್ ಕಡಿತ ಮಾಡುವ ಮೂಲಕ ಒದಗಿಸಿಕೊಳ್ಳಲಾಗುತ್ತದೆ. ಆರೋಗ್ಯ ವಿಮೆ (Medicaid) ಎಂಬುದು ಅಮೇರಿಕದ ವೃದ್ಧರು, ಬಡವರು ಮತ್ತು ಅಂಗವಿಕಲರಂತಹ ಸಮಾಜದ ಅತ್ಯಂತ ದುರ್ಬಲ ವರ್ಗಗಳಿಗೆ ಸಹಾಯ ಮಾಡುವ ಒಂದು ಕಾರ್ಯಕ್ರಮವಾಗಿರುವುದರಿಂದ, ಈ ಮಸೂದೆಯ ಪ್ರಕಾರ ಅದನ್ನು ಮೊಟಕುಗೊಳಿಸುವ ಕ್ರಮವು ಸಮಾಜದ ಅತ್ಯಂತ ಅಸಹಾಯಕ ವಿಭಾಗಗಳ ಮೇಲೆ ಬೀಳುವ ಪರಿಣಾಮ ಹಾನಿಕಾರಕವಾಗಿರುತ್ತದೆ. ಹಾಗಾಗಿ, ಟ್ರಂಪ್ ಅವರ "ದೊಡ್ಡ ಸುಂದರ ಮಸೂದೆ" ಎಂಬುದು ಪ್ರಯೋಜನಗಳನ್ನು ಬಡವರಿಂದ ಶ್ರೀಮಂತರಿಗೆ ವರ್ಗಾಯಿಸುವ ಒಂದು ಲಜ್ಜೆಗೆಟ್ಟ ಕ್ರಮವಾಗಿದೆ.

ತೆರಿಗೆ ರಿಯಾಯಿತಿಗಳ ಒಟ್ಟು ಮೊತ್ತವು ಮೇಲೆ ತಿಳಿಸಿದ ಜನಕಲ್ಯಾಣ ವೆಚ್ಚಗಳ ಕಡಿತದ ಒಟ್ಟು ಮೊತ್ತಕ್ಕಿಂತಲೂ ಬಹಳ ದೊಡ್ಡದಾಗಿರುತ್ತದೆ. ಹಾಗಾಗಿ, ಮುಂದಿನ ದಶಕದಲ್ಲಿ ಅಮೆರಿಕದ ವಿತ್ತೀಯ ಕೊರತೆಯು 3.4 ಟ್ರಿಲಿಯನ್ ಡಾಲರ್‌ಗಳಷ್ಟು ಏರಿಕೆಯಾಗುವ ನಿರೀಕ್ಷೆಯಿದೆ. ವಿಷಯವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, ಅಮೆರಿಕದ ಶ್ರೀಮಂತರಿಗೆ ಸಂಪತ್ತನ್ನು ಹಸ್ತಾಂತರಿಸುವ ಸಲುವಾಗಿ ಅಮೆರಿಕ ಸರ್ಕಾರವು ಸಾಲ ಮಾಡುತ್ತದೆ ಮತ್ತು ತಾನು ಕೈಗೊಳ್ಳುತ್ತಿರುವ ಜನಕಲ್ಯಾಣ ವೆಚ್ಚಗಳನ್ನು ಇಳಿಕೆ ಮಾಡುತ್ತದೆ. ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಹೆಸರಿನಲ್ಲಿ ಸಾಲ ಮಾಡುತ್ತದೆ. ಆದರೆ, ಅರ್ಥವ್ಯವಸ್ಥೆಯನ್ನು ನಿಜಕ್ಕೂ ಪುನಶ್ಚೇತನಗೊಳಿಸುವುದಾದರೆ, ಸರ್ಕಾರವು ತಾನು ಪಡೆದ ಸಾಲವನ್ನು ನೇರವಾಗಿ ತನ್ನ ಖರ್ಚುಗಳ ಮೂಲಕ ಬಳಕೆ ಮಾಡಬೇಕಾಗುತ್ತದೆ. ಬದಲಿಗೆ, ಈ ಎಲ್ಲ ಕೊಳ್ಳುವ ಶಕ್ತಿಯನ್ನು ಅದು ಶ್ರೀಮಂತರಿಗೆ ಹಸ್ತಾಂತರಿಸುತ್ತದೆ. ಹಾಗಾಗಿ, ಅರ್ಥವ್ಯವಸ್ಥೆಯನ್ನು ಉತ್ತೇಜಿಸುವಲ್ಲಿ ಸಾಲದ ಪರಿಣಾಮವು ನಗಣ್ಯವಾಗಿರುತ್ತದೆ. ಅಂದರೆ, ಶ್ರೀಮಂತರಿಗೆ ಒದಗಿಸುವ ಈ ತೆರಿಗೆ ಕಡಿತಗಳ ಮೂಲಕ ಅವರಿಗೆ ಉಳಿತಾಯವಾಗುತ್ತದೆ. ಅದು ಅವರ ಸಂಪತ್ತಿಗೆ ಪುಕ್ಕಟೆಯಾಗಿ ಸೇರ್ಪಡೆಯಾಗುತ್ತದೆ.

ಹಣಕಾಸು ಬಂಡವಾಳ ಬಿಡುತ್ತದೆಯೇ?

ಇಲ್ಲೊಂದು ಪ್ರಶ್ನೆ ಉದ್ಭವಿಸಲಿದೆ. ಹಣಕಾಸು ಬಂಡವಾಳವು ಬೃಹತ್ ಪ್ರಮಾಣದ ವಿತ್ತೀಯ ಕೊರತೆಯನ್ನು ಇಷ್ಟಪಡುವುದಿಲ್ಲ. ಶ್ರೀಮಂತರಿಗೆ ಹಣಕಾಸು ವರ್ಗಾವಣೆ ಮಾಡುವ ಉದ್ದೇಶಕ್ಕಾಗಿ ಕೈಗೊಳ್ಳುವ ಬೃಹತ್ ವಿತ್ತೀಯ ಕೊರತೆಯನ್ನೂ ಹಣಕಾಸು ಬಂಡವಾಳವು ಇಷ್ಟಪಡುವುದಿಲ್ಲ. ಶ್ರೀಮಂತರಿಗೆ ಹಣಕಾಸು ವರ್ಗಾವಣೆ ಮಾಡುವ ಉದ್ದೇಶಕ್ಕಾಗಿಯೇ ಬೃಹತ್ ಪ್ರಮಾಣದ ಸಾಲ ಮಾಡಲು (ವಿತ್ತೀಯ ಕೊರತೆಯನ್ನು ಕೈಗೊಳ್ಳಲು) ಮಾಜಿ ಬ್ರಿಟಿಷ್ ಪ್ರಧಾನಿ ಲಿಜ್ ಟ್ರಸ್ ಹೊರಟಿದ್ದರು. ಅವರ ಈ ಪ್ರಯತ್ನಕ್ಕೆ ಹಣಕಾಸು ಬಂಡವಾಳವು ಅದೆಷ್ಟು ಉಗ್ರವಾಗಿ ಆಕ್ಷೇಪಿಸಿತು ಎಂದರೆ, ಪೌಂಡ್–ಸ್ಟರ್ಲಿಂಗ್‌ನ ಮೌಲ್ಯ ಕುಸಿಯಿತು ಮತ್ತು ಲಿಜ್ ಟ್ರಸ್ ರಾಜೀನಾಮೆ ನೀಡಬೇಕಾಯಿತು. ಈ ಪ್ರಕ್ರಿಯೆಯಲ್ಲಿ ಲಿಜ್ ಟ್ರಸ್ ಬ್ರಿಟನ್‌ನ ಇತಿಹಾಸದಲ್ಲಿ ಅತ್ಯಂತ ಕಡಿಮೆ ಅವಧಿಯ ಪ್ರಧಾನಿ ಎನಿಸಿದರು ಮತ್ತು ಅವರ ಅಧಿಕಾರಾವಧಿ ಕೇವಲ 50 ದಿನಗಳಲ್ಲಿ ಕೊನೆಗೊಂಡಿತು. ಹಾಗಾದರೆ, ಶ್ರೀಮಂತರಿಗೆ ಹಣಕಾಸು ವರ್ಗಾವಣೆ ಮಾಡುವ ಉದ್ದೇಶಕ್ಕಾಗಿ ಬೃಹತ್ ಪ್ರಮಾಣದ ಸಾಲ ಪಡೆಯಲು ಡೊನಾಲ್ಡ್ ಟ್ರಂಪ್ ಅವರಿಗೆ ಹಣಕಾಸು ಬಂಡವಾಳವು ಅವಕಾಶ ಮಾಡಿಕೊಟ್ಟಿರುವುದು ಹೇಗೆ?

ಬೃಹತ್ ಪ್ರಮಾಣದ ಈ ವಿತ್ತೀಯ ಕೊರತೆಯ ಗೋಜಲಿನಿಂದ ಟ್ರಂಪ್ ಪಾರಾಗಿದ್ದಾರೆಯೇ ಎಂಬುದು, ಅಂದರೆ, ಶ್ರೀಮಂತರಿಗೆ ಮಾಡುವ ವರ್ಗಾವಣೆಯನ್ನು ಕಡಿತಗೊಳಿಸದೇ ಮತ್ತು ಜನ ಕಲ್ಯಾಣ ವೆಚ್ಚಗಳನ್ನು ಮಾತ್ರ ಕಡಿತಗೊಳಿಸಿ ವಿತ್ತೀಯ ಕೊರತೆಯ ಪ್ರಮಾಣವನ್ನು ಇಳಿಕೆ ಮಾಡುವಂತೆ ಅವರನ್ನು ಹಣಕಾಸು ಬಂಡವಾಳವು ಒತ್ತಾಯಿಸುವುದಿಲ್ಲವೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಆದರೆ, ಸ್ವಲ್ಪ ಆಚೆ ಈಚೆ ಕೊಸರಾಡುವ ಅವಕಾಶವು ಟ್ರಂಪ್ ಅವರಿಗಿದೆ. ಏಕೆಂದರೆ, ಅಮೆರಿಕದ ಡಾಲರ್, ಬ್ರಿಟಿಷ್ ಪೌಂಡ್ ಸ್ಟರ್ಲಿಂಗ್‌ಗಿಂತ ಭಿನ್ನವಾದ ಮತ್ತು ಉನ್ನತವಾದ ಒಂದು ಸ್ಥಾನಮಾನವನ್ನು ಹೊಂದಿದೆ. ವಿಶ್ವದ ಶ್ರೀಮಂತರು ಡಾಲರ್ ಅನ್ನು ಈಗಲೂ "ಚಿನ್ನಕ್ಕೆ ಸಮಾನ"ವೆಂದೇ ಪರಿಗಣಿಸುತ್ತಾರೆ ಮಾತ್ರವಲ್ಲ, ಒಂದು ಬೃಹತ್ ಪ್ರಮಾಣದ ವಿತ್ತೀಯ ಕೊರತೆಯನ್ನು ಟ್ರಂಪ್ ಕೈಗೊಳ್ಳುವ ಸನ್ನಿವೇಶದಲ್ಲಿಯೂ ಸಹ ಅವರು ಡಾಲರ್ ಮೇಲೆ ಇಟ್ಟಿರುವ ನಂಬಿಕೆ ಕಳೆದುಕೊಳ್ಳುವ ಸಂಭವವಿಲ್ಲ. ಬ್ರಿಟಿಷ್ ಶ್ರೀಮಂತರಿಗೆ ಕೊರತೆ–ಹಣಕಾಸಿನ ಮೂಲಕ ವರ್ಗಾವಣೆಗಳನ್ನು ಮಾಡುವ ತನ್ನ ಕುಖ್ಯಾತ ಯೋಜನೆಯನ್ನು ಆರಂಭಿಸಿದಾಗ ಲಿಜ್ ಟ್ರಸ್‌ಗೆ ಈ ಅವಕಾಶ ಇರಲಿಲ್ಲ.

ತೆರಿಗೆ ಏರಿಕೆ ಅಥವ ಕಲ್ಯಾಣವೆಚ್ಚ ಕಡಿತ

ಅಮೆರಿಕದಲ್ಲಿ ಈಗ ಸಂಭವಿಸುತ್ತಿರುವ ಜನಕಲ್ಯಾಣ ವೆಚ್ಚಗಳ ಕಡಿತದ ವಿದ್ಯಮಾನವನ್ನು ವಿಶ್ವಾದ್ಯಂತವೂ ಮೆಟ್ರೊಪಾಲಿಟನ್ ಬಂಡವಾಳಶಾಹಿಯು ಶೀಘ್ರದಲ್ಲೇ ಅನುಸರಿಸಲಿದೆ. ದಿ ಹೇಗ್‌ನಲ್ಲಿ ಜೂನ್ 24–25ರಂದು ನಡೆದ ನ್ಯಾಟೋ (ಉತ್ತರ ಅಟ್ಲಾಂಟಿಕ್ ದೇಶಗಳ ಮಿಲಿಟರಿ ಕೂಟ) ಶೃಂಗಸಭೆಯಲ್ಲಿ, 2035ರ ವೇಳೆಗೆ ನ್ಯಾಟೋದ ಎಲ್ಲ ಸದಸ್ಯ ದೇಶಗಳೂ ತಮ್ಮ ಮಿಲಿಟರಿ ವೆಚ್ಚಗಳನ್ನು ಜಿಡಿಪಿಯ ಶೇ. 5ಕ್ಕೆ ಏರಿಕೆ ಮಾಡುವಂತೆ ನಿರ್ಧರಿಸಲಾಗಿದೆ. ಪ್ರಸ್ತುತ ಮಿಲಿಟರಿ ವೆಚ್ಚವು ಜಿಡಿಪಿಯ ಸುಮಾರು ಶೇ. 2ರಷ್ಟಿದೆ ಮತ್ತು ಅನೇಕ ದೇಶಗಳಲ್ಲಿ ಅಷ್ಟು ಕೂಡ ಇಲ್ಲ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ನ್ಯಾಟೋ ದೇಶಗಳು, ವಿಶೇಷವಾಗಿ ಯುರೋಪಿನ ದೇಶಗಳು, ಒಂದು ದಶಕದ ಅವಧಿಯಲ್ಲಿ ತಮ್ಮ ಮಿಲಿಟರಿ ವೆಚ್ಚವನ್ನು ಜಿಡಿಪಿಯ ಶೇ. 2ರಿಂದ ಶೇ. 5ಕ್ಕೆ ಏರಿಕೆ ಮಾಡಲು ಯೋಜಿಸುತ್ತಿವೆ.

ನ್ಯಾಟೋ ದೇಶಗಳ ಕರೆನ್ಸಿಗಳನ್ನು ಅಮೆರಿಕದ ಡಾಲರ್‌ನೊಂದಿಗೆ ಹೋಲಿಸಲಾಗದು. ಈ ಕಾರಣದಿಂದಾಗಿಯೇ ನ್ಯಾಟೋ ದೇಶಗಳು ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಆಶಯಗಳನ್ನು ಧಿಕ್ಕರಿಸುವುದು ಸಾಧ್ಯವಿಲ್ಲ. ಜೊತೆಗೆ, ಯುರೋಪಿಯನ್ ಒಕ್ಕೂಟದ ಸದಸ್ಯರಾಗಿರುವ ಹೆಚ್ಚಿನ ಯುರೋಪಿನ ನ್ಯಾಟೋ ಸದಸ್ಯ ದೇಶಗಳು ತಮ್ಮ ವಿತ್ತೀಯ ಕೊರತೆಯನ್ನು ತಮ್ಮ ಜಿಡಿಪಿಯ ಶೇ. 3ಕ್ಕಿಂತ ಮೇಲೆ ಹೆಚ್ಚಿಸದಂತೆ ಶಾಸನಬದ್ಧವಾಗಿ ನಿರ್ಬಂಧಿಸಲ್ಪಟ್ಟಿವೆ. ಇದು ಅವುಗಳ ವಿತ್ತೀಯ ಕೊರತೆಯ ಪ್ರಸ್ತುತ ಮಟ್ಟವೂ ಹೌದು. ಶ್ರೀಮಂತರ ಮೇಲೆ ತೆರಿಗೆ ವಿಧಿಸುವುದನ್ನು ಹಣಕಾಸು ಬಂಡವಾಳದ ಆಶಯಗಳಿಗೆ

ಪುಟ 7ಕ್ಕೆ

‘ಅಕ್ರಮ ಬಾಂಗ್ಲಾದೇಶಿ ವಲಸಿಗರನ್ನು ಗುರುತಿಸುವ’ ಹೆಸರಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ, ಕಿರುಕುಳ ಮತ್ತು ಸುಲಿಗೆ

ಗೃಹಮಂತ್ರಿ ಅಮಿತ್ ಷಾರಿಗೆ ಬೃಂದಾ ಕಾರಟ್ ಪತ್ರ

ಗೃಹ ಸಚಿವಾಲಯದ ನಿರ್ದೇಶನದ ಅಡಿಯಲ್ಲಿ ದಿಲ್ಲಿ ಪೊಲೀಸರು ಮತ್ತು ಇತರ ಹಲವಾರು ಸಂಸ್ಥೆಗಳು "ಅಕ್ರಮ ಬಾಂಗ್ಲಾದೇಶಿ ವಲಸಿಗರನ್ನು ಗುರುತಿಸು"ವಲ್ಲಿ ನಡೆಯುತ್ತಿರುವ ಪ್ರಕ್ರಿಯೆಯಲ್ಲಿ, ಬಂಗಾಳಿ ಮಾತನಾಡುತ್ತಾರೆ ಎಂಬ ಕಾರಣಕ್ಕೆ ಭಾರತದ ನಿಜವಾದ ನಾಗರಿಕರಿಗೆ ಕಿರುಕುಳ ನೀಡುವ ಬಗ್ಗೆ ಹಲವಾರು ದೂರುಗಳು ಬಂದಿವೆ. ಈ ಹಿನ್ನೆಲೆಯಲ್ಲಿ, ಜುಲೈ 10, 2025ರಂದು ಮಾಜಿ ರಾಜ್ಯಸಭಾ ಸದಸ್ಯೆ ಮತ್ತು ಸಿಪಿಐ(ಎಂ)ನ ಹಿರಿಯ ಮುಖಂಡರಾಗಿರುವ ಬೃಂದಾ ಕಾರಟ್ ಅವರು, ದಿಲ್ಲಿಯ ಸಿಪಿಐ(ಎಂ) ನಾಯಕರಾದ ಸಿದ್ದೇಶ್ವರ ಶುಕ್ಲಾ ಮತ್ತು ಫರೀದಾ ಬೀಬಿ ಅವರೊಂದಿಗೆ ನಗರದ ಬವಾನಾ ಜೆಜೆ ಕಾಲೋನಿಗೆ ಭೇಟಿ ನೀಡಿ ಹಲವಾರು ದೂರುದಾರರನ್ನು ಭೇಟಿಯಾದರು. ಅಲ್ಲಿ ಕನಿಷ್ಠ ಮಾನವ ಹಕ್ಕುಗಳ ಉಲ್ಲಂಘನೆ, ಕಿರುಕುಳ ಮತ್ತು ಕೆಲವು ಸಂದರ್ಭಗಳಲ್ಲಿ ಸುಲಿಗೆಯೆಂದೇ ಹೇಳಬಹುದಾದ ಭ್ರಷ್ಟಾಚಾರವನ್ನು ಕಂಡು ಈ ಕುರಿತು ಅವರು ಮತ್ತು ಸಿಪಿಐ(ಎಂ)ನ ದಿಲ್ಲಿ ರಾಜ್ಯ ಸಮಿತಿಯ ಕಾರ್ಯದರ್ಶಿ ಅನುರಾಗ್ ಸಕ್ಸೇನಾ ಕೇಂದ್ರ ಗೃಹ ಸಚಿವ ಅಮಿತ್ ಷಾರವರಿಗೆ ಪತ್ರ ಬರೆದು ಆಘಾತವನ್ನು ವ್ಯಕ್ತಪಡಿಸಿದ್ದಾರೆ. ಈ ಪತ್ರದಲ್ಲಿ ಅವರು ಉಲ್ಲೇಖಿಸಿರುವ ಉದಾಹರಣೆಗಳು ಹೀಗಿವೆ:

ಜಾರ್ಖಂಡ್‌ನ ಗೊಡ್ಡಾ ಜಿಲ್ಲೆಯ ಮಹಮ್ಮದ್ ನಿಜಾಮುದ್ದೀನ್ ಹಲವಾರು ದಶಕಗಳ ಹಿಂದೆ ದಿಲ್ಲಿಗೆ ವಲಸೆ ಬಂದಿರುವವರು. ಅವರು ಮತ್ತು ಅವರ ಪತ್ನಿ ಇಬ್ಬರೂ ಜಾರ್ಖಂಡ್‌ನಲ್ಲಿ ಕುಟುಂಬ ಸಂಪರ್ಕ ಹೊಂದಿದ್ದಾರೆ. ಅವರಿಗೆ 2004ರಲ್ಲಿ ಡಿಡಿಎ ಯಿಂದ ಬವಾನ ಜೆಜೆ ಕಾಲೋನಿಯಲ್ಲಿ ಒಂದು ನಿವೇಶನವನ್ನು ನೀಡಲಾಯಿತು. ಈಗ ಅವರು ಅಲ್ಲಿ ವಾಸಿಸುತ್ತಿದ್ದಾರೆ. ಜುಲೈ 5ರಂದು, ಸ್ಥಳೀಯ ಠಾಣೆಯ ಪೊಲೀಸ್ ಸಿಬ್ಬಂದಿಯ ತಂಡವು ಅವರ ಮನೆಗೆ ಹೋಗಿ, ಬಾಂಗ್ಲಾದೇಶಿಯೊಬ್ಬರಿಗೆ ಅಕ್ರಮ ದಾಖಲೆಗಳನ್ನು ಪಡೆಯಲು ಸಹಾಯ ಮಾಡಿದ್ದೀರಿ ಎಂದು ಆರೋಪಿಸಿದರು. ಆತ ಬಾಡಿಗೆದಾರನಾಗಿ ಮೂರು ವರ್ಷಗಳ ಹಿಂದೆ ಅಲ್ಲಿ ವಾಸಿಸುತ್ತಿದ್ದರು, ಆದರೆ ಈಗ ಆತನೊಂದಿಗೆ ಅವರಿಗೆ ಯಾವುದೇ ಸಂಪರ್ಕವಿಲ್ಲ ಮತ್ತು ಆ ವ್ಯಕ್ತಿ ಎಲ್ಲಿದ್ದಾನೆಂಬ ಬಗ್ಗೆ ಏನೂ ಗೊತ್ತಿಲ್ಲ ಎಂದು ಅವರು ಪೊಲೀಸರಿಗೆ ವಿವರಿಸಿದರು. ಜುಲೈ 6 ರಂದು, ಪೊಲೀಸರು ಬೆಳಿಗ್ಗೆ 6 ಗಂಟೆ ಸುಮಾರಿಗೆ ಮತ್ತೆ ಬಂದು ನಿಜಾಮುದ್ದೀನ್‌ರಿಗೆ ಕೈಕೋಳ ಹಾಕಿದರು ಮತ್ತು ಅವರೊಬ್ಬ ಪಕ್ಕಾ ಅಪರಾಧಿ ಎಂಬಂತೆ ಸಾರ್ವಜನಿಕರ ಎದುರಲ್ಲೇ ಅಕ್ಷರಶಃ ಠಾಣೆಗೆ ಎಳೆದೊಯ್ದರು. ಈ ಬಾರಿ ಪೊಲೀಸರು ಅವರನ್ನು ಬಾಂಗ್ಲಾದೇಶಿ ಎಂದು ಆರೋಪಿಸಿದರು. ಅವರ 28 ವರ್ಷದ ಮಗಳು ಶಬ್ನಮ್, ಜಾರ್ಖಂಡ್‌ನಲ್ಲಿ ತಮ್ಮ ಕುಟುಂಬ ಹೊಂದಿರುವ ಆಸ್ತಿ ಸೇರಿದಂತೆ ಎಲ್ಲಾ ದಾಖಲೆಗಳನ್ನು ತೋರಿಸಿದರು. ಆದಾಗ್ಯೂ, ಪೊಲೀಸರು ನಿಜಾಮುದ್ದೀನ್ ಅವರನ್ನು ಅಶ್ಲೀಲ ಭಾಷೆಯಲ್ಲಿ ನಿಂದಿಸುತ್ತಾ ಥಳಿಸಿ, ‘ಬಾಂಗ್ಲಾದೇಶಿಯೊಬ್ಬರಿಗೆ ಆಶ್ರಯ ನೀಡಿದ್ದೇನೆ ಎಂದು ಒಪ್ಪಿಕೊಳ್ಳಬೇಕು, ಇಲ್ಲದಿದ್ದರೆ ನಿಮ್ಮನ್ನು ಬಾಂಗ್ಲಾದೇಶಿ ಎಂದು ಘೋಷಿಸಲಾಗುವುದು’ ಎಂದು ಹೇಳಿದರು. ಪೊಲೀಸರು 11 ವರ್ಷ ಮತ್ತು 8 ವರ್ಷದ ಮಗು ಸೇರಿದಂತೆ ಅವರ ಇಡೀ ಕುಟುಂಬವನ್ನು ಕೆಟ್ಟದಾಗಿ ಬಯ್ಯುತ್ತಲೇ ಬಂಧಿಸಿ ಒಯ್ದರು. ಅವರನ್ನು ಬೆಳಿಗ್ಗೆ ಒಂದು ಗಂಟೆಗೆ ಬಿಡುಗಡೆ ಮಾಡಲಾಯಿತು. ಮತ್ತೆ ಮರುದಿನ ಜುಲೈ 8 ರಂದು ಬೆಳಿಗ್ಗೆ 6 ಗಂಟೆಗೆ ಅವರನ್ನು ವಿಜಯ್ ವಿಹಾರ್ ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಇಲ್ಲಿಯೂ ಅವರಿಗೆ ಕಿರುಕುಳ ನೀಡಲಾಯಿತು. ಕುಟುಂಬದ ಯುವತಿಯರ ಛಾಯಾಚಿತ್ರಗಳನ್ನು ಒಳಗೊಂಡಂತೆ ಅವರ ಛಾಯಾಚಿತ್ರಗಳನ್ನು ಪದೇ ಪದೇ ತೆಗೆದುಕೊಳ್ಳಲಾಯಿತು. ಈ ಅವಧಿಯಲ್ಲಿ ಯಾವುದೇ ಹಿರಿಯ ಅಧಿಕಾರಿ ಇರಲಿಲ್ಲ ಮತ್ತು SHO ಕಚೇರಿಯ ಯಾರಾದರೂ ಸೇರಿದಂತೆ ಕೆಲವು ಕಿರಿಯ ಸಿಬ್ಬಂದಿ ವಿಚಾರಣೆ ನಡೆಸುತ್ತಿದ್ದರು, ಬೆದರಿಕೆ ಹಾಕುತ್ತಿದ್ದರು, ನಿಂದಿಸುತ್ತಿದ್ದರು ಮತ್ತು ಹೆದರಿಸುತ್ತಿದ್ದರು ಎಂಬುದನ್ನು ಗಮನಿಸಬೇಕು. ಸ್ವಲ್ಪ ಸಮಯದ ನಂತರ ಅವರನ್ನು ಬಿಡುಗಡೆ ಮಾಡಲಾಯಿತು. ಆದರೆ ಮುಂದಿನ ಕೆಲವು ದಿನಗಳಲ್ಲಿ, ವಿವಿಧ ಠಾಣೆಗಳಿಂದ ಪೊಲೀಸರ ತಂಡಗಳು ಅವರ ದಾಖಲೆಗಳನ್ನು ನೋಡಲು ಅವರ ಮನೆಗೆ ಹೋಗುತ್ತಿವೆ. ಅವರ ಎಲ್ಲಾ ಛಾಯಾಚಿತ್ರಗಳನ್ನು ಪೊಲೀಸ್ ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ, ಆದ್ದರಿಂದ



ಅವರು ಅಂತಹ ಪೊಲೀಸ್ ವಿಚಾರಣೆಗಳನ್ನು ನಿರೀಕ್ಷಿಸಬೇಕಾಗುತ್ತದೆ ಎಂದು ಅವರಿಗೆ ತಿಳಿಸಲಾಯಿತು.

ಈ ಪ್ರಕರಣವು ಭಾರತದ ಕಾನೂನು ಪಾಲಿಸುವ ನಾಗರಿಕರಿಗೆ ಕಿರುಕುಳ ನೀಡುವ ಪೊಲೀಸರ ಕಾನೂನುಬಾಹಿರ ವರ್ತನೆಗೆ ಸ್ಪಷ್ಟ ಉದಾಹರಣೆಯಾಗಿದೆ. ಪೊಲೀಸರ ಪದೇ ಪದೇ ಭೇಟಿಗಳಿಂದ ಈ ಕುಟುಂಬದ, ವಿಶೇಷವಾಗಿ ಯುವತಿಯರ ಪ್ರತಿಷ್ಠೆ ಛಿದ್ರಗೊಂಡಿದೆ. ಈ ಕುಟುಂಬದ ಸದಸ್ಯರು ಯಾವುದೇ ಅಪರಾಧ ಮಾಡದ ನಿಜವಾದ ಭಾರತೀಯ ನಾಗರಿಕರಾಗಿರುವುದರಿಂದ, ಅಂತಹ ಎಲ್ಲಾ ಫೋಟೋಗಳನ್ನು ಪೊಲೀಸ್ ದಾಖಲೆಗಳಿಂದ ಅಳಿಸಬೇಕು. ಕಸ್ಟಡಿಯಲ್ಲಿ ನಿಜಾಮುದ್ದೀನ್ ಅವರನ್ನು ಹೊಡೆದವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು ಪತ್ರದಲ್ಲಿ ಆಗ್ರಹಿಸಲಾಗಿದೆ.

ನೆಲಕ್ಕೆ ತಳ್ಳಿ ಕಿವಿಗೆ ಬೂಟುಗಳಿಂದ ಒದ್ದರು

ಬವಾನ ಸಿ ಬ್ಲಾಕ್‌ನ ಗುಡಿಸಲು ವಸತಿ ಪ್ರದೇಶದಲ್ಲಿ ವಾಸಿಸುವ ಸಜನ್ ಸೌದಾಗರ್ ದಾಸ್ ಅವರನ್ನು ಮೇ 6 ರಂದು ಪೊಲೀಸರು ಬಂಧಿಸಿದರು. ಅವರನ್ನು ಪ್ರೀತಂಪುರ ಠಾಣೆಗೆ ಕರೆದೊಯ್ಯಲಾಯಿತು ಮತ್ತು ಅಲ್ಲಿ ಇಬ್ಬರು ಪೊಲೀಸರು ಅವರನ್ನು ತೀವ್ರವಾಗಿ ಥಳಿಸಿದರು, ಅವರು ತಾವು ಬಾಂಗ್ಲಾದೇಶಿ ಎಂದು ಒಪ್ಪಿಕೊಳ್ಳಬೇಕೆಂದು ಹೇಳಿದರು. ಅವರು ಬೇಡಿಕೊಂಡಾಗ, ಆತನಿಗೆ ಲಾಠಿಗಳಿಂದ ಹೊಡೆದರು, ನೆಲಕ್ಕೆ ತಳ್ಳಿ ಮತ್ತು ಅವರ ಕಿವಿಗೆ ಬೂಟುಗಳಿಂದ ಒದ್ದರು. ಒಂದು ಕಿವಿಗೆ ತೀವ್ರ ಗಾಯವಾಗಿತ್ತು. ಮತ್ತೊಬ್ಬ ಪೊಲೀಸ್ ಅಧಿಕಾರಿ ಆತನ ಮೊಬೈಲ್ ಫೋನ್ ಪರಿಶೀಲಿಸಿ, "ತಪ್ಪಾಗಿ" ಆತನನ್ನು ಠಾಣೆಗೆ ತರಲಾಗಿದೆ ಎಂದು ಹೇಳಿದರು. ನಂತರ ಆತ ಬಂಗಾಳಿ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ ಎಂಬ "ಮಾಹಿತಿ" ಸಿಕ್ಕಿದೆ ಎಂದು ಹೇಳಿ ಮತ್ತೆ ಒಯ್ದರು. ಇದು ಮಾನವ ಹಕ್ಕುಗಳ ಉಲ್ಲಂಘನೆಯ ಮತ್ತೊಂದು ಸ್ಪಷ್ಟ ಪ್ರಕರಣವಾಗಿದೆ.

ಮೂವರು ವಿಧವೆಯರನ್ನು 3 ದಿನ ಠಾಣೆಯಲ್ಲಿ ಇರಿಸಲಾಗಿತ್ತು

60 ರಿಂದ 70 ವರ್ಷ ವಯಸ್ಸಿನ ಮೂವರು ವಯಸ್ಸಾದ ಮಹಿಳೆಯರನ್ನು ಅವರು ಮಕ್ಕಳಾಗಿದ್ದಾಗ, ದಶಕಗಳ ಹಿಂದೆ ಅವರ ತಂದೆ–ತಾಯಿ ಬಾಂಗ್ಲಾದೇಶದಿಂದ ಭಾರತಕ್ಕೆ ಕರೆತಂದಿದ್ದರು. ತಂದೆ–ತಾಯಿ ವರ್ಷಗಳ ಹಿಂದೆ ನಿಧನರಾದರು. ಈ ಮಹಿಳೆಯರು ಭಾರತದಲ್ಲಿ ವಿವಾಹವಾದರು. ಅವರ ಮಕ್ಕಳು ಇಲ್ಲಿಯೇ ಹುಟ್ಟಿ ಶಿಕ್ಷಣ ಪಡೆದಿದ್ದಾರೆ ಮತ್ತು ಅವರ ಸ್ವಂತ ಕುಟುಂಬಗಳನ್ನು ಹೊಂದಿದ್ದಾರೆ. ಈ ಮೂವರೂ ವಿಧವೆಯರು. ಅವರನ್ನು ಪೊಲೀಸರು ಕರೆದುಕೊಂಡು ಹೋಗಿ ಸೆಕ್ಟರ್ 5 ರಲ್ಲಿರುವ ಪೊಲೀಸ್ ಚೌಕಿಗೆ ಕರೆದೊಯ್ದರು. ಅಲ್ಲಿ ಅವರನ್ನು ಮೂರು ಹಗಲು ರಾತ್ರಿ ಇರಿಸಲಾಗಿತ್ತು, ಅವರ ಎಲ್ಲಾ ದಾಖಲೆಗಳನ್ನು ಅವರಿಂದ ಕಸಿದುಕೊಳ್ಳಲಾಯಿತು. ಅವರನ್ನು ಆರ್‌ಕೆ ಪುರಂನಲ್ಲಿರುವ ಅಧಿಕಾರಿಯ ಮುಂದೆ ಹಾಜರುಪಡಿಸಲಾಯಿತು. ಅವರ ಬಯೋಮೆಟ್ರಿಕ್‌ಗಳನ್ನು ತೆಗೆದುಕೊಂಡು, ನಂತರ ಅವರನ್ನು ಅವರ ಗುಡಿಸಲುಗಳಿಗೆ ತಂದು ಬಿಡಲಾಯಿತು. ಇಲ್ಲಿಯೂ ಸಹ ವಿವಿಧ ಠಾಣೆಗಳ ಪೊಲೀಸರು ಬಂದು ಹೋಗುತ್ತಿದ್ದಾರೆ, ಪ್ರಶ್ನಿಸುತ್ತಿದ್ದಾರೆ. ಅವರು ದಶಕಗಳಿಂದ ಅಲ್ಲಿದ್ದಾರೆ. ಅವರ ಮಕ್ಕಳು ಭಾರತದಲ್ಲೇ ಹುಟ್ಟಿದ ನಾಗರಿಕರು. ಬಾಂಗ್ಲಾದೇಶದಲ್ಲಿ ಅವರ ಕುಟುಂಬದವರು ಯಾರೂ ಇಲ್ಲ. ಪ್ರತಿದಿನವೂ ಅವರು ತಮ್ಮನ್ನು ಬಾಂಗ್ಲಾದೇಶಕ್ಕೆ ಬಲವಂತದಿಂದ ಓಡಿಸಲಾಗುತ್ತದೆಯೇ ಎಂಬ ಭೀತಿಯಲ್ಲಿ ಬದುಕುತ್ತಿದ್ದಾರೆ. ಈ ಬಡ ಮಹಿಳೆಯರೊಂದಿಗೆ ಇಂತಹ ವರ್ತನೆ ಅಮಾನವೀಯ ಮತ್ತು ಅನ್ಯಾಯ.

ಬಂಗಾಳಿಗಳ ಎಲ್ಲಾ ಗುರುತಿನ ಚೀಟಿಗಳನ್ನು ಕಿತ್ತುಕೊಂಡರು

ದಿಲ್ಲಿಯ ಇತರ ಸ್ಥಳಗಳಲ್ಲೂ ಇದೇ ರೀತಿಯ ಪ್ರಕರಣಗಳು ನಡೆದಿವೆ. ಉದಾಹರಣೆಗೆ ಮೇ ತಿಂಗಳಲ್ಲಿ, ಚಾಣಕ್ಯಪುರಿಯ ವಿವೇಕಾನಂದ ಶಿಬಿರದಲ್ಲಿ, ಆ ಪ್ರದೇಶದಲ್ಲಿ ವಾಸಿಸುವ ಬಂಗಾಳಿಗಳ ಎಲ್ಲಾ ಗುರುತಿನ ಚೀಟಿಗಳನ್ನು ಪೊಲೀಸರು ಕಿತ್ತುಕೊಂಡರು. ದಾಖಲೆಗಳನ್ನು ಹಿಂದಿರುಗಿಸಲು ಪೊಲೀಸ್ ಸಿಬ್ಬಂದಿ ಹಣ ಕೇಳುತ್ತಿದ್ದಾರೆ ಎಂದು ವರದಿಯಾಗಿದೆ. ಕೆಲವು ಜವಾಬ್ದಾರಿಯುತ ಸಾಮಾಜಿಕ ಕಾರ್ಯಕರ್ತರು ಈ ಬಗ್ಗೆ ವಿಚಾರಿಸಿ ಪೊಲೀಸರನ್ನು ಭೇಟಿಯಾದಾಗ, ಹಿರಿಯ ಅಧಿಕಾರಿ ಅವರು ಅಂತಹ ಯಾವುದೇ ಆದೇಶಗಳನ್ನು ನೀಡಿಲ್ಲ ಎಂದು ಹೇಳಿದರು. ನಂತರ, ದಾಖಲೆಗಳನ್ನು ಹಿಂತಿರುಗಿಸಲಾಯಿತು.

ಪಶ್ಚಿಮ ಬಂಗಾಳದ ಪುರಾವೆಗಳಿದ್ದರೂ...

ಇತರ ಎರಡು ಸಂದರ್ಭಗಳಲ್ಲಿ, ಕಮಲಾನಗರ ಮತ್ತು ಮಾಳವೀಯ ನಗರದ ಅಪರಾಧ ವಿಭಾಗದ ಸಿಬ್ಬಂದಿ, ಬಂಗಾಳಿ ಮುಸ್ಲಿಮರಾದ ಇಬ್ಬರು ಭಾರತೀಯ ನಾಗರಿಕರನ್ನು ವಶಕ್ಕೆ ತೆಗೆದುಕೊಂಡು ಕಸ್ಟಡಿಯಲ್ಲಿ ಇಟ್ಟರು. ಅವರ ಬಳಿ ಪಶ್ಚಿಮ ಬಂಗಾಳದಲ್ಲಿ ಅವರ ಜನನ ಮತ್ತು ಮನೆಯ ಪುರಾವೆಗಳಿದ್ದರೂ ಅವರಿಗೆ ಕಿರುಕುಳ ನೀಡಲಾಯಿತು. ಇದು ಜೂನ್ 24ರಂದು ಸಂಭವಿಸಿತು.

ಜೂನ್ 26ರಂದು, ಆಘಾತಕಾರಿ ಘಟನೆಯೊಂದರಲ್ಲಿ, ದೆಹಲಿಯಲ್ಲಿ ವಾಸಿಸುತ್ತಿರುವ ಮತ್ತು ಕೆಲಸ ಮಾಡುತ್ತಿರುವ ಎಂಟು ಬಂಗಾಳಿ ವಲಸೆ ಕಾರ್ಮಿಕರನ್ನು ಪಶ್ಚಿಮ ಬಂಗಾಳದ ಬೀರ್ಭೂಮ್ ಜಿಲ್ಲೆಯ ಪೈಕಾ ಗ್ರಾಮದಲ್ಲಿ ಅವರ ನಿವಾಸದ ಪುರಾವೆಗಳಿದ್ದರೂ ಬಲವಂತವಾಗಿ ಬಾಂಗ್ಲಾದೇಶಕ್ಕೆ ಕಳುಹಿಸಲಾಯಿತು. ಅವರಲ್ಲಿ ಒಬ್ಬ ಮಹಿಳೆ ಮತ್ತು 5 ವರ್ಷದ ಮಗು ಕೂಡ ಇದ್ದರು. ಬಾಂಗ್ಲಾದೇಶದಲ್ಲಿ ಅವರ ಸ್ಥಿತಿ ಏನಾಗಬಹುದು? ಈಗ ಪೈಕಾ ಗ್ರಾಮದಲ್ಲಿರುವ ಅವರ ಕುಟುಂಬದ ಸದಸ್ಯರು ನ್ಯಾಯಕ್ಕಾಗಿ ನ್ಯಾಯಾಲಯಗಳನ್ನು ಸಂಪರ್ಕಿಸುವ ದುಬಾರಿ ಮತ್ತು ಕಷ್ಟಕರವಾದ ಕೆಲಸವನ್ನು ಮಾಡಬೇಕಾಗಿ ಬಂದಿದೆ.

“ಭಾರತದ ರಾಜಧಾನಿಯಲ್ಲಿ ಬಾಂಗ್ಲಾದೇಶದಿಂದ ಬಂದ ಅಕ್ರಮ ವಲಸಿಗರನ್ನು ಗುರುತಿಸುವ ಪ್ರಕ್ರಿಯೆಯು ಕನಿಷ್ಠ ಮಾನವ ಹಕ್ಕುಗಳನ್ನೂ ಉಲ್ಲಂಘಿಸುವ ಕೃತ್ಯಗಳಿಗೆ ಒಂದು ಉದಾಹರಣೆಯಾಗಿದೆ. ಈ ಪ್ರಕ್ರಿಯೆಯಲ್ಲಿ, ನಿಜವಾದ ಭಾರತೀಯ ನಾಗರಿಕರನ್ನು ಭಾಷೆ ಮತ್ತು ಧರ್ಮದ ಆಧಾರದ ಮೇಲೆ ಗುರಿಯಾಗಿಸಲಾಗುತ್ತಿದೆ. ಭಾರತದಲ್ಲಿ ಈಗ ಬಂಗಾಳಿ ಮಾತನಾಡುವುದು ಅಪರಾಧವೇ? ಇದಲ್ಲದೆ, ಭಾರತದ ಎಲ್ಲಾ ಬಂಗಾಳಿ ಮಾತನಾಡುವ ಮುಸ್ಲಿಂ ನಾಗರಿಕರನ್ನು ಅಪರಾಧಿಗಳು ಮತ್ತು ಅಕ್ರಮ ವಲಸಿಗರೆಂದು ಪರಿಗಣಿಸಬೇಕೇ? ಪಶ್ಚಿಮ ಬಂಗಾಳದ ಜನಸಂಖ್ಯೆಯ ಶೇಕಡಾ 26ರಷ್ಟು ಜನರು ಬಂಗಾಳಿ ಮಾತನಾಡುವ ಮುಸ್ಲಿಮರು ಎಂದು ನಾವು ನಿಮಗೆ ನೆನಪಿಸಲು ಬಯಸುತ್ತೇವೆ. ಅಲ್ಲದೆ, ಅಕ್ರಮ ವಲಸಿಗರನ್ನು ಗಡೀಪಾರು ಮಾಡಲು ಅಂತರರಾಷ್ಟ್ರೀಯ ಮಾನದಂಡಗಳಿವೆ. ದೆಹಲಿಯಲ್ಲಿ ಪ್ರಸ್ತುತ ಗುರುತಿಸುವ ವಿಧಾನಗಳು ಅಂತಹ ಎಲ್ಲಾ ಮಾನದಂಡಗಳನ್ನು ಉಲ್ಲಂಘಿಸುತ್ತವೆ” ಎಂದು ತಮ್ಮ ಪತ್ರದಲ್ಲಿ ಬೃಂದಾ ಕಾರಟ್ ಮತ್ತು ಅನುರಾಗ್ ಸಕ್ಸೇನಾ ಹೇಳಿದ್ದಾರೆ.

ಗೃಹಮಂತ್ರಿಗಳು ಈ ಪ್ರಶ್ನೆಗಳನ್ನು ಪರಿಗಣಿಸುತ್ತಾರೆ ಮತ್ತು ಮಾನವ ಹಕ್ಕುಗಳನ್ನು, ಕಾನೂನು ಜಾರಿ ಸಂಸ್ಥೆಗಳ ಮಾನವೀಯ ನಡವಳಿಕೆಯನ್ನು ಮರುಸ್ಥಾಪಿಸಲು, ಮತ್ತು ಸಂತ್ರಸ್ತರಿಗೆ ಆಗಿರುವ ನಷ್ಟಗಳಿಗೆ ಸಮರ್ಪಕ ಪರಿಹಾರ ನೀಡಲು ಮಧ್ಯಪ್ರವೇಶಿಸುತ್ತಾರೆ ಎಂದು ಅವರು ಈ ಪತ್ರದಲ್ಲಿ ಆಶಿಸಿದ್ದಾರೆ.

ಕೆಲಸದ ಸಮಯದ ಮೇಲಿನ ವರ್ಗ ಹೋರಾಟ!

"ವಿಶ್ವದಾದ್ಯಂತ ಕೆಲಸದ ಸಮಯ ಮತ್ತು ಕೆಲಸ–ಜೀವನ ಸಮತೋಲನ" ಎಂಬ ಶೀರ್ಷಿಕೆಯ ಕೆಲಸದ ಸಮಯದ ಕುರಿತು ILO ಮೊದಲ ಜಾಗತಿಕ ವರದಿಯನ್ನು ಜನವರಿ 6, 2023 ರಂದು ಬಿಡುಗಡೆ ಮಾಡಿತು. ಈ ವರದಿಯ ಪ್ರಕಾರ, ಉದ್ಯೋಗಿಗಳಲ್ಲಿ ಆರೋಗ್ಯಕರ ಕೆಲಸ–ಜೀವನ ಸಮತೋಲನವು ಕಾರ್ಮಿಕರು ಮತ್ತು ಉದ್ಯೋಗದಾತರಿಬ್ಬರಿಗೂ ಪ್ರಯೋಜನಕಾರಿಯಾಗಿದೆ ಮತ್ತು ಉದ್ಯಮಗಳಿಗೆ ಹಲವಾರು ಸಕಾರಾತ್ಮಕ ಪರಿಣಾಮಗಳನ್ನು ಒದಗಿಸುತ್ತದೆ. ಕೆಲಸ–ಜೀವನ ಸಮತೋಲನ ನೀತಿಗಳನ್ನು ಜಾರಿಗೆ ತರುವ ಕಂಪನಿಗಳು ಪ್ರಸ್ತುತ ಉದ್ಯೋಗಿಗಳ ಹೆಚ್ಚಿದ ಧಾರಣ, ಸುಧಾರಿತ ನೇಮಕಾತಿ, ಕಡಿಮೆ ಗೈರುಹಾಜರಿ ದರಗಳು ಮತ್ತು ಹೆಚ್ಚಿನ ಉತ್ಪಾದಕತೆಯಿಂದ ಪ್ರಯೋಜನ ಪಡೆಯುತ್ತವೆ. ಆದರೆ, ಭಾರತೀಯ ಬಂಡವಾಳಶಾಹಿ ಉದ್ಯೋಗದಾತರು ಕೆಲಸದ ಸಮಯದ ಮೇಲಿನ ಶಾಸನಬದ್ಧ ಮಿತಿಗಳ ಕತ್ತು ಹಿಸುಕುವ ಕಾರ್ಯಕ್ಕೆ ಧೈರ್ಯದಿಂದ ಕೈಹಾಕಿದ್ದಾರೆ.

–ಆರ್.ಕರುಮಲೈಯನ್
(ಅನು: ನಾಗರಾಜ ನಂಜುಂಡಯ್ಯ)

ಆಂಧ್ರಪ್ರದೇಶದಲ್ಲಿ, ತೆಲುಗು ದೇಶಂ ಪಕ್ಷ (ಟಿಡಿಪಿ) ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (ಎನ್‌ಡಿಎ) ಇತ್ತೀಚೆಗೆ ಎಲ್ಲಾ ಕಾರ್ಖಾನೆಗಳು ಮತ್ತು ವಾಣಿಜ್ಯ ಸಂಸ್ಥೆಗಳಿಗೆ ಕೆಲಸದ ಸಮಯವನ್ನು ದಿನಕ್ಕೆ 9 ಗಂಟೆಗಳಿಂದ 10 ಗಂಟೆಗಳಿಗೆ ಹೆಚ್ಚಿಸಲು ನಿರ್ಧರಿಸಿದೆ. ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಸಚಿವ ಪಾರ್ಥಸಾರಥಿ ಅವರು ಕಾರ್ಮಿಕ ಕಾನೂನನ್ನು ಅದಕ್ಕೆ ಅನುಗುಣವಾಗಿ ತಿದ್ದುಪಡಿ ಮಾಡಲಾಗುವುದು ಎಂದು ಘೋಷಿಸಿದ್ದಾರೆ. ಕಾರ್ಮಿಕ ಕಾನೂನುಗಳ ಕುರಿತಾದ ಸಂಪುಟದ ನಿರ್ಧಾರಗಳನ್ನು ವಿವರಿಸುತ್ತಾ, ದಿನಕ್ಕೆ ಗರಿಷ್ಠ 9 ಗಂಟೆಗಳ ಕೆಲಸವನ್ನು ಅನುಮತಿಸುವ ಸಂಬಂಧಿತ ಕಾನೂನು ವಿಭಾಗಗಳನ್ನು ಈಗ ದಿನಕ್ಕೆ 10 ಗಂಟೆಗಳಿಗೆ ಹೆಚ್ಚಿಸಲಾಗಿದೆ ಎಂದು ಅವರು ಹೇಳಿದ್ದಾರೆ. (ಕಾರ್ಖಾನೆಗಳ ಕಾಯ್ದೆಯ) ಸೆಕ್ಷನ್ 55ರ ಅಡಿಯಲ್ಲಿ 5 ಗಂಟೆಗಳ ಕೆಲಸಕ್ಕೆ 1 ಗಂಟೆ ವಿಶ್ರಾಂತಿ ಮತ್ತು ಮಧ್ಯಂತರವಿತ್ತು. ಈಗ ಅದನ್ನು 6 ಗಂಟೆಗಳಿಗೆ ಬದಲಾಯಿಸಲಾಗಿದೆ.

ಅದೇ ರೀತಿ, ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ಕಾಯ್ದೆ, 2023 ಅನ್ನು ಫೆಬ್ರವರಿ 22, 2023ರಂದು ಕರ್ನಾಟಕ ವಿಧಾನಸಭೆಯಲ್ಲಿ ಪರಿಚಯಿಸಲಾಯಿತು. ಇದಕ್ಕೆ ಜುಲೈ 10, 2023ರಂದು ರಾಷ್ಟ್ರಪತಿಗಳ ಒಪ್ಪಿಗೆ ಸಿಕ್ಕಿತು ಮತ್ತು ಆಗಸ್ಟ್ 7, 2023ರಂದು ಅದರ ಅನುಷ್ಠಾನಕ್ಕೆ ಅಧಿಸೂಚನೆ ಹೊರಡಿಸಲಾಯಿತು. ಇದು ಕರ್ನಾಟಕಕ್ಕೆ ಅನ್ವಯಿಸುತ್ತದೆ. ಕಾರ್ಖಾನೆಗಳ ಕಾಯ್ದೆ–1948 (ಕೇಂದ್ರ ಕಾಯ್ದೆ)ಯನ್ನು ಕೂಡ ತಿದ್ದುಪಡಿ ಮಾಡಲಾಗಿದೆ. ಅದರ ಪ್ರಕಾರ, ಕೆಲವು ವರ್ಗದ ಕಾರ್ಖಾನೆಗಳಿಗೆ ದೈನಂದಿನ ಕೆಲಸದ ಸಮಯವನ್ನು ವಿಶ್ರಾಂತಿ ಮಧ್ಯಂತರಗಳನ್ನು ಒಳಗೊಂಡಂತೆ 12 ಗಂಟೆಗಳವರೆಗೆ ವಿಸ್ತರಿಸಬಹುದು.

ಅದೇ ರೀತಿ, ಆಂಧ್ರಪ್ರದೇಶ ಸರ್ಕಾರವು ಅಧಿಸೂಚನೆಯ ಮೂಲಕ, ಕೆಲವು ಕಾರ್ಖಾನೆಗಳ ಕಾರ್ಮಿಕರ ಗುಂಪುಗಳಿಗೆ ವಿರಾಮವಿಲ್ಲದೆ ಕಾರ್ಮಿಕರ ನಿರಂತರ ಕೆಲಸದ ಸಮಯವನ್ನು 6 ಗಂಟೆಗಳವರೆಗೆ ವಿಸ್ತರಿಸಬಹುದು. ಇದು ಕೆಲಸದ ವೇಳಾಪಟ್ಟಿಗಳಲ್ಲಿ ನಮ್ಯತೆಯಿಂದ ಹೊಂದುಕೊಳ್ಳುವಿಕೆಗೆ ಅನುಮತಿಸುತ್ತದೆ. ಈ ತಿದ್ದುಪಡಿ ಕಾಯ್ದೆಯ ಮೂಲಕ ತ್ರೈಮಾಸಿಕ ಅಧಿಕಾರವಧಿ ಮಿತಿಯನ್ನು 145 ಗಂಟೆಗಳವರೆಗೆ ಹೆಚ್ಚಿಸಲಾಗಿದೆ.

ಕಾರ್ಖಾನೆಗಳ ಕಾಯ್ದೆ–1948 (ಕೇಂದ್ರ ಕಾಯ್ದೆ) ಯನ್ನು ಕೂಡ ತಿದ್ದುಪಡಿ ಮಾಡಲಾಗಿದೆ. ಅದರ ಪ್ರಕಾರ, ಕೆಲವು ವರ್ಗದ ಕಾರ್ಖಾನೆಗಳಿಗೆ ದೈನಂದಿನ ಕೆಲಸದ ಸಮಯವನ್ನು ವಿಶ್ರಾಂತಿ ಮಧ್ಯಂತರಗಳನ್ನು ಒಳಗೊಂಡಂತೆ 12 ಗಂಟೆಗಳವರೆಗೆ ವಿಸ್ತರಿಸಬಹುದು. ಇದರ ಮೂಲಕ, ಭಾರತೀಯ ಬಂಡವಾಳಶಾಹಿ ಉದ್ಯೋಗದಾತರು ಕೆಲಸದ ಸಮಯದ ಮೇಲಿನ ಶಾಸನಬದ್ಧ ಮಿತಿಗಳ ಕತ್ತು ಹಿಸುಕುವ ಕಾರ್ಯಕ್ಕೆ ಧೈರ್ಯದಿಂದ ಕೈಹಾಕಿದ್ದಾರೆ. ಇದಲ್ಲದೆ, ಅವರು ಕೆಲಸದ ಸಮಯದ ಮೇಲಿನ ರಾಷ್ಟ್ರೀಯ ಕಾನೂನುಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಲು ತೊಡಗಿದ್ದಾರೆ ಮತ್ತು ಪ್ರಾಂತೀಯ ಸರ್ಕಾರಗಳ ನೀತಿ ನಿಯಮಗಳು ಸೇರಿದಂತೆ ವಿವಿಧ ಸಾಧನಗಳ ಮೂಲಕ ಕೆಲಸದ ಸಮಯದ ಮೇಲಿನ ಈ ಮಿತಿಗಳನ್ನು ಕಿತ್ತುಹಾಕಲು ಅಂದರೆ, ಕೆಲಸದ ಸಮಯವನ್ನು ಹೆಚ್ಚುಮಾಡಲು ಪ್ರಯತ್ನಿಸಿದ್ದಾರೆ. ಏಕೆಂದರೆ "ಕಾರ್ಮಿಕ" ಎಂಬ ವಿಷಯ ನಮ್ಮ ಸಾಂವಿಧಾನಿಕ ವ್ಯವಸ್ಥೆಯಲ್ಲಿ ಸಮಕಾಲೀನ ಪಟ್ಟಿಯ ಅಡಿಯಲ್ಲಿ ಬರುತ್ತದೆ.



ಐಟಿ ಕಂಪನಿಗಳು ದಿನಕ್ಕೆ 12 ಗಂಟೆಗಳಿಗಿಂತ ಹೆಚ್ಚು!!

ಇದಲ್ಲದೆ, ಕರ್ನಾಟಕ ರಾಜ್ಯ ಸರ್ಕಾರವು 1961 ರ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆಗೆ ತಿದ್ದುಪಡಿ ತರಲು ಯೋಜನೆ ರೂಪಿಸಿದೆ. ಇದು ಪ್ರಸ್ತುತ ಕೆಲಸದ ಸಮಯವನ್ನು ದಿನಕ್ಕೆ 10 ಗಂಟೆಗಳವರೆಗೆ ವಿಸ್ತರಿಸುತ್ತದೆ. ಇದರಲ್ಲಿ ಹೆಚ್ಚುವರಿ ಸಮಯವೂ ಸೇರಿದೆ. ಪ್ರಸ್ತಾವಿತ ಕಾನೂನು ಐಟಿ, ಐಟಿಇಎಸ್ (ಮಾಹಿತಿ ತಂತ್ರಜ್ಞಾನ ಸಕ್ರಿಯಗೊಳಿಸಿದ ಸೇವೆಗಳು) ಮತ್ತು ಬಿಪಿಒ ಕಂಪನಿಗಳು ದಿನಕ್ಕೆ 12 ಗಂಟೆಗಳಿಗಿಂತ ಹೆಚ್ಚು ಕೆಲಸದ ಸಮಯವನ್ನು ವಿಸ್ತರಿಸಲು ಅನುವು ಮಾಡಿಕೊಡುತ್ತದೆ, ಜೊತೆಗೆ ಸತತ ಮೂರು ತಿಂಗಳುಗಳಲ್ಲಿ ಹೆಚ್ಚುವರಿ ಗಂಟೆಗಳು 125 ಮೀರಬಾರದು. ರಾಜ್ಯದ ಐಟಿ ಉದ್ಯೋಗಿಗಳಲ್ಲಿ ಅತಿದೊಡ್ಡ ಒಕ್ಕೂಟವಾದ ಕರ್ನಾಟಕ ರಾಜ್ಯ ಐಟಿ/ಐಟಿಇಎಸ್ ನೌಕರರ ಸಂಘ (ಕೆಐಟಿಯು) ನೇತೃತ್ವದ ಐಟಿ ಉದ್ಯೋಗಿಗಳು ನಡೆಸಿದ ವೀರೋಚಿತ ಪ್ರತಿರೋಧದ ನಂತರ, ಅದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಕೆಐಟಿಯು ತೀವ್ರ ಪ್ರತಿರೋಧದ ಹೊರತಾಗಿಯೂ, ಪ್ರಸ್ತುತ, ಕರ್ನಾಟಕ ರಾಜ್ಯ ಸರ್ಕಾರವು ಅದನ್ನು ಜಾರಿಗೆ ತರಲು ಸಕ್ರಿಯವಾಗಿ ಪ್ರಯತ್ನಿಸುತ್ತಿದೆ.

ತೆಲಂಗಾಣದಲ್ಲಿ ಐಟಿಇಎಸ್ ವಲಯಕ್ಕೆ 4 ವರ್ಷಗಳ ಅವಧಿಗೆ ವಿನಾಯಿತಿ

ಅದೇ ರೀತಿ, ತೆಲಂಗಾಣ ರಾಜ್ಯ ಸರ್ಕಾರವು 1988ರ ತೆಲಂಗಾಣ ಅಂಗಡಿಗಳು ಮತ್ತು ಸ್ಥಾಪನೆ ಕಾಯ್ದೆಯಡಿಯಲ್ಲಿ ಕಾರ್ಮಿಕ ಕಾನೂನುಗಳಿಂದ (ಐಟಿಇಎಸ್) ವಲಯಕ್ಕೆ ವಿನಾಯಿತಿಯನ್ನು ನಾಲ್ಕು ವರ್ಷಗಳ ಅವಧಿಗೆ, ಅಂದರೆ 2028ರ ಮೇ 29ರವರೆಗೆ ವಿಸ್ತರಿಸಿದೆ. ಕಾರ್ಮಿಕ ಕಾನೂನುಗಳಲ್ಲಿನ ಈ ಸಡಿಲಿಕೆಯು ಐಟಿ ಮತ್ತು ಐಟಿಇಎಸ್ ಕಂಪನಿಗಳು ಹೊಂದಿಕೊಳ್ಳುವ ಕೆಲಸದ ಸಮಯವನ್ನು ಹೊಂದಲು ಅವಕಾಶ ಮಾಡಿಕೊಟ್ಟಿತು, ಅಂದರೆ ಕೆಲಸದ ಸಮಯವನ್ನು ಹೆಚ್ಚಿಸುವ ಸೌಮ್ಯೋಕ್ತಿ ಇದರ ಮೂಲ ಉದ್ದೇಶವಾಗಿದೆ.

ವಾರಕ್ಕೆ 70–90 ಗಂಟೆಗಳ ಕೆಲಸದ ಅವಧಿ ಪ್ರತಿಪಾದನೆ

ಭಾರತೀಯ ಕಾರ್ಪೊರೇಟ್‌ನ ಪೋಸ್ಟರ್‌ಬಾಯ್, ಇನ್ಫೋಸಿಸ್ ಸಹ–ಸಂಸ್ಥಾಪಕ, ಬಿಲಿಯನೇರ್ ನಾರಾಯಣ ಮೂರ್ತಿ ಅವರು ವಾರಕ್ಕೆ 70 ಗಂಟೆಗಳ ಕೆಲಸದ ಅವಧಿಯನ್ನು ಪ್ರತಿಪಾದಿಸಿದ್ದರು. ಆ ಪಟ್ಟಿಗೆ ಇತ್ತೀಚೆಗೆ ಸೇರ್ಪಡೆಯಾದವರು ಎಲ್‌ಅಂಡ್‌ಟಿ ಅಧ್ಯಕ್ಷ ಎಸ್.ಎನ್.ಸುಬ್ರಹ್ಮಣ್ಯನ್, ಭಾರತೀಯ ಕಾರ್ಪೊರೇಟ್‌ಗಳ ಮತ್ತೊಬ್ಬ ರಾಜಕೀಯ ಪೋಸ್ಟರ್‌ಬಾಯ್ ಚಂದ್ರಬಾಬು ನಾಯ್ಡು ಅವರು ಕೆಲಸದ ಸಮಯವನ್ನು ಹೆಚ್ಚಿಸುವ ಘೋಷಣೆಗೆ ಸ್ವಲ್ಪ ಮೊದಲು ಎಲ್&ಟಿ ಸುಬ್ರಮಣ್ಯಂ ವಿವಾದ ಸೃಷ್ಟಿಸಿದರು.

ಎಲ್‌ಅಂಡ್‌ಟಿ ಅಧ್ಯಕ್ಷರು ಹೊಸ ವಿವಾದವನ್ನು ಗಮನಿಸಿದಾಗ, ನೌಕರರು ಭಾನುವಾರವೂ ಸೇರಿದಂತೆ ವಾರಕ್ಕೆ 90 ಗಂಟೆಗಳ ಕಾಲ ಕೆಲಸ ಮಾಡಬೇಕು ಎಂದು ಹೇಳಿದರು. ಅವರು ಕೆಲಸಗಾರನಿಗೆ "ನೀವು ಮನೆಯಲ್ಲಿ ಕುಳಿತು ಏನು ಮಾಡುತ್ತೀರಿ? ನಿಮ್ಮ ಹೆಂಡತಿಯನ್ನು ಎಷ್ಟು ಹೊತ್ತು ನೋಡುತ್ತಾ ಕುಳಿತುಕೊಳ್ಳುತ್ತೀರಿ?" ಎಂಬ ಬಂಡವಾಳದ ಪ್ರವೃತ್ತಿಯೊಂದಿಗೆ ಧೈರ್ಯದಿಂದ ಪೋಸ್ ನೀಡಿದರು.

ವೇತನ ಅಸಮಾನತೆಯ ಬಗ್ಗೆ ಮಾತನಾಡುವುದಿಲ್ಲ

ಭಾರತದ ಕಾರ್ಪೊರೇಟ್ ಉದ್ಯಮಿಗಳು ಕೆಲಸದ ಸಮಯವನ್ನು ಹೆಚ್ಚಿಸಬೇಕೆಂದು ಪ್ರತಿಪಾದಿಸಿದ್ದಾರೆ. ಆದರೆ ಅವರಲ್ಲಿ ಯಾರೂ ವೇತನ ಅಂತರದ ಬಗ್ಗೆ ಮಾತನಾಡಿಲ್ಲ ಮತ್ತು ವೇತನವನ್ನು ಕೆಲಸದ ಸಮಯಕ್ಕೆ ಹೊಂದಿಸಿ ಹೆಚ್ಚಿಸುವ ಬಗ್ಗೆ ಪ್ರಸ್ತಾಪಿಸಿಲ್ಲ. ಇದಕ್ಕೆ ಸಂಬಂಧಿತ ಆರೋಗ್ಯ ಅಪಾಯಗಳು ಮತ್ತು ಕಾರ್ಮಿಕರ ಕೆಲಸ–ಜೀವನದಲ್ಲಿ ಉಂಟಾಗುವ ಅಸಮತೋಲನದಲ್ಲಿನ ಅಡಚಣೆಗಳ ಕುರಿತಂತೆ ಮಾತನಾಡಲಿಲ್ಲ ಎಂಬುದನ್ನು ತಿಳಿದುಕೊಳ್ಳಬೇಕು.

ಎಸ್.ಎನ್.ಸುಬ್ರಹ್ಮಣ್ಯನ್ ಅವರು 2024ರ ಹಣಕಾಸು ವರ್ಷದಲ್ಲಿ ರೂ. 51.05 ಕೋಟಿ ಗಳಿಸಿದ್ದಾರೆ ಎಂಬುದು ಕುತೂಹಲಕಾರಿಯಾಗಿದೆ. ಇದು ಎಲ್‌ಅಂಡ್‌ಟಿ ಉದ್ಯೋಗಿಗಳ ಸರಾಸರಿ ವೇತನಕ್ಕಿಂತ ಶೇ. 534.57 ಪಟ್ಟು ಹೆಚ್ಚಾಗಿದೆ, ಇದು ರೂ. 9.55 ಲಕ್ಷ. ಅವರ ಸಂಬಳವು ಹಿಂದಿನ ವರ್ಷಕ್ಕಿಂತ ಶೇ. 43.11ರಷ್ಟು ಹೆಚ್ಚಳ ಕಂಡಿದ್ದರೂ, 2023–24ರ ಎಲ್&ಟಿ ಯ ಸಮಗ್ರ ವಾರ್ಷಿಕ ವರದಿಯ ಪ್ರಕಾರ ಎಲ್&ಟಿ ಉದ್ಯೋಗಿಗಳ ಸರಾಸರಿ ಸಂಭಾವನೆಯಲ್ಲಿ ಕೇವಲ ಶೇ. 1.32ರಷ್ಟು ಹೆಚ್ಚಳ ಕಂಡುಬಂದಿದೆ. ಇದು ಭಾರಿ ವೇತನ ಅಸಮಾನತೆಯನ್ನು ಪ್ರತಿಬಿಂಬಿಸುತ್ತದೆ ಮತ್ತು ಭಾರತದಲ್ಲಿನ ವೈಟ್–ಕಾಲರ್ ಉದ್ಯೋಗ ಉದ್ಯಮದಾದ್ಯಂತ ಈ ಪ್ರವೃತ್ತಿ ಒಂದೇ ಆಗಿರುವಂತೆ ಕಂಡುಬರುತ್ತದೆ. ಕಳೆದ ಐದು ವರ್ಷಗಳಲ್ಲಿ ಭಾರತದ ಪ್ರಮುಖ ಐಟಿ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಾಹಕರ ವೇತನವು ಶೇ. 160ಕ್ಕಿಂತ ಹೆಚ್ಚು ಏರಿಕೆಯಾಗಿದೆ. ಆದರೆ, ಆರಂಭಿಕ ಹಂತದ ಅದೇ ಸಮಯದಲ್ಲಿ ಶೇ 4ಕ್ಕಿಂತ ಕಡಿಮೆ ವೇತನ ಬೆಳವಣಿಗೆಯನ್ನು ಅನುಭವಿಸಿದ್ದಾರೆ.

'ಸಿಇಒ'ಗಳ ಸರಾಸರಿ ವಾರ್ಷಿಕ ವೇತನ ರೂ.84 ಕೋಟಿ!!

2024ರ ಆರ್ಥಿಕ ವರ್ಷದಲ್ಲಿ, ಟಿಸಿಎಸ್, ಇನ್ಫೋಸಿಸ್, ಎಚ್‌ಸಿಎಲ್‌ಟೆಕ್, ವಿಪ್ರೋ ಮತ್ತು ಟೆಕ್ ಮಹೀಂದ್ರಾ ಮುಂತಾದ ಉನ್ನತ ಐಟಿ ಕಂಪನಿಗಳಲ್ಲಿ ಸಿಇಒ'ಗಳ ಸರಾಸರಿ ವಾರ್ಷಿಕ ವೇತನ ಸುಮಾರು ರೂ. 84 ಕೋಟಿಗೆ ಏರಿದೆ. ಇದಕ್ಕೆ ವ್ಯತಿರಿಕ್ತವಾಗಿ, ಹೊಸಬರಿಗೆ ನೀಡಲಾಗುವ ಸರಾಸರಿ ವೇತನವು ಅದೇ ಅವಧಿಯಲ್ಲಿ 3.6 ಲಕ್ಷ ರೂ.ಗಳಿಂದ 4 ಲಕ್ಷ ರೂ.ಗಳಷ್ಟು ಏರಿದೆ, ಇದು ಕೇವಲ ಶೇ. 4ರಷ್ಟು ಹೆಚ್ಚಳವನ್ನು ಮಾತ್ರ ಪ್ರತಿಬಿಂಬಿಸುತ್ತದೆ.

'ಕೆಲಸದ ಸಮಯ ಮತ್ತು ಕೆಲಸ–ಜೀವನ ಸಮತೋಲನ'

"ವಿಶ್ವದಾದ್ಯಂತ ಕೆಲಸದ ಸಮಯ ಮತ್ತು ಕೆಲಸ–ಜೀವನ ಸಮತೋಲನ" ಎಂಬ ಶೀರ್ಷಿಕೆಯ ಕೆಲಸದ ಸಮಯದ ಕುರಿತು ILO ಮೊದಲ ಜಾಗತಿಕ ವರದಿಯನ್ನು ಜನವರಿ 6, 2023ರಂದು ಬಿಡುಗಡೆ ಮಾಡಿತು. ಇದು ಪ್ರಪಂಚದಾದ್ಯಂತ ಕೆಲಸದ ಸಮಯ ಮತ್ತು ಕೆಲಸದ ಸಮಯದ ವ್ಯವಸ್ಥೆಗಳು ಮತ್ತು ಕಾರ್ಮಿಕರ ಕೆಲಸದ–ಜೀವನ ಸಮತೋಲನದ ಮೇಲೆ ಅವುಗಳ ಪರಿಣಾಮಗಳ ಸಮಗ್ರ ವಿಮರ್ಶೆಯನ್ನು ಒದಗಿಸುತ್ತದೆ. ವರದಿಯು, ಕೆಲಸದ ಸಮಯಕ್ಕೆ ಸಂಬಂಧಿಸಿದ ರಾಷ್ಟ್ರೀಯ ಕಾನೂನುಗಳನ್ನು ಒಳಗೊಂಡಿಲ್ಲ. ಆದಾಗ್ಯೂ, ಇದು ಪ್ರಮುಖ ಜಾಗತಿಕ ಮಾದರಿಗಳು ಮತ್ತು ಕೆಲಸದ ಸಮಯ ಮತ್ತು ಕೆಲಸದ ಸಮಯದ ವ್ಯವಸ್ಥೆಗಳಿಗೆ ಸಂಬಂಧಿಸಿದ ಬೆಳವಣಿಗೆಗಳನ್ನು ಪರಿಶೀಲಿಸುತ್ತದೆ ಮತ್ತು ಅಂತರರಾಷ್ಟ್ರೀಯ ಸಾಮಾಜಿಕ ಸಮೀಕ್ಷೆ ಕಾರ್ಯಕ್ರಮ (ISSP) ಕೆಲಸದ ದೃಷ್ಟಿಕೋನಗಳು IV ಮಾಡ್ಯೂಲ್ (2015) ಆಧರಿಸಿ ಕಾರ್ಮಿಕರ ನಿಜವಾದ ಕೆಲಸದ ಸಮಯ ಮತ್ತು ಅವರ ಆದ್ಯತೆಯ ಕೆಲಸದ ಸಮಯದ ನಡುವಿನ ಹೊಂದಾಣಿಕೆಗಳು ಮತ್ತು ಹೊಂದಾಣಿಕೆಗಳ ವಿಶ್ಲೇಷಣೆಯನ್ನು ಮಾಡುತ್ತದೆ.

ಈ ವರದಿಯ ಪ್ರಕಾರ, ಉದ್ಯೋಗಿಗಳಲ್ಲಿ ಆರೋಗ್ಯಕರ ಕೆಲಸ–ಜೀವನ ಸಮತೋಲನವು ಕಾರ್ಮಿಕರು ಮತ್ತು ಉದ್ಯೋಗದಾತರಿಬ್ಬರಿಗೂ ಪ್ರಯೋಜನಕಾರಿಯಾಗಿದೆ ಮತ್ತು ಉದ್ಯಮಗಳಿಗೆ ಹಲವಾರು ಸಕಾರಾತ್ಮಕ ಪರಿಣಾಮಗಳನ್ನು ಒದಗಿಸುತ್ತದೆ. ಕೆಲಸ–ಜೀವನ ಸಮತೋಲನ ನೀತಿಗಳನ್ನು ಜಾರಿಗೆ ತರುವ ಕಂಪನಿಗಳು ಪ್ರಸ್ತುತ ಉದ್ಯೋಗಿಗಳ ಹೆಚ್ಚಿದ ಧಾರಣ, ಸುಧಾರಿತ ನೇಮಕಾತಿ, ಕಡಿಮೆ ಗೈರುಹಾಜರಿ ದರಗಳು ಮತ್ತು ಹೆಚ್ಚಿನ ಉತ್ಪಾದಕತೆಯಿಂದ ಪ್ರಯೋಜನ ಪಡೆಯುತ್ತವೆ.

(ಉಳಿದ ಭಾಗ ಮುಂದಿನ ಸಂಚಿಕೆಯಲ್ಲಿ)


NEW No. MAG(3)/NPP/205/2021-2022
JANASHAKTHI KANNADA VARA PATRIKE July 14-20, 2025 Price: Rs. 10/- Date of Publication: 18 July 2025 RNI No. KARKAN/2006/17926 Posted on 19-07-2025
Posted at BG PSO, BG - 560026 **Posted at Periodical Rate - Rs. 2**

ನೊಬೆಲ್ ಶಾಂತಿ ಪ್ರಶಸ್ತಿ ಯಾರಿಗೆ? ಟ್ರಂಪ್ ಅಥವಾ ಅಲ್ಬನೀಸ್?! "ವಶಪಡಿಸಿಕೊಳ್ಳುವ ಆರ್ಥಿಕತೆಯಿಂದ ನರಮೇಧದ ಆರ್ಥಿಕತೆಯ ಕಡೆಗೆ"

ಫ್ರಾನ್ಸೆಸ್ಕಾ ಅಲ್ಬನೀಸ್ ಅವರು ಪ್ಯಾಲೆಸ್ಟೀನ್‌ನಲ್ಲಿ ಮಾನವ ಹಕ್ಕುಗಳ ಪರಿಸ್ಥಿತಿ ಬಗ್ಗೆ ತನಿಖೆ ನಡೆಸಿ ವರದಿಮಾಡಲು ನೇಮಕವಾದ ವಿಶ್ವಸಂಸ್ಥೆಯ ವಿಶೇಷ ಪರಿಣತಿಯ ವರದಿಗಾರರು. ಪ್ಯಾಲೆಸ್ಟೀನ್‌ನಲ್ಲಿ ಮಾನವ ಹಕ್ಕುಗಳ ಪರಿಸ್ಥಿತಿ ಬಗ್ಗೆ ತಳಮಟ್ಟದಲ್ಲಿ ಸಾಕ್ಷಾತ್ ಪರಿಶೀಲಿಸಿ, ಸಂಬಂಧಪಟ್ಟವರೊಂದಿಗೆ, ಪರಿಣತರೊಂದಿಗೆ ಮಾತನಾಡಿ ಒಟ್ಟು ಅಂದಾಜು ಮಾಡುವ, ಕೈಗೊಳ್ಳಬೇಕಾದ ಸೂಕ್ತ ಕ್ರಮಗಳನ್ನು ಸೂಚಿಸುವ ವಿಶೇಷ ಜವಾಬ್ದಾರಿ ಇಂತಹ ವಿಶೇಷ ವರದಿಗಾರರಿಗೆ ಇರುತ್ತದೆ.

ಅಲ್ಬನೀಸ್ ಇತ್ತೀಚೆಗೆ ಪ್ಯಾಲೆಸ್ಟೀನ್ ಆಕ್ರಮಿತ ಪ್ರದೇಶಗಳಲ್ಲಿ ಮಾನವ ಹಕ್ಕುಗಳ ಪರಿಸ್ಥಿತಿ ಬಗ್ಗೆ ವಿವರವಾದ ವರದಿ ಸಲ್ಲಿಸಿದ್ದು ವಿಶ್ವಸಂಸ್ಥೆ ಅದನ್ನು ಬಿಡುಗಡೆ ಮಾಡಿದೆ. ಅದು ಯುಎಸ್ ಮತ್ತಿತರ ಪಾಶ್ಚಿಮಾತ್ಯ ಸರಕಾರಗಳು, ಕಾರ್ಪೊರೆಟ್‌ಗಳು, ಮಾಧ್ಯಮಗಳಲ್ಲಿ ನಡುಕ ತಂದಿದೆ. ಇಂತಹ ನಡುಕಕ್ಕೆ ಅದರ ತಲೆಬರಹವೇ ಸಾಕು – "ವಶಪಡಿಸಿಕೊಳ್ಳುವ ಆರ್ಥಿಕತೆಯಿಂದ ನರಮೇಧದ ಆರ್ಥಿಕತೆಯ ಕಡೆಗೆ" (From Economy Of Occupation To Economy Of Genocide) ವರದಿಯಲ್ಲಿ ಈ ನರಮೇಧದ ಆರ್ಥಿಕದಲ್ಲಿ ಭಾಗವಹಿಸಿ, ಆಕ್ರಮಿತ ಪ್ಯಾಲೆಸ್ಟೀನ್ ಪ್ರದೇಶಗಳಲ್ಲಿ ಯುದ್ಧಾಪರಾಧಗಳನ್ನು ಮಾಡುತ್ತಾ ಲಾಭ ಗಳಿಸುತ್ತಿರುವ 48 ಕಾರ್ಪೊರೆಟ್‌ಗಳ ಮೇಲೆ ಅಂತರರಾಷ್ಟ್ರೀಯ ಕ್ರಿಮಿನಲ್ ಕೋರ್ಟಿನಲ್ಲಿ (ಐಸಿಸಿ) ವಿಚಾರಣೆ ನಡೆಸಬೇಕು ಎಂದು ಶಿಫಾರಸು ಮಾಡಿದೆ.

ಈ ಪಟ್ಟಿಯಲ್ಲಿ ಲಾಕ್ ಹೀಡ್ ಮಾರ್ಟಿನ್‌ನಂತಹ ಶಸ್ತ್ರಾಸ್ತ್ರ ಕಂಪನಿಗಳಿಂದ ಹಿಡಿದು ಗೂಗಲ್, ಫೇಸ್‌ಬುಕ್, ಮೈಕ್ರೋಸಾಫ್ಟ್, ಅಮೆಜಾನ್, ಐಬಿಎಂ ನಂತಹ ದೈತ್ಯ ಟೆಕ್ ಕಂಪನಿಗಳು ಸೇರಿವೆ. ಇವಲ್ಲದೆ ಈ ಕಂಪನಿಗಳ ಉತ್ಪನ್ನಗಳನ್ನು ನಿರ್ವಹಿಸುವ, ಅವುಗಳಲ್ಲಿ ಭಾರೀ ಹೂಡಿಕೆ ಮಾಡಿರುವ, ಇರಾಕ್ ಯುದ್ಧ (2003) ಸೇರಿದಂತೆ ಹಲವು ಯುದ್ಧಕ್ಷೇತ್ರಗಳಲ್ಲಿ ತಮ್ಮ ಪ್ರಮುಖ ಪಾತ್ರಕ್ಕೆ ಕುಖ್ಯಾತವಾದ ಎರಡು ಕಾರ್ಪೊರೆಟ್‌ಗಳನ್ನು (ಬ್ಲಾಕ್ರಾಕ್ ಮತ್ತು ವ್ಯಾನ್‌ಗಾರ್ಡ್) ಸಹ ಹೆಸರಿಸಲಾಗಿದೆ.



ಎನ್.ಕೆ.ವಸಂತರಾಜ್

ಈ ವರದಿಯು, ಯುದ್ಧಗಳ ಹಿಂದಿರುವ ಕಾರ್ಪೊರೆಟ್ ಆರ್ಥಿಕತೆಯನ್ನು ವಿವರವಾಗಿ ಬಯಲು ಮಾಡಿದೆ. ಬೆಚ್ಚಿ ಬೀಳಿಸುವ ಈ ವರದಿಯ ಸಾರಾಂಶ ಹೀಗಿದೆ:

ಭಾರತ–ಪಾಕಿಸ್ತಾನ ಮತ್ತು ಆಫ್ರಿಕಾ ಮತ್ತಿತರ ಕಡೆ ಯುದ್ಧ ನಿಲ್ಲಿಸಿದ್ದಕ್ಕೆ ನನಗೆ ನೊಬೆಲ್ ಶಾಂತಿ ಪ್ರಶಸ್ತಿ ಸಿಗಬೇಕು ಅಂತ ಯುಎಸ್ ಅಧ್ಯಕ್ಷ ಟ್ರಂಪ್ ಡಂಗುರ ಸಾರುತ್ತಿದ್ದಾರೆ. ಈ ಜಾಗತಿಕ ರಾಜಕೀಯ ಕಾಮಿಡಿ ಸಾಲದು ಅಂತ ಇಸ್ರೇಲ್ ಪ್ರಧಾನಿ ನೇತನ್ಯಾಹು ಮತ್ತು ಪಾಕಿಸ್ತಾನದ ಫೀಲ್ಡ್ ಮಾರ್ಶಲ್ ಮುನೀರ್ ಅದಕ್ಕೆ ತಮ್ಮ ಬಲವಾದ ಶಿಫಾರಸು ಕೊಟ್ಟಿದ್ದಾರೆ! ಈ ಕಾಮಿಡಿ ನೋಡಿಕೊಂಡು ಸುಮ್ಮನಿರಲಾದೆಯೋ ಏನೋ, ಜಗತ್ತಿನಾದ್ಯಂತ ಫ್ರಾನ್ಸೆಸ್ಕಾ ಅಲ್ಬನೀಸ್ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ಸಿಗಬೇಕು ಎಂಬ ಚಳುವಳಿ ಆರಂಭವಾಗಿದೆ. ಯಾರಿವರು ಫ್ರಾನ್ಸೆಸ್ಕಾ ಅಲ್ಬನೀಸ್? ಅವರಿಗ್ಯಾಕೆ ನೊಬೆಲ್ ಶಾಂತಿ ಪ್ರಶಸ್ತಿ ಕೊಡಬೇಕು ಅಂತ ಚಳುವಳಿ ಆರಂಭವಾಗಿದೆ?

"ಈ ವರದಿಯು ಆಕ್ರಮಿತ ಪ್ರದೇಶದಲ್ಲಿ ಪ್ಯಾಲೆಸ್ಟೀನಿಯನ್ನರ ಸ್ಥಳಾಂತರ ಮತ್ತು ಬದಲಿಗೆ ಇಸ್ರೇಲಿಯರ ವಸತಿ ಸ್ಥಾಪಿಸುವ ಇಸ್ರೇಲಿ ವಸತಿ–ವಸಾಹತುಶಾಹಿ ಯೋಜನೆಯನ್ನು (settler-colonial Project) ಬೆಂಬಲಿಸುವ ಕಾರ್ಪೊರೇಟ್ ವ್ಯವಸ್ಥೆಯ ತನಿಖೆ ಮಾಡುತ್ತದೆ. ರಾಜಕೀಯ ನಾಯಕರು ಮತ್ತು ಸರ್ಕಾರಗಳು ತಮ್ಮ ಬಾಧ್ಯತೆಗಳಿಂದ ನುಣುಚಿಕೊಳ್ಳುತ್ತಿದ್ದು, ಹಲವಾರು ಕಾರ್ಪೊರೇಟ್ ಸಂಸ್ಥೆಗಳು ಇಸ್ರೇಲ್‌ನ ಅಕ್ರಮ ವಶಪಡಿಸಿಕೊಳ್ಳುವಿಕೆ, ವರ್ಣಭೇದ ನೀತಿ ಮತ್ತು ಈಗ ನರಮೇಧದ ಆರ್ಥಿಕತೆಯಿಂದ ಲಾಭಗಳಿಸಿವೆ. ಈ ವರದಿಯಿಂದ ಬಹಿರಂಗಪಡಿಸಲಾದ ಈ ಕಂಪನಿಗಳ ಶಾಮೀಲು ಮಂಜುಗಡ್ಡೆಯ ತುದಿಯಾಗಿದೆ; ಈ ಕಂಫನಿಗಳ ಮಾಲಿಕರು, ಕಾರ್ಯನಿರ್ವಾಹಕರು ಸೇರಿದಂತೆ ಖಾಸಗಿ ವಲಯವನ್ನು ಹೊಣೆಗಾರರನ್ನಾಗಿ ಮಾಡದೆ ಅದನ್ನು ಕೊನೆಗೊಳಿಸುವುದು ಸಾಧ್ಯವಿಲ್ಲ. ಅಂತರರಾಷ್ಟ್ರೀಯ ಕಾನೂನು ವಿವಿಧ ಹಂತದ ಜವಾಬ್ದಾರಿಯನ್ನು ಗುರುತಿಸುತ್ತದೆ. ಪ್ರತಿಯೊಂದನ್ನೂ ಪರಿಶೀಲನೆ ಮತ್ತು ಹೊಣೆಗಾರಿಕೆಯನ್ನು ನಿಗದಿಮಾಡುವ ಅಗತ್ಯವಿದೆ, ವಿಶೇಷವಾಗಿ ಈ ಸಂದರ್ಭದಲ್ಲಿ, ಜನರ ಸ್ವ–ನಿರ್ಣಯ ಮತ್ತು ಅಸ್ತಿತ್ವವು ಅಪಾಯದಲ್ಲಿದೆ. ನರಮೇಧವನ್ನು ಕೊನೆಗೊಳಿಸಲು ಮತ್ತು ಅದನ್ನು ಸಾಧ್ಯಮಾಡಿದ ಜಾಗತಿಕ ವ್ಯವಸ್ಥೆಯನ್ನು ಕೆಡವಲು ಇದು ಅಗತ್ಯವಾದ ಹೆಜ್ಜೆಯಾಗಿದೆ."

ವರದಿಯಲ್ಲಿ ಈ 48 ಕಂಪನಿಗಳಲ್ಲಿ ಪ್ರತಿಯೊಂದು ನರಮೇಧದಲ್ಲಿ ಯಾವ ಪಾತ್ರ ವಹಿಸಿದೆಯೆಂದು ತನಿಖೆಯ ಆಧಾರದ ಮೇಲೆ ಮಾಹಿತಿ ನೀಡಲಾಗಿದೆ. ಉದಾ: ಗೂಗಲ್ ಗಾಜಾ ಮತ್ತಿತರ ಪ್ರದೇಶಗಳಲ್ಲಿ ಇಸ್ರೇಲಿ ಡ್ರೋನ್/ಕ್ಷಿಪಣಿ ದಾಳಿಗಳಿಗೆ ಬಲಿಗಳ ತಾಣ ಗುರುತಿಸಿಕೊಟ್ಟಿತು. ಇತ್ಯಾದಿ.

ಈ ವರದಿಯ ನಂತರ ಈ 48 ಕಾರ್ಪೊರೆಟ್‌ಗಳನ್ನು, ಹಿಂದೆ ದಕ್ಷಿಣ ಆಫ್ರಿಕಾದ ಜತೆ ವ್ಯವಹರಿಸುತ್ತಿದ್ದ ಕಂಪನಿಗಳಿಗೆ ಮಾಡಿದಂತೆ, ಬಹಿಷ್ಕಾರ ಚಳುವಳಿ ತೀವ್ರಗೊಳಿಸಬೇಕು ಎಂಬ ಒತ್ತಡ ಬರುತ್ತಿದೆ.

ಸಹಜವಾಗಿಯೇ ಟ್ರಂಪ್ ಮತ್ತು ನೇತನ್ಯಾಹು ಸರಕಾರಗಳ, ದೈತ್ಯ ಕಾರ್ಪೊರೆಟ್‌ಗಳ ಆಕ್ರೋಶಕ್ಕೆ ಅಲ್ಬನೀಸ್ ಗುರಿಯಾಗಿದ್ದಾರೆ. ಯುಎಸ್ ವಿದೇಶ ಕಾರ್ಯದರ್ಶಿ, ಅಲ್ಬನೀಸ್ ಮೇಲೆ "ಜ್ಯೂ–ದ್ವೇಷ ಹರಡುವ ಮತ್ತು ಯುಎಸ್ ಹಾಗೂ ಇಸ್ರೇಲ್‌ಗಳ ವಿರುದ್ಧ ರಾಜಕೀಯ ಮತ್ತು ಆರ್ಥಿಕ ಯುದ್ಧ ಮಾಡುತ್ತಿರುವ" ಆಪಾದನೆ ಹೊರಿಸಿ, ಅವರ ಮೇಲೆ 'ದಿಗ್ಬಂಧನ'ದ ಘೋಷಣೆ ಮಾಡಿದ್ದಾರೆ. ಈ 'ದಿಗ್ಬಂಧನ'ದ ಪರಿಣಾಮವೆಂದರೆ, ಅವರು ಮತ್ತು ಅವರ ಕುಟುಂಬದ ಯಾರೂ





ಯುಎಸ್‌ಗೆ ಪ್ರಯಾಣಿಸುವಂತಿಲ್ಲ. ಯುಎಸ್‌ನಲ್ಲಿ ಅವರಿಗೆ ಆಸ್ತಿ ಇದ್ದರೆ ಅದನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ನೇತನ್ಯಾಹು ಅವರು 'ಗಾಜಾ ನರಮೇಧದ ಅಪರಾಧಿ' ಎಂದು ತೀರ್ಪಿತ್ತ ಐಸಿಸಿಯ ನ್ಯಾಯಾಧೀಶರು ಮತ್ತು ಮುಖ್ಯಸ್ಥರ ಮೇಲೆ ಈಗಾಗಲೇ ಯುಎಸ್ 'ದಿಗ್ಬಂಧನ' ಹೇರಿದ್ದರಿಂದ ಇದೇನು ಅಚ್ಚರಿಯ ವಿಷಯ ಅಥವಾ ಅನಿರೀಕ್ಷಿತವಾಗಿರಲಿಲ್ಲ. ಇಸ್ರೇಲ್ ಸರಕಾರ ಅಲ್ಬನೀಸ್ ಅವರ ಮೇಲೆ ಈಗಾಗಲೇ ನಿಷೇಧ ಹೇರಿದೆ. ಈ ನಿಷೇಧವನ್ನು ಅವರು 'ಗಾಜಾದಲ್ಲಿ ಇಸ್ರೇಲ್ ನರಮೇಧ ನಡೆಸುತ್ತಿದೆ' ಎಂದು ಮಾರ್ಚ್ 2024ರಲ್ಲಿ ವರದಿ ಕೊಟ್ಟಾಗ ಹೇರಿತ್ತು.

ಇಟಲಿಯ ಕಾನೂನು ಪರಿಣತರಾದ ಅಲ್ಬನೀಸ್ 2022ರಿಂದ ಪ್ಯಾಲೆಸ್ಟೀನ್ ಮಾನವ ಹಕ್ಕು ವಿಶೇಷ ವರದಿಗಾರರಾಗಿದ್ದು, ಗಾಜಾದ ನರಮೇಧದ ವಿರುದ್ಧ ದಿಟ್ಟ ಮತ್ತು ಗಟ್ಟಿದನಿ ಎತ್ತಿದ್ದಾರೆ. ಹಾಗಾಗಿಯೇ ಅಲ್ಬನೀಸ್ ಅವರನ್ನು ನೊಬೆಲ್ ಶಾಂತಿ ಪ್ರಶಸ್ತಿಗೆ ಶಿಫಾರಸು ಮಾಡುವ ಜಾಗತಿಕ ಚಳುವಳಿ ಹುಟ್ಟಿಕೊಂಡಿದೆ. ಈ ಚಳುವಳಿ ಪ್ರಶಸ್ತಿ ಕೊಡಿಸಲು ಸಫಲವಾಗುತ್ತೋ ಇಲ್ಲವೋ, ಆದರೆ ಈಗಾಗಲೇ ಗಾಜಾ ನರಮೇಧ ನಿಲ್ಲಿಸುವಲ್ಲಿ ಟ್ರಂಪ್ 'ಶಾಂತಿಪ್ರಿಯತೆ' ಮತ್ತು ಯುಎಸ್ ಸಾಮ್ರಾಜ್ಯಶಾಹಿ ಗೋಸುಂಬೆತನವನ್ನು ಪೂರ್ಣವಾಗಿ ಬಯಲುಗೊಳಿಸುತ್ತಿದೆ.

ವಿಶೇಷವಾಗಿ, ಯುದ್ಧವಿರಾಮ ಒಪ್ಪಂದವನ್ನು ಇಸ್ರೇಲ್ ಮುರಿದಿರುವುದು ಮತ್ತು ವಿಶ್ವಸಂಸ್ಥೆಯ ಪರಿಹಾರ ಸಂಸ್ಥೆಯನ್ನು ನಿಷೇಧಿಸಿ "ಗಾಜಾ ಮಾನವೀಯ ಫೌಂಡೇಶನ್" ಆಹಾರ ಮತ್ತು ಇತರ ಅಗತ್ಯಗಳನ್ನು ಪೂರೈಕೆಯಲ್ಲಿ ಪೂರ್ಣ ವೈಫಲ್ಯಗಳು ದಿನೇ ದಿನೇ ಈ ಗೋಸುಂಬೆತನವನ್ನು ಬಯಲು ಮಾಡುತ್ತಿದೆ. "ಗಾಜಾ ಮಾನವೀಯ ಫೌಂಡೇಶನ್" ಆಹಾರ ವಿತರಣೆ ಕೇಂದ್ರಗಳಿಗೆ ಬಂದ ಪ್ಯಾಲೆಸ್ಟೀನ್‌ರನ್ನು ಇಸ್ರೆಲಿ ಮಿಲಿಟರಿ ಗುರಿಯಿಟ್ಟು ಕೊಲ್ಲುವ ವರದಿಗಳು ಬರುತ್ತಿವೆ. ಜೂನ್ ಮತ್ತು ಜುಲೈನಲ್ಲಿ ಈ ವರೆಗೆ ಕನಿಷ್ಠ ಇಂತಹ 800 ಕೊಲೆಗಳೂ ನಡೆದಿವೆ. ಇನ್ನೂ ನಡೆಯುತ್ತಿದೆ. "ಹಸಿವಿನಿಂದ ಸಾಯಿರಿ ಅಥವಾ ಗುಂಡಿನಿಂದ ಸಾಯಿರಿ' ಎಂಬ ತಂತ್ರ ವನ್ನು ಇಸ್ರೇಲಿ ಸರಕಾರ ಮತ್ತು ಮಿಲಿಟರಿ ಅನುಸರಿಸುತ್ತಿದೆ. ಈ ಫೌಂಡೇಶನ್ ಅನ್ನು ನಿಷೇಧಿಸಬೇಕು ಎಂದು 180 ಜಾಗತಿಕ ಮಾನವೀಯ ನೆರವು ಸಂಸ್ಥೆಗಳೂ ಹೇಳಿಕೆ ನೀಡಿವೆ. ವಿಶ್ವಸಂಸ್ಥೆಯ ಪರಿಹಾರ ಸಂಸ್ಥೆ ಮತ್ತು ಮಹಾಕಾರ್ಯದರ್ಶಿಗಳು ಸಹ ಫೌಂಡೇಶನ್ ಅನ್ನು ಟೀಕಿಸಿದ್ದಾರೆ. ಆದರೂ ಇದು ಮುಂದುವರೆದಿದೆ. ಟ್ರಂಪ್ ಮತ್ತು ಯುಎಸ್ ಸರಕಾರ ಇದರ ಬಗ್ಗೆ ಮೌನವಾಗಿದೆ. ಆದರೆ ತೀವ್ರ ಅಪಾಯವನ್ನು ಲೆಕ್ಕಿಸದೆ ಇದನ್ನು ಬಯಲಿಗೆಳೆದ ಅಲ್ಬನೀಸ್ ವರದಿಯ ವಿರುದ್ಧ ಮಿಂಚಿನ ಕ್ರಮ ತೆಗೆದುಕೊಂಡಿದ್ದಾರೆ.

ನೊಬೆಲ್ ಶಾಂತಿ ಪ್ರಶಸ್ತಿಯನ್ನು ಯಾರಿಗೆ ಕೊಡಬೇಕು – ಟ್ರಂಪ್ ಅಥವಾ ಅಲ್ಬನೀಸ್?

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**